## ಸೋಮವಾರ, ೧೬ನೇ ಡಿಸೆಂಬರ್, ೧೯೪೬

ಭಾರತದ ಸಂವಿಧಾನ ರಚನಾಸಭೆಯು ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ ಗೌರವಾನ್ವಿತ ಡಾ. ರಾಜೇಂದ್ರ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಅಪರಾಹ್ನ ೩ ಘಂಟೆಗೆ ಸಭೆ ಸೇರಿತು.

**ನಿರ್ಣಯ ಆರ್‌ಇ : ಗುರಿಗಳು ಮತ್ತು ಉದ್ದೇಶಗಳು (ಮುಂದುವರಿದದ್ದು)**

**ಮಾನ್ಯ ಅಧ್ಯಕ್ಷರು :** ೧೩ನೇ ಡಿಸೆಂಬರ್‌ನಲ್ಲಿ ಮಂಡಿಸಿದ ನಿರ್ಣಯದ ಮೇಲೆ ಮುಂದಿನ ಚರ್ಚೆಗಳನ್ನು ನಡೆಸಲು ನಾವೀಗ ಮುಂದೆ ಸಾಗೋಣ. ತಿದ್ದುಪಡಿಗಳ ಸಂಖ್ಯೆ ಬಹಳ ಹೆಚ್ಚಾಗಿದೆ. ಅವುಗಳಲ್ಲಿ ಕೆಲವನ್ನು ಮಂಡಿಸಲಾಗುವುದಿಲ್ಲ ಎಂದು ನನಗೆ ತಿಳಿದುಬಂದಿದೆ. ಡಾ. ಜಯಕರ್ ಅವರನ್ನು ತಮ್ಮ ತಿದ್ದುಪಡಿಯನ್ನು ಮಂಡಿಸಲು ಕೋರುತ್ತೇನೆ.

**ರೈಟ್ ಆನರಬಲ್ ಡಾ. ಎಮ್.ಆರ್. ಜಯಕರ್** (ಬಾಂಬೆ : ಸಾಮಾನ್ಯ) : ಮಾನ್ಯ ಅಧ್ಯಕ್ಷರೇ ಮತ್ತು ಸ್ನೇಹಿತರೆ, ನನ್ನ ತಿದ್ದುಪಡಿಯನ್ನು ಮಂಡಿಸುವ ಮೊದಲು, ನಿರ್ಣಯವನ್ನು ಮಂಡಿಸುವಾಗ ಪಂಡಿತ್ ಜವಾಹರಲಾಲ್ ನೆಹರು ಅವರು ಮಾಡಿದ ಅತ್ಯುತ್ತಮ ಭಾಷಣಕ್ಕೆ ಅಭಿನಂದನೆಗಳನ್ನು ಸಲ್ಲಿಸಲು ಕೆಲವು ಮಾತುಗಳನ್ನು ಆಡಲು ಬಯಸುತ್ತೇನೆ. ಅದರ ಸ್ಪಷ್ಟತೆ, ವಿನಯ ಮತ್ತು ಘನತೆ ಬಹಳ ಪರಿಣಾಮಕಾರಿಯಾಗಿದ್ದವು. ಆ ಮಾತುಗಳನ್ನು ಕೇಳುವಾಗ ನನ್ನ ಆಲೋಚನೆಗಳು ಹಳೆಯ ದಿನಗಳ ಕಡೆಗೆ ಸಾಗಿದವು. ಇಲ್ಲಿಂದ ಕೆಲವೇ ಗಜಗಳ ದೂರದಲ್ಲಿ ಅವರ ವಿಖ್ಯಾತ ತಂದೆಯವರ ಮಾರ್ಗದರ್ಶನ ಮತ್ತು ನಾಯಕತ್ವದ ಆಶ್ರಯದಲ್ಲಿ ನಾವು ಆಗ ಶಾಸನರಚನೆಯ ಸೆಣಸಾಟವನ್ನು ನಡೆಸುತ್ತಿದ್ದೆವು. ಪ್ರಸ್ತುತ ಸಭೆಯ ಘನತೆಯಲ್ಲಿ ನಿಂತು ಹಿಂತಿರುಗಿ ನೋಡಿದಾಗ ಅವು ಎಷ್ಟು ಪುಟ್ಟವಾಗಿ ಮತ್ತು ಅವಾಸ್ತವಿಕವಾಗಿ ಕಾಣುತ್ತವೆ. ಪಂಡಿತ್ ಮೋತಿಲಾಲ್ ನೆಹರು ಅವರು ಬಹಳ ಅದೃಷ್ಟಶಾಲಿ ಎಂದು ನಾನು ಯಾವಾಗಲೂ ಪರಿಗಣಿಸುತ್ತಿದ್ದೆ. ಯಾವ ಅರ್ಥದಲ್ಲಿ ಎಂದರೆ ಅವರಿಗೆ ಇಬ್ಬರು ಮಕ್ಕಳಿದ್ದು, ಅವರ ಮರಣಾನಂತರ ಅವರಿಬ್ಬರೂ ಬಹಳ ಪ್ರಖ್ಯಾತರಾದರು (ಹರ್ಷೋದ್ಗಾರಗಳು) – ಪಂಡಿತ್ ಜವಾಹರಲಾಲ್ ನೆಹರು, ಪ್ರಸ್ತುತ ಸಭೆಯ ಮಾರ್ಗದರ್ಶಕ ಆತ್ಮ ಮತ್ತು ಆ ವಿಖ್ಯಾತ ಮಹಿಳೆ ನ್ಯೂಯಾರ್ಕಿನ ಯು. ಎನ್. ಓ, ನಲ್ಲಿ ತಮ್ಮ ಸಾಧನೆಯ ಅನಂತರ ಹಿಂತಿರುಗುವ ಅವರನ್ನು ಸ್ವಾಗತಿಸಲು ನಾವೆಲ್ಲ ಕಾಯುತ್ತಿದ್ದೇವೆ.

ನನ್ನ ತಿದ್ದುಪಡಿಯ ಷರತ್ತುಗಳನ್ನು ನಾನು ಓದುವ ಮೊದಲು, ಅವರ ಉದ್ದೇಶಗಳ ಬಗೆಗೆ ಉದ್ಭವಿಸಿರುವ ಕೆಲವು ತಪ್ಪುಗ್ರಹಿಕೆಗಳನ್ನು ನಿವಾರಿಸಲು ಬಯಸುತ್ತೇನೆ. ಅನೇಕ ಪ್ರಖ್ಯಾತ ಮತ್ತು ಪ್ರೀತಿಪಾತ್ರ ಸ್ನೇಹಿತರು ನನ್ನ ಬಳಿಗೆ ಬಂದು ನಾನು ಈ ತಿದ್ದುಪಡಿಯನ್ನು ಮಂಡಿಸಬಾರದಿತ್ತು ಎಂದು ಶ್ರದ್ಧಾಪೂರ್ವಕವಾಗಿ ನನಗೆ ಹೇಳಿದರು. ಈ ತಿದ್ದುಪಡಿಯನ್ನು ಮಂಡಿಸುವಲ್ಲಿ ನನ್ನ ಕಾರಣಗಳನ್ನು ಕುರಿತು ಇರುವ ಎಲ್ಲ ತಪ್ಪುಗ್ರಹಿಕೆಗಳನ್ನು ನಿವಾರಿಸಲು ನಾನು ಬಯಸುತ್ತೇನೆ. ಅದು ಈ ಸಭೆಯನ್ನು ಇಬ್ಭಾಗ ಮಾಡುತ್ತದೆ ಎನ್ನಲಾಗಿದೆ, ಪ್ರಸ್ತುತ ಸಮಯದಲ್ಲಿ ಅದು ಒಂದು ಕೆಟ್ಟ ಕಾರ್ಯತಂತ್ರವಾಗುತ್ತದೆ. ನನ್ನ ಭಾಷಣವನ್ನು ಕೇಳಿದಾಗ, ಈ ಸ್ನೇಹಿತರು ಅಂದುಕೊಂಡ ರೀತಿಯಲ್ಲಿ ಇಬ್ಭಾಗವನ್ನು ಉಂಟುಮಾಡುವುದು ನನ್ನ ಗೊತ್ತುವಳಿಯ ಉದ್ದೇಶವಾಗಿಲ್ಲ ಎನ್ನುವುದನ್ನು ನೀವು ಒಪ್ಪುತ್ತೀರಿ ಎಂದು ನಾನು ಭಾವಿಸುತ್ತೇನೆ. ನಾನು ಉದ್ದೇಶಪೂರ್ವಕವಾಗಿಯೇ ಮುಸ್ಲಿಮ್ ಲೀಗ್ ಅನ್ನು ಒಲಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ ಎಂದು ಬೇರೆ ಕೆಲವರು ಹೇಳಿದ್ದಾರೆ. ಈ

ಸಭೆಯ ಕೆಲಸವನ್ನು ಯಶಸ್ವಿಯಾಗಿ ಮಾಡುವ ಉದ್ದೇಶಕ್ಕೆ ಅಗತ್ಯವಾಗಿದ್ದರೆ ಅದರಲ್ಲೇನು ಹಾನಿ ನನಗೆ ಕಾಣಿಸುವುದಿಲ್ಲ. ಒಬ್ಬ ಸ್ನೇಹಿತರು ಎಲ್ಲಿಯವರೆಗೆ ಹೋಗಿದ್ದಾರೆಂದರೆ ಜಗತ್ತಿನಲ್ಲಿರುವ ಎಲ್ಲ ಜನರ ಪೈಕಿ ಶ್ರೀ ಚರ್ಚಿಲ್ ಅವರನ್ನು ನಾನು ಬೆಂಬಲಿಸುತ್ತಿದ್ದೇನೆ ಎಂದು ಹೇಳುತ್ತಿದ್ದಾರೆ; ದುಂಡು ಮೇಜಿನ ಪರಿಷತ್ತಿನ ಸಮಿತಿಯಲ್ಲಿ ನನ್ನ ಪಾಟಿಸವಾಲಿನಲ್ಲಿ ಅವರ ಬಣ್ಣ ಬಯಲು ಮಾಡಲು ನಾನು ಪ್ರಯತ್ನಿಸಿದ್ದೆ. ಅಂತಹ ವ್ಯಕ್ತಿ ಅವರು. ಯಾವುದೇ ಕಾರಣಕ್ಕೂ ಶ್ರೀ ಚರ್ಚಿಲ್ ಅವರನ್ನು ನಾನು ಬೆಂಬಲಿಸುವ ಸಾಧ್ಯತೆಯೇ ಇಲ್ಲ. ನನ್ನ ಜೀವನ ಪೂರ್ತಿ ಹಿಂದೂಗಳ ಹಿತಾಸಕ್ತಿಗಳ ಸಮರ್ಥನಾಗಿದ್ದ ನಾನು ಈಗ ಮುಸ್ಲಿಮರನ್ನು ಬೆಂಬಲಿಸಲು ಮತ್ತು ಸಂತೈಸಲು ಉದ್ದೇಶಿಸಿರುವುದಾಗಿ ಕೆಲವು ಸ್ನೇಹಿತರು ನನ್ನ ಮರ್ಮವನ್ನು ಸ್ಪರ್ಶಿಸಿದ್ದಾರೆ. ಅದಕ್ಕೆ ಉತ್ತರವಾಗಿ ಅವೆರಡರ ನಡುವೆ ಯಾವುದೇ ಸಂಘರ್ಷವು ನನಗೆ ಕಾಣುತ್ತಿಲ್ಲ ಎಂದು ಹೇಳಿದೆ. ಹಿಂದೂಗಳ ಹಿತಾಸಕ್ತಿಗಳನ್ನು ನಾನು ಬೆಂಬಲಿಸುತ್ತಿದ್ದೇನೆ ಎಂಬ ಕಾರಣಕ್ಕೆ ಇನ್ನೊಂದು ಸಮುದಾಯದ ನ್ಯಾಯಯುತ ಹಕ್ಕುಗಳೆಂದು ನಾನು ಯಾವುದನ್ನು ಪರಿಗಣಿಸುತ್ತೇನೋ ಅವುಗಳನ್ನು ತುಳಿದುಹಾಕಬೇಕು ಎಂದು ಅರ್ಥವಲ್ಲ. ಈ ತಿದ್ದುಪಡಿಯನ್ನು ಸೂಚಿಸುತ್ತಿರುವುದರಲ್ಲಿ ನನ್ನ ನಿಜವಾದ ಉದ್ದೇಶವೆಂದರೆ ಈ ಸಭೆಯ ಕೆಲಸವನ್ನು ಹತಾಶೆಯಿಂದ ಸಂರಕ್ಷಿಸುವುದು. ಇಲ್ಲಿ ನಾವು ಮಾಡಲಿರುವ ಎಲ್ಲ ಕೆಲಸಗಳೂ ನಿಷ್ಫಲವಾಗುವ ಅಪಾಯದ ಸಮೀಪದಲ್ಲಿವೆ ಎನ್ನುವುದು ನನ್ನ ಆತಂಕ. ನಮ್ಮ ಹಾದಿಯಲ್ಲಿರುವ ಒಂದೆರಡು ಕಷ್ಟಗಳನ್ನು ನಿರ್ಲಕ್ಷಿಸುವ ಮೂಲಕ ಈ ಸಂವಿಧಾನ ರಚನಾಸಭೆಯ ಕೆಲಸವು ನಿರರ್ಥಕವಾಗುವಂತೆ ಮಾಡಬಾರದು ಎಂದು ನಾನು ಆತಂಕಕ್ಕೊಳಗಾಗಿದ್ದೇನೆ. ಒಬ್ಬರು ಸ್ನೇಹಿತರು ಹೇಳಿದರು: 'ನೀವು ಕಾಂಗ್ರೆಸ್ ಟಿಕೆಟ್ ಮೇಲೆ ಚುನಾಯಿತರಾಗಿದ್ದೀರಿ.' ಆ ಕ್ರಮದ ಔದರ್ಯವನ್ನು ನಾನು ಮಾನ್ಯ ಮಾಡುತ್ತೇನೆ. ಆ ಆಹ್ವಾನ ಬಂದಾಗ ವೈಯಕ್ತಿಕ ಅನನುಕೂಲದ ನಡುವೆಯೂ ನಾನು ಅದನ್ನು ಒಪ್ಪಿಕೊಂಡೆ. ಆದರೆ ಆ ಕ್ರಮದ ಕರ್ತವ್ಯಭಾರದ ಅರ್ಥವು ನನ್ನ ಸೇವೆಯು ಸದಾ ಜನಪ್ರಿಯತೆಯ ಮಾರ್ಗವನ್ನು ಹಿಡಿಯಬೇಕು ಎಂದಾದರೆ (ಪ್ರತಿ ಹಂತದಲ್ಲೂ ಅದನ್ನು ಕೇಳುವ ಹಕ್ಕು ನಿಮಗಿದೆ) ಆ ಕ್ಷಮಿಸಿ ಅದು ಸಾಧ್ಯವಿಲ್ಲ ಎಂದು ನಾನು ಹೇಳುತ್ತೇನೆ. ನನಗೆ ಸಾಧ್ಯವಾದಷ್ಟು ಸಹಕಾರ ಮತ್ತು ಸೇವೆಯನ್ನು ನಿಮಗೆ ಸಲ್ಲಿಸಲು ನಾನು ಇಲ್ಲಿದ್ದೇನೆ. ಆದರೆ ಅಂತಹ ಸೇವೆಯು ಸದಾ ನಿಮಗೆ ಇಷ್ಟವಾದ ಒಂದು ರೂಪದಲ್ಲಿರುತ್ತದೆ ಎಂದು ನಾನು ಖಾತರಿ ನೀಡಲಾರೆ. ಅದು ಕೆಲವು ಸಲ ನೋವಿನಿಂದ ಕೂಡಿದ ರೂಪವನ್ನು ತಳೆಯಬಹುದು, ಉದಾ. ಮಾರ್ಗದಲ್ಲಿರುವ ಕೆಲವು ಗುಂಡಿಗಳು ಮತ್ತು ಕಷ್ಟಗಳ ಕಡೆಗೆ ನಿಮ್ಮ ಗಮನ ಸೆಳೆಯಬಹುದು.

ಮಾನ್ಯರೆ, ನಾನು ಹೇಳಲಿರುವ ಅಂಶಗಳು ಎರಡು ಬಗೆಯಾಗಿವೆ. ಮೊದಲನೆಯದು ಶುದ್ಧವಾಗಿ ಕಾನೂನಿನ ಅಂಶ. ಅದನ್ನು ಮಂಡಿಸಿದ ಅನಂತರ ಅಧ್ಯಕ್ಷ ಪೀಠದಲ್ಲಿರುವ ನಿಮ್ಮ ಚಿತ್ತಕ್ಕೆ ಬಿಡುತ್ತೇನೆ ಮಾನ್ಯರೆ, ಮತ್ತು ಸಾಂವಿಧಾನಿಕ ಸಲಹೆಗಾರರಿಗೆ ಬಿಡುತ್ತೇನೆ. ಅಪಾರ ಸಾಂವಿಧಾನಿಕ ಜ್ಞಾನವುಳ್ಳ ವ್ಯಕ್ತಿಯೆಂದು ಕಳೆದ ೧೦ ವರ್ಷದಿಂದ ನಾನು ಅವರನ್ನು ಬಲ್ಲೆ. ಅವರು ನಡವಳಿಕೆಯಲ್ಲಿ ಋಜುತ್ವವುಳ್ಳವರು ಮತ್ತು ಕಡು ಶಿಸ್ತಿನ ಸ್ವಾತಂತ್ರ್ಯವುಳ್ಳವರು. ಈ ಸ್ಥಳದಲ್ಲಿ ನಿಂತು ಹಾಗೆ ಹೇಳಬಹುದಾದರೆ, ಸರ್ ಬಿ.ಎನ್. ರಾವ್ ಅಂತಹವರ ನೆರವು ನಮಗೆ ದೊರಕಿರುವುದು ಒಂದು ಅನುಕೂಲವೇ ಆಗಿದೆ. ಮಾನ್ಯರೆ, ಇಂದು ನಾನು ನಿಮ್ಮ ಮುಂದೆ ಮಂಡಿಸುತ್ತಿರುವ ಅಂಶವು ಅವರ ಅತ್ಯುತ್ತಮ ಲಕ್ಷ್ಯಕ್ಕೆ ಪಾತ್ರವಾಗುತ್ತದೆ ಎನ್ನುವುದರಲ್ಲಿ ನನಗೆ ಅನುಮಾನವೇ ಇಲ್ಲ. ಇದನ್ನು ಒಂದು ಕ್ರಿಯಾಲೋಪವಾಗಿ ಎತ್ತಲು ನಾನು ಬಯಸುವುದಿಲ್ಲ, ಆದರೆ ನಮ್ಮ ಹಾದಿಯಲ್ಲಿನ ಒಂದು ಕಾನೂನಿನ ತೊಡಕನ್ನು ಸೂಚಿಸುತ್ತಿದೆ ಎಂದು ಈಗ ನಾನು ಎತ್ತುತ್ತಿದ್ದೇನೆ. ನಿಮ್ಮ ಸುಪರ್ದಿನಲ್ಲಿರುವ ಸಮಯದಲ್ಲಿ ಅದನ್ನು ನೀವು ಜಾಗರೂಕತೆಯಿಂದ ಪರಿಗಣಿಸುತ್ತೀರಿ ಮತ್ತು ನಿಮ್ಮ ಆಯ್ಕೆಯ ನಿರ್ಣಯವನ್ನು ಕೊಡುತ್ತೀರಿ ಎಂಬ ವಿಷಯದಲ್ಲಿ ನನಗೆ ಯಾವುದೇ ಅನುಮಾನವಿಲ್ಲ. ನಾನು ಎತ್ತಲು ಉದ್ದೇಶಿಸಿರುವ ಅಂಶ ಏನೆಂದರೆ ಸಂವಿಧಾನ ರಚನಾಸಭೆಯ ಈ ಪೂರ್ವಭಾವಿ

ಸಭೆಯ ಕೆಲಸವನ್ನು ಯಶಸ್ವಿಯಾಗಿ ಮಾಡುವ ಉದ್ದೇಶಕ್ಕೆ ಅಗತ್ಯವಾಗಿದ್ದರೆ ಅದರಲ್ಲೇನು ಹಾನಿ ನನಗೆ ಕಾಣಿಸುವುದಿಲ್ಲ. ಒಬ್ಬ ಸ್ನೇಹಿತರು ಎಲ್ಲಿಯವರೆಗೆ ಹೋಗಿದ್ದಾರೆಂದರೆ ಜಗತ್ತಿನಲ್ಲಿರುವ ಎಲ್ಲ ಜನರ ಪೈಕಿ ಶ್ರೀ ಚರ್ಚಿಲ್ ಅವರನ್ನು ನಾನು ಬೆಂಬಲಿಸುತ್ತಿದ್ದೇನೆ ಎಂದು ಹೇಳುತ್ತಿದ್ದಾರೆ; ದುಂಡು ಮೇಜಿನ ಪರಿಷತ್ತಿನ ಸಮಿತಿಯಲ್ಲಿ ನನ್ನ ಪಾಟಿಸವಾಲಿನಲ್ಲಿ ಅವರ ಬಣ್ಣ ಬಯಲು ಮಾಡಲು ನಾನು ಪ್ರಯತ್ನಿಸಿದ್ದೆ. ಅಂತಹ ವ್ಯಕ್ತಿ ಅವರು. ಯಾವುದೇ ಕಾರಣಕ್ಕೂ ಶ್ರೀ ಚರ್ಚಿಲ್ ಅವರನ್ನು ನಾನು ಬೆಂಬಲಿಸುವ ಸಾಧ್ಯತೆಯೇ ಇಲ್ಲ. ನನ್ನ ಜೀವನ ಪೂರ್ತಿ ಹಿಂದೂಗಳ ಹಿತಾಸಕ್ತಿಗಳ ಸಮರ್ಥನಾಗಿದ್ದ ನಾನು ಈಗ ಮುಸ್ಲಿಮರನ್ನು ಬೆಂಬಲಿಸಲು ಮತ್ತು ಸಂತೈಸಲು ಉದ್ದೇಶಿಸಿರುವುದಾಗಿ ಕೆಲವು ಸ್ನೇಹಿತರು ನನ್ನ ಮರ್ಮವನ್ನು ಸ್ಪರ್ಶಿಸಿದ್ದಾರೆ. ಅದಕ್ಕೆ ಉತ್ತರವಾಗಿ ಅವೆರಡರ ನಡುವೆ ಯಾವುದೇ ಸಂಘರ್ಷವು ನನಗೆ ಕಾಣುತ್ತಿಲ್ಲ ಎಂದು ಹೇಳಿದೆ. ಹಿಂದೂಗಳ ಹಿತಾಸಕ್ತಿಗಳನ್ನು ನಾನು ಬೆಂಬಲಿಸುತ್ತಿದ್ದೇನೆ ಎಂಬ ಕಾರಣಕ್ಕೆ ಇನ್ನೊಂದು ಸಮುದಾಯದ ನ್ಯಾಯಯುತ ಹಕ್ಕುಗಳೆಂದು ನಾನು ಯಾವುದನ್ನು ಪರಿಗಣಿಸುತ್ತೇನೋ ಅವುಗಳನ್ನು ತುಳಿದುಹಾಕಬೇಕು ಎಂದು ಅರ್ಥವಲ್ಲ. ಈ ತಿದ್ದುಪಡಿಯನ್ನು ಸೂಚಿಸುತ್ತಿರುವುದರಲ್ಲಿ ನನ್ನ ನಿಜವಾದ ಉದ್ದೇಶವೆಂದರೆ ಈ ಸಭೆಯ ಕೆಲಸವನ್ನು ಹತಾಶೆಯಿಂದ ಸಂರಕ್ಷಿಸುವುದು. ಇಲ್ಲಿ ನಾವು ಮಾಡಲಿರುವ ಎಲ್ಲ ಕೆಲಸಗಳೂ ನಿಷ್ಫಲವಾಗುವ ಅಪಾಯದ ಸಮೀಪದಲ್ಲಿವೆ ಎನ್ನುವುದು ನನ್ನ ಆತಂಕ. ನಮ್ಮ ಹಾದಿಯಲ್ಲಿರುವ ಒಂದೆರಡು ಕಷ್ಟಗಳನ್ನು ನಿರ್ಲಕ್ಷಿಸುವ ಮೂಲಕ ಈ ಸಂವಿಧಾನ ರಚನಾಸಭೆಯ ಕೆಲಸವು ನಿರರ್ಥಕವಾಗುವಂತೆ ಮಾಡಬಾರದು ಎಂದು ನಾನು ಆತಂಕಕ್ಕೊಳಗಾಗಿದ್ದೇನೆ. ಒಬ್ಬರು ಸ್ನೇಹಿತರು ಹೇಳಿದರು: 'ನೀವು ಕಾಂಗ್ರೆಸ್ ಟಿಕೆಟ್ ಮೇಲೆ ಚುನಾಯಿತರಾಗಿದ್ದೀರಿ.' ಆ ಕ್ರಮದ ಔದರ್ಯವನ್ನು ನಾನು ಮಾನ್ಯ ಮಾಡುತ್ತೇನೆ. ಆ ಆಹ್ವಾನ ಬಂದಾಗ ವೈಯಕ್ತಿಕ ಅನನುಕೂಲದ ನಡುವೆಯೂ ನಾನು ಅದನ್ನು ಒಪ್ಪಿಕೊಂಡೆ. ಆದರೆ ಆ ಕ್ರಮದ ಕರ್ತವ್ಯಭಾರದ ಅರ್ಥವು ನನ್ನ ಸೇವೆಯು ಸದಾ ಜನಪ್ರಿಯತೆಯ ಮಾರ್ಗವನ್ನು ಹಿಡಿಯಬೇಕು ಎಂದಾದರೆ (ಪ್ರತಿ ಹಂತದಲ್ಲೂ ಅದನ್ನು ಕೇಳುವ ಹಕ್ಕು ನಿಮಗಿದೆ) ಆ ಕ್ಷಮಿಸಿ ಅದು ಸಾಧ್ಯವಿಲ್ಲ ಎಂದು ನಾನು ಹೇಳುತ್ತೇನೆ. ನನಗೆ ಸಾಧ್ಯವಾದಷ್ಟು ಸಹಕಾರ ಮತ್ತು ಸೇವೆಯನ್ನು ನಿಮಗೆ ಸಲ್ಲಿಸಲು ನಾನು ಇಲ್ಲಿದ್ದೇನೆ. ಆದರೆ ಅಂತಹ ಸೇವೆಯು ಸದಾ ನಿಮಗೆ ಇಷ್ಟವಾದ ಒಂದು ರೂಪದಲ್ಲಿರುತ್ತದೆ ಎಂದು ನಾನು ಖಾತರಿ ನೀಡಲಾರೆ. ಅದು ಕೆಲವು ಸಲ ನೋವಿನಿಂದ ಕೂಡಿದ ರೂಪವನ್ನು ತಳೆಯಬಹುದು, ಉದಾ. ಮಾರ್ಗದಲ್ಲಿರುವ ಕೆಲವು ಗುಂಡಿಗಳು ಮತ್ತು ಕಷ್ಟಗಳ ಕಡೆಗೆ ನಿಮ್ಮ ಗಮನ ಸೆಳೆಯಬಹುದು.

ಮಾನ್ಯರೆ, ನಾನು ಹೇಳಲಿರುವ ಅಂಶಗಳು ಎರಡು ಬಗೆಯಾಗಿವೆ. ಮೊದಲನೆಯದು ಶುದ್ಧವಾಗಿ ಕಾನೂನಿನ ಅಂಶ. ಅದನ್ನು ಮಂಡಿಸಿದ ಅನಂತರ ಅಧ್ಯಕ್ಷ ಪೀಠದಲ್ಲಿರುವ ನಿಮ್ಮ ಚಿತ್ತಕ್ಕೆ ಬಿಡುತ್ತೇನೆ ಮಾನ್ಯರೆ, ಮತ್ತು ಸಾಂವಿಧಾನಿಕ ಸಲಹೆಗಾರರಿಗೆ ಬಿಡುತ್ತೇನೆ. ಅಪಾರ ಸಾಂವಿಧಾನಿಕ ಜ್ಞಾನವುಳ್ಳ ವ್ಯಕ್ತಿಯೆಂದು ಕಳೆದ ೧೦ ವರ್ಷದಿಂದ ನಾನು ಅವರನ್ನು ಬಲ್ಲೆ. ಅವರು ನಡವಳಿಕೆಯಲ್ಲಿ ಋಜುತ್ವವುಳ್ಳವರು ಮತ್ತು ಕಡು ಶಿಸ್ತಿನ ಸ್ವಾತಂತ್ರ್ಯವುಳ್ಳವರು. ಈ ಸ್ಥಳದಲ್ಲಿ ನಿಂತು ಹಾಗೆ ಹೇಳಬಹುದಾದರೆ, ಸರ್ ಬಿ.ಎನ್. ರಾವ್ ಅಂತಹವರ ನೆರವು ನಮಗೆ ದೊರಕಿರುವುದು ಒಂದು ಅನುಕೂಲವೇ ಆಗಿದೆ. ಮಾನ್ಯರೆ, ಇಂದು ನಾನು ನಿಮ್ಮ ಮುಂದೆ ಮಂಡಿಸುತ್ತಿರುವ ಅಂಶವು ಅವರ ಅತ್ಯುತ್ತಮ ಲಕ್ಷ್ಯಕ್ಕೆ ಪಾತ್ರವಾಗುತ್ತದೆ ಎನ್ನುವುದರಲ್ಲಿ ನನಗೆ ಅನುಮಾನವೇ ಇಲ್ಲ. ಇದನ್ನು ಒಂದು ಕ್ರಿಯಾಲೋಪವಾಗಿ ಎತ್ತಲು ನಾನು ಬಯಸುವುದಿಲ್ಲ, ಆದರೆ ನಮ್ಮ ಹಾದಿಯಲ್ಲಿನ ಒಂದು ಕಾನೂನಿನ ತೊಡಕನ್ನು ಸೂಚಿಸುತ್ತಿದೆ ಎಂದು ಈಗ ನಾನು ಎತ್ತುತ್ತಿದ್ದೇನೆ. ನಿಮ್ಮ ಸುಪರ್ದಿನಲ್ಲಿರುವ ಸಮಯದಲ್ಲಿ ಅದನ್ನು ನೀವು ಜಾಗರೂಕತೆಯಿಂದ ಪರಿಗಣಿಸುತ್ತೀರಿ ಮತ್ತು ನಿಮ್ಮ ಆಯ್ಕೆಯ ನಿರ್ಣಯವನ್ನು ಕೊಡುತ್ತೀರಿ ಎಂಬ ವಿಷಯದಲ್ಲಿ ನನಗೆ ಯಾವುದೇ ಅನುಮಾನವಿಲ್ಲ. ನಾನು ಎತ್ತಲು ಉದ್ದೇಶಿಸಿರುವ ಅಂಶ ಏನೆಂದರೆ ಸಂವಿಧಾನ ರಚನಾಸಭೆಯ ಈ ಪೂರ್ವಭಾವಿ

ಸಭೆಯಲ್ಲಿ, ಈ ಹಂತದಲ್ಲಿ ಸಂವಿಧಾನದ ಮೂಲ ನಿಯಮಗಳನ್ನು ನಿರ್ದಿಷ್ಟ ರೂಪದಲ್ಲಿ ಇಡುವಂತಹ ಪ್ರಶ್ನೆಯನ್ನು ಪರಿಗಣಿಸಲಾಗುವುದಿಲ್ಲ. ಈ ನಿರ್ಣಯವು ಸಂವಿಧಾನದ ಮೂಲನಿಯಮಗಳನ್ನು ನಿರ್ದಿಷ್ಟ ರೂಪದಲ್ಲಿ ಇಡಲು ಉದ್ದೇಶಿಸಿದೆ ಎನ್ನುವುದನ್ನು ಪಂಡಿತ್ ಜವಾಹರಲಾಲ್ ನೆಹರು ಅವರೂ ಒಪ್ಪಿಕೊಂಡಿದ್ದಾರೆ. ಇದು ಒಂದು ಅತಿಮುಖ್ಯವಾದ ನಿರ್ಣಯ ಮತ್ತು ಮುಂದಿನ ಸಂವಿಧಾನದ ಅತ್ಯಗತ್ಯಗಳನ್ನು ನಿರ್ದಿಷ್ಟ ರೂಪದಲ್ಲಿ ಇರಿಸುತ್ತದೆ. ನೀವು ಅದನ್ನು ಪರೀಕ್ಷಿಸಿದರೆ, ಒಂದು ಸ್ಥೂಲ ನೋಟವು ನಿಮಗೆ ಸ್ಪಷ್ಟಪಡಿಸುವುದೇನೆಂದರೆ, ಇಲ್ಲಿ ಪ್ರಸ್ತಾವಿತವಾಗಿರುವ ಅನೇಕ ವಿಚಾರಗಳು ಸಂವಿಧಾನದ ಮೂಲನಿಯಮಗಳೇ ಆಗಿವೆ. ಉದಾಹರಣೆಗೆ, ಅದು ಒಂದು ಗಣರಾಜ್ಯವನ್ನು ಕುರಿತು ಮಾತನಾಡುತ್ತದೆ. ಒಂದು ಒಕ್ಕೂಟವನ್ನು ಕುರಿತು ಮಾತನಾಡುತ್ತದೆ; ಅದು ಪ್ರಸ್ತುತ ಸರಹದ್ದುಗಳು ಮತ್ತು ಪ್ರಾಂತ್ಯಗಳ ಅಧಿಕಾರಗಳ ಸ್ಥಾನಮಾನವನ್ನು ಕುರಿತು ಮಾತನಾಡುತ್ತದೆ. ಉಳಿಕೆಯ ಅಧಿಕಾರ, ಜನರಿಂದ ನಿಷ್ಪನ್ನವಾದ ಎಲ್ಲ ಅಧಿಕಾರಗಳು, ಅಲ್ಪಸಂಖ್ಯಾತರ ಹಕ್ಕುಗಳು, ಮೂಲಭೂತ ಹಕ್ಕುಗಳು – ಈ ಎಲ್ಲವನ್ನು ಸಂವಿಧಾನದ ಮೂಲನಿಯಮಗಳು ಎಂದು ಕರಾರುವಕ್ಕಾಗಿ ವರ್ಣಿಸಬಹುದು. ನನ್ನ ಅಭಿಪ್ರಾಯ ಏನೆಂದರೆ ಮೇ ೧೬ ರ ಸಂಪುಟ ನಿಯೋಗದ ಹೇಳಿಕೆಯು ಈ ಪೂರ್ವಭಾವಿ ಸಭೆಗೆ ನೀಡಿರುವ ಅಧಿಕಾರದ ಮಿತಿಯೊಳಗೆ, ಸಂವಿಧಾನದ ಎಷ್ಟೇ ಸ್ಥೂಲರೂಪದಲ್ಲಿಯೇ ಆಗಲಿ ಯಾವುದೇ ಮೂಲನಿಯಮಗಳನ್ನು ನ್ಯಾಯಸಮ್ಮತವಾಗಿ ನಿರ್ದಿಷ್ಟ ರೂಪದಲ್ಲಿ ಇರಿಸಲಾಗುವುದಿಲ್ಲ. ವಿಭಾಗಗಳಲ್ಲಿ ನಾವು ಸಭೆ ಸೇರಿದ ಮೇಲೆ ಮತ್ತು ಪ್ರಾಂತೀಯ ಸಂವಿಧಾನವನ್ನು ಸಿದ್ಧಪಡಿಸುವವರೆಗೆ ಅದು ಕಾಯಬೇಕು. ಆ ಹಂತದಲ್ಲಿ ಇನ್ನಿಬ್ಬರು ಪಾಲುಗಾರರು, ಮುಸ್ಲಿಮ್ ಲೀಗ್ ಮತ್ತು ಭಾರತದ ರಾಜ್ಯಗಳು ಉಪಸ್ಥಿತರಿರುತ್ತಾರೆ ಎಂದು ನಿರೀಕ್ಷಿಸಲಾಗಿದೆ. ನಮ್ಮ ಪ್ರಸ್ತುತ ಪೂರ್ವಭಾವಿ ಸಭೆಯಲ್ಲಿ ನಮ್ಮ ಕೆಲಸವು ರೂಪಿತವಾಗಿದೆ, ಕರಾರುವಾಕ್ಕಾದ ನುಡಿಗಳಲ್ಲಿ ಪರಿಮಿತಿಗೆ ಒಳಪಡಿಸಲಾಗಿದೆ. ಸದ್ಯದಲ್ಲಿಯೇ ಅದನ್ನು ನಾನು ನಿಮಗೆ ಓದಿಹೇಳುತ್ತೇನೆ. ಆ ಕರಾರುವಾಕ್ಕಾದ ನುಡಿಗಳು ಸಂವಿಧಾನದ ಮೂಲನಿಯಮಗಳ ಸಿದ್ಧತೆಯನ್ನಾಗಲಿ ಅಥವಾ ಅಂಗೀಕಾರವನ್ನಾಗಲಿ ಒಳಗೊಂಡಿಲ್ಲ. ಆ ಹಂತ ಬರುವವರೆಗೂ ಅದು ಕಾಯಬೇಕು. ಆ ಹಂತವನ್ನು ಈಗಷ್ಟೇ ಪ್ರಸ್ತಾವಿಸಿದ್ದೇನೆ. ಮಾನ್ಯರೆ, ನೀವು ಬಹಳ ಸರಿಯಾಗಿ ಹೇಳಿದ ಹಾಗೆ ನಾವು ಒಂದು ಸಾರ್ವಭೌಮ ಸಂಸ್ಥೆ ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. ಆದರೆ ಯಾವ ಪತ್ರದಿಂದ ನಾವು ಸೃಷ್ಟಿಯಾಗಿದ್ದೇವೋ ಅದರ ಮಿತಿಯೊಳಗೆ ನಾವು ಸಾರ್ವಭೌಮ ಒಡಂಬಡಿಕೆಯ ಹೊರತಾಗಿ ಆ ಪರಿಮಿತಿಗಳಿಂದ ಹೊರಗೆ ನಾವು ಹೋಗಲಾರೆವು ಮತ್ತು ಇತರ ಎರಡು ಕಕ್ಷಿಗಳು ಗೈರುಹಾಜರಾಗಿರುವುದರಿಂದ ಯಾವ ಒಡಂಬಡಿಕೆಯನ್ನು ಕುರಿತೂ ಯೋಚಿಸಲಾಗುವುದಿಲ್ಲ. ಆದ್ದರಿಂದ ನಾವು ಆ ಪರಿಮಿತಿಗಳಿಂದ ಬದ್ಧರಾಗಿದ್ದೇವೆ. ಸಹಜವಾಗಿಯೇ ಕೆಲವು ಜನರ ಅಭಿಪ್ರಾಯವು ಆ ಪರಿಮಿತಿಗಳನ್ನು ಸಾರಾಸಗಟಾಗಿ ಕಡೆಗಣಿಸಿ, ಈ ಪತ್ರದ ಪರಿಮಿತಿಗಳು ಏನೇ ಆಗಿದ್ದರೂ ರಾಜಕೀಯ ಅಧಿಕಾರವನ್ನು ಗಳಿಸಿಕೊಳ್ಳಲು ಈ ಸಂವಿಧಾನ ರಚನಾಸಭೆಯನ್ನು ಪರಿವರ್ತಿಸಿಕೊಂಡು ಅಧಿಕಾರ ಗ್ರಹಣ ಮಾಡಿ, ದೇಶದಲ್ಲೊಂದು ಕ್ರಾಂತಿ ಮಾಡಬೇಕು ಎಂಬುದಾಗಿದ್ದರೆ ಅದು ಪ್ರಸ್ತುತ ಯೋಜನೆಯ ಹೊರಗಿನ ಸಂಗತಿ. ಆ ವಿಚಾರವಾಗಿ ನಾನು ಹೇಳುವುದು ಏನೂ ಇಲ್ಲ. ಆದರೆ ಕಾಂಗ್ರೆಸ್ ಈ ಪತ್ರವನ್ನು ಸಮಗ್ರವಾಗಿ ಅಂಗೀಕರಿಸಿರುವುದರಿಂದ, ಅದು ಆ ಪತ್ರದ ಪರಿಮಿತಿಗಳಿಂದ ಬದ್ಧವಾಗಿದೆ. ಆ ಪತ್ರದಲ್ಲಿರುವ ಸಂಬಂಧಿತ ಭಾಗಗಳನ್ನು ಓದಲು ನನಗೆ ನೀವು ಕೆಲವು ನಿಮಿಷಗಳ ಅನುಮತಿ ಕೊಟ್ಟರೆ.....

**ಶ್ರೀ ಕಿರಣ್ ಶಂಕರ್ ರಾಯ್** (ಬಂಗಾಳ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ಕ್ರಿಯಾಲೋಪವನ್ನು ಕುರಿತು, ಡಾ. ಜಯಕರ್ ಅವರು ಕ್ರಿಯಾಲೋಪವನ್ನು ಎತ್ತುತ್ತಿದ್ದಾರೆಯೇ ಅಥವಾ ತಮ್ಮ ತಿದ್ದುಪಡಿಯನ್ನು ಮಂಡಿಸುತ್ತಿದ್ದಾರೆಯೇ ಎಂದು ನಾನು ತಿಳಿದುಕೊಳ್ಳಲು ಬಯಸುತ್ತೇನೆ. ಅವರು ಒಂದು ಕ್ರಿಯಾಲೋಪವನ್ನು ಎತ್ತುತ್ತಿದ್ದರೆ, ತಮ್ಮ ತಿದ್ದುಪಡಿಯನ್ನು ಮಂಡಿಸಲು ಹೊರಡುವ ಮುನ್ನ ಆ ಕ್ರಿಯಾಲೋಪವನ್ನು ಮೊದಲು

ಇತ್ಯರ್ಥಗೊಳಿಸಬೇಕು ಎಂದು ನಾವು ಭಾವಿಸುತ್ತೇವೆ ಮಾನ್ಯರೆ.

**ಮಾನ್ಯ ಅಧ್ಯಕ್ಷರು :** ಡಾ ಜಯಕರ್ ಅವರು ಕ್ರಿಯಾಲೋಪವನ್ನು ಎತ್ತುತ್ತಿಲ್ಲ ಎಂದು ಹೇಳಿದ್ದಾರೆಂದು ಭಾವಿಸುತ್ತೇನೆ. ಈ ನಿರ್ಣಯವನ್ನು ಅಂಗೀಕರಿಸುವ ಹಾದಿಯಲ್ಲಿ ಎದುರಾಗುವ ತೊಂದರೆಗಳನ್ನು ಅವರು ಎತ್ತಿ ತೋರಿಸುತ್ತಿದ್ದಾರೆ. ಆ ದಿಕ್ಕಿನಲ್ಲಿ ಅವರು ಸಾಗುತ್ತಿದ್ದಾರೆ ಎಂದು ನಾನು ಭಾವಿಸುತ್ತೇನೆ. ನಾನು ಅರ್ಥಮಾಡಿಕೊಂಡಂತೆ ಅವರು ಕ್ರಿಯಾಲೋಪವನ್ನು ಎತ್ತುತ್ತಿಲ್ಲ.

**ಡಾ. ಬಿ. ಪಟ್ಟಾಭಿ ಸೀತಾರಾಮ್ಯ** (ಮದ್ರಾಸ್ : ಸಾಮಾನ್ಯ) : ನಾನು ಅರ್ಥಮಾಡಿಕೊಂಡಂತೆ, ಈ ನಿರ್ಣಯದ ಪರಿಗಣನೆಯನ್ನು ಮುಂದೂಡುವ ಗೊತ್ತುವಳಿ ಇದು ಎಂದು ನಾನು ಭಾವಿಸಬಹುದೆ ಮಾನ್ಯರೆ?

**ಮಾನ್ಯ ಅಧ್ಯಕ್ಷರು :** ಇದು ಮುಂದೂಡುವ ಗೊತ್ತುವಳಿ ಎಂದೂ ನಾನು ಭಾವಿಸುವುದಿಲ್ಲ, ನಿರ್ಣಯವನ್ನು ಕುರಿತು ಚರ್ಚೆಯಾಗಬೇಕು ಎಂದು ಅವರು ಬಯಸುತ್ತಾರೆ. ಈ ಹಂತದಲ್ಲಿ ಈ ನಿರ್ಣಯದ ಸೂಕ್ತತೆ ಅಥವಾ ಅಸೂಕ್ತತೆಗೆ ಸಂಬಂಧಿಸಿದಂತೆ ತಮ್ಮದೇ ದೃಷ್ಟಿಕೋನವನ್ನು ಈ ಸದನದ ಮುಂದಿಡಲು ಬಯಸುತ್ತಾರೆ. ಹಾಗೆ ಮಾಡುತ್ತಾ ಅದನ್ನು ಅಂಗೀಕರಿಸುವ ಹಾದಿಯಲ್ಲಿ ಎದುರಾಗುವ ಕೆಲವು ತೊಂದರೆಗಳನ್ನು ಅವರು ಎತ್ತಿತೋರಿಸುತ್ತಿದ್ದಾರೆ.

**ಡಾ. ಬಿ. ಪಟ್ಟಾಭಿ ಸೀತಾರಾಮಯ್ಯ :** ನಾವು ಈ ವಿಷಯದ ಪರಿಗಣನೆಯಲ್ಲಿ ಮುಂದುವರಿಯುವುದು ಅವರಿಗೆ ಇಷ್ಟವಿಲ್ಲ ಎಂದು ಗೌರವಪೂರ್ವಕವಾಗಿ ನಾನು ಸೂಚಿಸಬಹುದೆ? ಅವರ ತಿದ್ದುಪಡಿಯ ಒಕ್ಕಣೆಯಿಂದ ಇದು ಸ್ಪಷ್ಟವಾಗುತ್ತದೆ. ಅವರ ಒಕ್ಕಣೆಯ ಕಡೆಗೆ ನಿಮ್ಮ ಗಮನವನ್ನು ಸೆಳೆಯುತ್ತೇನೆ ಮಾನ್ಯರೆ.

**ಶ್ರೀ ಮೋಹನ್‌ಲಾಲ್ ಸಕ್ಸೇನಾ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಕ್ರಿಯಾಲೋಪವನ್ನು ಕುರಿತು. ವಿಧಾಯಕ ಸಭೆಯ ನಿಯಮಾವಳಿಯ ಪ್ರಕಾರ ತಿದ್ದುಪಡಿಯನ್ನು ಮಂಡಿಸುವವರು ತಮ್ಮ ಭಾಷಣ ಮಾಡುವ ಮೊದಲು ತಮ್ಮ ತಿದ್ದುಪಡಿಯನ್ನು ಮಂಡಿಸಬೇಕು. ಡಾ. ಜಯಕರ್ ಅವರು ತಮ್ಮ ಭಾಷಣವನ್ನು ಮಾಡುತ್ತಾ ಹೋಗುವ ಮೊದಲು ತಮ್ಮ ತಿದ್ದುಪಡಿಯನ್ನು ಮಂಡಿಸಬೇಕೆಂದು ಕೇಳುವಂತೆ ನಾನು ಸೂಚಿಸಬಯಸುತ್ತೇನೆ.

**ರೈಟ್ ಆನರಬಲ್ ಡಾ. ಎಮ್. ಆರ್. ಜಯಕರ್ :** ಸರಿ, ನಾನು ತಿದ್ದುಪಡಿಯನ್ನು ಓದುತ್ತೇನೆ. ನಾನು ನಿಮ್ಮ ಕೆಲವು ನಿಮಿಷಗಳನ್ನು ಉಳಿಸಲು ಬಯಸಿದ್ದೆ. ಇದು ತಿದ್ದುಪಡಿ:

> "ಈ ಸಭೆಯು ತನ್ನ ದೃಢವಾದ ಮತ್ತು ವಿಧ್ಯುಕ್ತವಾದ ನಿರ್ಧಾರವನ್ನು ಘೋಷಿಸುವುದು ಏನೆಂದರೆ, ಭಾರತದ ಭಾವೀ ಆಡಳಿತಕ್ಕಾಗಿ ಈ ಸಭೆಯು ಸಿದ್ಧಗೊಳಿಸಲಿರುವ ಸಂವಿಧಾನವು ಒಂದು ಸ್ವತಂತ್ರವಾದ ಮತ್ತು ಪ್ರಜಾಸತ್ತಾತ್ಮಕವಾದ ಸಾರ್ವಭೌಮ ದೇಶಕ್ಕಾಗಿ ಇರಬೇಕು; ಆದರೆ ಅಂತಹ ಒಂದು ಸಂವಿಧಾನವನ್ನು ರೂಪಿಸುವಾಗ, ಮುಸ್ಲಿಮ್ ಲೀಗ್ ಮತ್ತು ಭಾರತೀಯ ರಾಜ್ಯಗಳ ಸಹಕಾರವನ್ನು ಪಡೆದುಕೊಳ್ಳುವ ದೃಷ್ಟಿಯನ್ನು ಹೊಂದಿರಬೇಕು, ಮತ್ತು ಆ ಮೂಲಕ ಈ ನಿರ್ಧಾರದ ದೃಢತೆಯನ್ನು ತೀವ್ರಗೊಳಿಸುವುದಕ್ಕಾಗಿ, ಈ ಸಭೆಯ ನಡವಳಿಗಳಲ್ಲಿ ಭಾಗವಹಿಸಲು ಈ ಎರಡು ಸಂಸ್ಥೆಗಳ ಪ್ರತಿನಿಧಿಗಳು ಬಯಸಿದರೆ ಅದು ಸಾಧ್ಯವಾಗುವಂತೆ ಮಾಡಲು ಈ ಸಭೆಯು ಈ ಪ್ರಶ್ನೆಯನ್ನು ಕುರಿತ ಮುಂದಿನ ಪರಿಗಣನೆಯನ್ನು ಮುಂದಿನ ಒಂದು ದಿನಾಂಕಕ್ಕೆ ಮುಂದೂಡುತ್ತದೆ."

ಸಾರಾಂಶರೂಪದಲ್ಲಿ ಹೇಳುವುದಾದರೆ, ನನ್ನ ತಿದ್ದುಪಡಿಯ ಅರ್ಥವು ಈ ನಿರ್ಣಯದ ಮುಂದಿನ ಪರಿಗಣನೆಯನ್ನು ಮುಂದಿನ ಒಂದು ದಿನಕ್ಕೆ ಮುಂದೂಡಬೇಕು– ಅದು ಒಕ್ಕೂಟದ ಸಂವಿಧಾನವನ್ನು ರಚಿಸುವ ಹಂತ. ಆ ಹಂತದಲ್ಲಿ ಭಾರತದ ರಾಜ್ಯಗಳು ಮತ್ತು ಮುಸ್ಲಿಮ್ ಲೀಗ್ ಉಪಸ್ಥಿತವಿರುತ್ತವೆ ಎಂದು ನಿರೀಕ್ಷಿಸಬಹುದು ಎಂದು ನಾನು ಭಾವಿಸುತ್ತೇನೆ. ಇದನ್ನು ನಾನು ಒಂದು ಕ್ರಿಯಾಲೋಪ ಎಂದು ಎತ್ತುತ್ತಿಲ್ಲ. ಬದಲಿಗೆ ಈ ಪ್ರಶ್ನೆಯನ್ನು ಪರಿಗಣಿಸಲು ಮುಂದುವರಿಯುವ ಮುನ್ನ ನಾವು ಪರಿಹರಿಸಿಕೊಳ್ಳಬೇಕಾದ

ಒಂದು ತೊಂದರೆ ಎಂದು ಇದನ್ನು ಎತ್ತುತ್ತಿದ್ದೇನೆ. ಈ ಪೂರ್ವಭಾವಿ ಸಭೆಯಲ್ಲಿ ಈ ನಿರ್ಣಯವನ್ನು ಈ ಸಂವಿಧಾನ ರಚನಾಸಭೆಯ ಅಂಗೀಕರಿಸುವ ಹಾದಿಯಲ್ಲಿ ಎದುರಾಗುವ ಕಾನೂನಾತ್ಮಕ ತೊಂದರೆಯನ್ನು ನಾನು ಕೇವಲ ಎತ್ತಿ ತೋರಿಸುತ್ತಿದ್ದೇನೆ. ಆದ್ದರಿಂದ ನಾನು ಹೇಳುತ್ತಿರುವ ಅಂಶವೇನೆಂದರೆ ಒಂದು ಪೂರ್ವಭಾವಿ ಸಭೆಯ ಈ ಹಂತದಲ್ಲಿ ನಮ್ಮ ಕಾರ್ಯಕಲಾಪವನ್ನು ನಡೆಸುವ ನಮ್ಮ ಅಧಿಕಾರವು ಪರಿಮಿತವಾಗಿರುತ್ತದೆ. ಕರಾರುವಕ್ಕಾದ ಶಬ್ದಗಳಿಂದ ಅದನ್ನು ಪರಿಮಿತಗೊಳಿಸಲಾಗಿದೆ. ಆ ಪರಿಮಿತಿಗಳನ್ನು ನಾವು ಅಂಗೀಕರಿಸಿದ್ದೇವೆ. ಈ ಹಂತದಲ್ಲಿ ಈ ಸಭೆಗೆ ಸಂವಿಧಾನದ ಯಾವುದೇ ಮೂಲನಿಯಮಗಳನ್ನು ಅಂಗೀಕರಿಸುವ ಅಧಿಕಾರವಿಲ್ಲ. ರಾಜ್ಯ ಪತ್ರದಲ್ಲಿರುವ ಕೆಲವು ಕಂಡಿಕೆಗಳತ್ತ ನಿಮ್ಮ ಗಮನವನ್ನು ಕೋರುತ್ತೇನೆ ಮಾನ್ಯರೆ, ನಾನು ೧೯ನೇ ಖಂಡದಿಂದ ಪ್ರಾರಂಭಿಸುತ್ತೇನೆ, ಉಪಖಂಡ (೧) ವಿವಿಧ ಸಂಸ್ಥೆಗಳಿಗೆ ಪ್ರತಿನಿಧಿಗಳನ್ನು ಚುನಾವಣೆ ಮಾಡುವ ವಿಧಾನವನ್ನು ಪ್ರಸ್ತಾವಿಸುತ್ತದೆ. ಅನಂತರ ಪ್ರಕರಣ 'ಎ', 'ಬಿ' ಮತ್ತು 'ಸಿ' ಬರುತ್ತದೆ. ಅನಂತರ ಮುಖ್ಯ ಆಯುಕ್ತರ ಪ್ರಾಂತ್ಯಗಳನ್ನು ಕುರಿತ ಟಿಪ್ಪಣಿ ಬರುತ್ತದೆ. ಅದನ್ನು ನಾನು ಅಲ್ಲೇ ಬಿಡುತ್ತೇನೆ. ಅನಂತರ ರಾಜ್ಯಗಳಿಗೆ ಸಂಬಂಧಿಸಿದ ಉಪ ಖಂಡ(೨) ಬರುತ್ತದೆ. ಅನಂತರ ಉಪ ಖಂಡ(೩) ಬರುತ್ತದೆ. ಅದು ಹೀಗೆ ಹೇಳುತ್ತದೆ, "ಹೀಗೆ ಆಯ್ಕೆಯಾದ ಪ್ರತಿನಿಧಿಗಳು" ಅಂದರೆ ಹಿಂದೂಗಳು, ಮುಸ್ಲಿಮರು ಮತ್ತು ರಾಜ್ಯಗಳ ಸಂಧಾನ ಸಮಿತಿ (ಪ್ರಸ್ತುತ ಸಂಧಾನ ಸಮಿತಿಯನ್ನು ನಾನು ಹೊರಗಿಡುತ್ತೇನೆ.) "ಸಾಧ್ಯವಾದಷ್ಟು ಬೇಗ ನವದೆಹಲಿಯಲ್ಲಿ ಸಭೆ ಸೇರಬೇಕು." ನಾವು ಸಭೆ ಸೇರಿದ್ದೇವೆ. ಅನಂತರ ಪೂರ್ವಭಾವಿ ಸಭೆ ಬರುತ್ತದೆ. ಅದೇ ಇಂದು ನಾವು ನಡೆಸುತ್ತಿರುವ ಸಭೆ. ಅದು ಒಂದು ಪೂರ್ವಭಾವಿ ಸಭೆ ಎನ್ನುವುದನ್ನು ಅಲ್ಲಗಳೆಯಲಾಗದು. ಈ ಸಂಬಂಧದಲ್ಲಿ ನವೆಂಬರ್ ೨೦ ನೇ ದಿನಾಂಕದ ಆಹ್ವಾನಪತ್ರದ ಕಡೆಗೆ ನಿಮ್ಮ ಗಮನವನ್ನು ಸೆಳೆಯಬಯಸುತ್ತೇನೆ. ಇಲ್ಲಿ ಈ ಸಭೆಗೆ ಹಾಜರಾಗಲು ವೈಸ್‌ರಾಯ್ ಅವರಿಂದ ನೀವು ಪಡೆದ ಪತ್ರ ಅದು. ಅಲ್ಲಿ ಅದನ್ನು ಸಭೆ ಎಂದು ವರ್ಣಿಸಲಾಗಿದೆ. ಆದ್ದರಿಂದ ಇದು ಉಪ ಖಂಡ (೫) ರಲ್ಲಿ ಪ್ರಸ್ತಾವಿಸಲಾದ ಪೂರ್ವಭಾವಿ ಸಭೆ. ಅನಂತರ ಈ ಪೂರ್ವಭಾವಿ ಸಭೆಯ ಹಕ್ಕುಗಳೇನು ಎಂದು ನೋಡೋಣ.

> ಒಂದು ಪೂರ್ವಭಾವಿ ಸಭೆಯನ್ನು ನಡೆಸಲಾಗುವುದು. ಅದರಲ್ಲಿ (೧) ಕಾರ್ಯಕಲಾಪದ ಸಾಮಾನ್ಯ ಕ್ರಮವನ್ನು ನಿರ್ಧರಿಸಲಾಗುವುದು, (೨) ಒಬ್ಬರು ಅಧ್ಯಕ್ಷರು ಮತ್ತು ಇತರ ಅಧಿಕಾರಗಳನ್ನು ಚುನಾಯಿಸಲಾಗುವುದು ಮತ್ತು (೩) ನಾಗರಿಕ, ಅಲ್ಪಸಂಖ್ಯಾತರ ಮತ್ತು ಬುಡಕಟ್ಟು ಜನರ ಮತ್ತು ಹೊರಚ್ಚಾಗಿರುವ ಪ್ರದೇಶಗಳನ್ನು ಕುರಿತಂತೆ ಒಂದು ಸಲಹಾ ಸಮಿತಿಯನ್ನು ನೇಮಿಸಲಾಗುವುದು.... (ಕೆಳಗೆ ಕಂಡಿಕೆ ೨೦ ಅನ್ನು ನೋಡಿ)."

ಇದನ್ನು ಅನತಿಕಾಲದಲ್ಲಿಯೇ ಮಾಡಲಾಗುತ್ತದೆ ಎಂದು ನಾನು ಎಣಿಸುತ್ತೇನೆ. ಇದನ್ನು ಬಿಟ್ಟರೆ ಯಾವುದೇ ಸಂವಿಧಾನದ ಅತ್ಯಗತ್ಯಗಳು ಅಥವಾ ಮೂಲನಿಯಮಗಳು ಅಥವಾ ಸ್ಥೂಲವಾದ ರೂಪರೇಷೆಗಳನ್ನು ಅಂಗೀಕರಿಸುವಂತೆ ಒಂದು ಶಬ್ದವೂ ಅದರಲ್ಲಿಲ್ಲ.

**ಶ್ರೀ ಕೆ. ಸಂತಾನಮ್** (ಮದ್ರಾಸ್ : ಸಾಮಾನ್ಯ) : ಒಂದು ಕ್ರಿಯಾಲೋಪವನ್ನು ಕುರಿತು ಸ್ವಾಮಿ. ಗೌರವಾನ್ವಿತ ಸದಸ್ಯರ ವಾದವು ಸರಿ ಎಂದಾದರೆ, ಪಂಡಿತ್ ಜವಾಹರಲಾಲ್ ನೆಹರು ಅವರ ನಿರ್ಣಯದಂತೆ ಇವರ ತಿದ್ದುಪಡಿಯ ಮೊದಲನೆಯ ವಾಕ್ಯವೂ ಕೂಡ ಈ ಸಭೆಯ ಅಧಿಕಾರದ ವ್ಯಾಪ್ತಿಯೊಳಗೆ ಬರುವುದಿಲ್ಲ.

**ರೈಟ್ ಆನರಬಲ್ ಡಾ. ಎಮ್.ಆರ್. ಜಯಕರ್** : ದೂರದಿಂದ ಕೇಳಿಸಿಕೊಳ್ಳುವುದರಲ್ಲಿ ಇರುವ ತೊಂದರೆಗೆ ಗೌರವಕೊಡುತ್ತಾ ನಾನು ಸೂಚಿಸುವುದೇನೆಂದರೆ, ನನ್ನ ಭಾಷಣ ಮುಗಿದ ಮೇಲೆ ಸದಸ್ಯರು ಈ ವೇದಿಕೆಗೆ ಬಂದು ಅದನ್ನು ಕುರಿತ ಎಲ್ಲ ಆಕ್ಷೇಪಗಳನ್ನು ಎತ್ತುವುದು ಹೆಚ್ಚು ಅನುಕೂಲ. ಆ ಸಮಯದಲ್ಲಿ ಅವರ ಮಾತುಗಳನ್ನು ಕೇಳುವುದು ಹೆಚ್ಚು ಸುಲಭ ಮತ್ತು ಈ ಮಧ್ಯೆ ಬೇರೇನೂ ಸಂಭವಿಸುವುದಿಲ್ಲ. ನಾನು

ಇನ್ನು ನಿಮ್ಮ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ನನ್ನ ಭಾಷಣದ ವಿರುದ್ಧ ಏನೇನು ಆಕ್ಷೇಪಗಳನ್ನು ಮುಂದೊಡ್ಡಬೇಕೆಂದು ನೀವು ಬಯಸುತ್ತೀರೋ ಅವುಗಳನ್ನು ಸದಸ್ಯರು ಇಲ್ಲಿ ಬಂದು ನಿರೂಪಿಸಬಹುದು. ಈಗ ಹಸ್ತಕ್ಷೇಪ ಮಾಡುವುದಕ್ಕಿಂತ ಅದು ಉತ್ತಮ. ಅನಂತರ ನನಗೆ ಒಂದು ಅವಕಾಶ ಕೊಟ್ಟರೆ ಅವುಗಳಿಗೆ ಉತ್ತರ ಕೊಡುತ್ತೇನೆ. ಆದ್ದರಿಂದ ನನ್ನ ಅರಿಕೆ, ಸರಿಯಿರಲಿ ಅಥವಾ ತಪ್ಪಿರಲಿ, ಏನೆಂದರೆ ಈ ಹಂತಗಳಲ್ಲಿ ಪೂರ್ವಭಾವಿ ಸಭೆಯ ಅಧಿಕಾರಗಳು ಪರಿಮಿತವಾಗಿರುತ್ತವೆ.

**ಮಾನ್ಯ ಅಧ್ಯಕ್ಷರು** : ಶಿಸ್ತು ಶಿಸ್ತು, ನಿಮ್ಮ ಕ್ರಿಯಾಲೋಪ ಏನು ಶ್ರೀ ಸಂತಾನಮ್?

**ಶ್ರೀ ಕೆ. ಸಂತಾನಮ್** : ನನ್ನ ಕ್ರಿಯಾಲೋಪ ಏನು ಅಂದರೆ ಈ ಗೌರವಾನ್ವಿತ ಸದಸ್ಯರ ವಾದ ಸರಿಯಾಗಿದೆ ಅಂದರೆ, ಆಗ ಅವರ ತಿದ್ದುಪಡಿಯ ಮೊದಲನೆಯ ವಾಕ್ಯವು ಈ ಸಭೆಯ ಅಧಿಕಾರದ ವ್ಯಾಪ್ತಿಯ ಹೊರಗಡೆ ಇದೆ.

**ಮಾನ್ಯ ಅಧ್ಯಕ್ಷರು** : ಶ್ರೀ ಸಂತಾನಮ್ ಅವರು ಹೇಳುವುದೇನೆಂದರೆ ನಿಮ್ಮ ತಿದ್ದುಪಡಿಯ ಮೊದಲನೆಯ ವಾಕ್ಯವು (ಡಾ. ಜಯಕರ್ ಕಡೆಗೆ ತಿರುಗಿ), ನಿಮ್ಮದೇ ವಾದದ ಪ್ರಕಾರ ಕ್ರಮರಹಿತವಾಗಿದೆ.

**ರೈಟ್ ಆನರಬಲ್ ಡಾ. ಎಮ್. ಆರ್. ಜಯಕರ್** : ಅದು ನಿಮ್ಮ ಅಭಿಪ್ರಾಯವಾಗಿದ್ದರೆ ಅದನ್ನು ತೆಗೆದುಹಾಕಬಹುದು. ಹಾಗೆ ಮಾಡಲು ನಾನು ಸಿದ್ಧನಾಗಿದ್ದೇನೆ. ಈ ಅಭಿಪ್ರಾಯದ ವಿರುದ್ಧ ವಾದ ಮಾಡುತ್ತಾ ಈ ಸದನದ ಸಮಯವನ್ನು ವ್ಯರ್ಥಮಾಡಲು ನಾನು ಬಯಸುವುದಿಲ್ಲ. ಅಗತ್ಯ ಕಂಡರೆ ಅದನ್ನು ತೆಗೆದುಹಾಕಲು ನಾನು ಸಿದ್ಧನಾಗಿದ್ದೇನೆ. ಉಳಿದ ಭಾಗ ಉಳಿದುಕೊಳ್ಳಲಿ ನನ್ನ ಸದ್ಯದ ಉದ್ದೇಶಕ್ಕೆ ಅದು ಸಾಕಾಗುತ್ತದೆ.

**ಡಾ. ಬಿ. ಪಟ್ಟಾಭಿ ಸೀತಾರಾಮಯ್ಯ** : ಅದಕ್ಕೇ ಪ್ರಾರಂಭದಲ್ಲಿಯೇ ನಾನು ಅರಿಕೆ ಮಾಡಿಕೊಂಡಿದ್ದೇನೆಂದರೆ ಇದು ಈ ನಿರ್ಣಯದ ಪರಿಗಣನೆಯನ್ನು ಮುಂದೂಡಬೇಕೆನ್ನುವ ಗೊತ್ತುವಳಿ.

**ಮಾನ್ಯ ಅಧ್ಯಕ್ಷರು** : ಅದು ನಿಜವಾಗಿಯೂ ಕಷ್ಟವನ್ನು ಉಂಟುಮಾಡುತ್ತಿದೆ. ನಿಮ್ಮ ತಿದ್ದುಪಡಿಯ ಮೊದಲನೆಯ ಭಾಗವು ಅದನ್ನು ಈ ಹೇಳಿಕೆಯ ನಾಲ್ಕು ಮೂಲೆಗಳ ಒಳಗೆ ತರುತ್ತಾ ಒಂದು ತಿದ್ದುಪಡಿಯನ್ನಾಗಿ ಮಾಡುತ್ತದೆ. ನಿಮ್ಮ ವಾದವು ಸರಿಯಾಗಿದ್ದರೆ, ಮತ್ತು ಅದನ್ನು ತೆಗೆದುಹಾಕಿದರೆ, ಅದರ ಫಲಿತಾಂಶ ಏನಾಗುತ್ತದೆಂದರೆ ನಿಮ್ಮ ತಿದ್ದುಪಡಿಯು ಕೇವಲ ಒಂದು ಮುಂದೂಡಿಕೆಯ ಗೊತ್ತುವಳಿ ಆಗುತ್ತದೆ.

**ರೈಟ್ ಆನರಬಲ್ ಡಾ. ಎಮ್. ಆರ್. ಜಯಕರ್** : ಒಂದು ಕ್ಷಣ ನೀವು ಇದನ್ನು ಮುಂದೂಡಿಕೆಯ ಗೊತ್ತುವಳಿ ಎಂದು ಪರಿಗಣಿಸಿದಿರಿ ಎಂದಿಟ್ಟುಕೊಳ್ಳಿ, ಅದನ್ನು ಈ ಹಂತದಲ್ಲಿ ನಾನು ಮಂಡಿಸಲಾರೆನೆ? ಇದು ಒಂದು ಗೊತ್ತುವಳಿಯಾಗಿದ್ದು, ಬೇರೆ ಯಾವುದೇ ಗುಣಾವಗುಣಗಳ ತಿದ್ದುಪಡಿಯನ್ನು ಪರಿಗಣಿಸುವ ಮೊದಲು ಕೈಗೆತ್ತಿಕೊಳ್ಳಬೇಕಾದದ್ದು. ಆದ್ದರಿಂದ ನೀವು ಇದನ್ನು ಮುಂದೂಡಿಕೆಯ ಗೊತ್ತುವಳಿ ಎಂದು ಪರಿಗಣಿಸುತ್ತೀರೆಂದು ಇಟ್ಟುಕೊಂಡರೂ, ಇದನ್ನು ನಾನು ಈಗ ಒತ್ತಾಯಪಡಿಸಬಹುದು.

**ಮಾನ್ಯ ಅಧ್ಯಕ್ಷರು** : ಈ ಅಂಶವನ್ನು ಕುರಿತಂತೆ ನಾನು ಈ ಸದನದ ಸದಸ್ಯರ ಸಹಾಯವನ್ನು ಕೋರುತ್ತೇನೆ. ತೊಂದರೆ ಏನೆಂದರೆ ಕಾನೂನಿನ ಅಂಶದಿಂದ ಡಾ. ಜಯಕರ್ ಅವರ ವಾದವು ಸರಿ ಎಂದಾದರೆ ಪಂಡಿತ್ ಜವಾಹರಲಾಲ್ ನೆಹರು ಮಂಡಿಸಿದ ನಿರ್ಣಯವು ಕ್ರಮರಹಿತವಾಗುತ್ತದೆ. ನಿರ್ಣಯವನ್ನು ಮಂಡಿಸಿದ ಸಮಯದಲ್ಲಿ ಈ ಪ್ರಶ್ನೆಯನ್ನು ಎತ್ತಿಕೊಳ್ಳಬೇಕಾಗಿತ್ತು. ಆದರೆ ಈ ಹಂತದಲ್ಲಿ ಕ್ರಿಯಾಲೋಪವನ್ನು ಎತ್ತಬಹುದು ಎಂದು ನಾನು ಭಾವಿಸುವುದಿಲ್ಲ. ಆದ್ದರಿಂದ ನಾವು ತಿದ್ದುಪಡಿ ಮತ್ತು ನಿರ್ಣಯ ಎರಡೂ ಕ್ರಮಬದ್ಧವಾಗಿವೆ ಎಂದು ತೆಗೆದುಕೊಂಡು ಈ ಚರ್ಚೆಯನ್ನು ಮುಂದುವರಿಸೋಣ.

**ರೈಟ್ ಆನರಬಲ್ ಡಾ. ಎಮ್. ಆರ್. ಜಯಕರ್** : ಹಾಗಾದರೆ ನಾನು ಇದನ್ನು ಒಂದು ಕಾನೂನಿನ ಪ್ರಶ್ನೆ ಎಂದು ಒತ್ತಾಯಿಸಬಹುದೆ?

**ಮಾನ್ಯ ಅಧ್ಯಕ್ಷರು** : ಈ ಕಾನೂನಿನ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ನಾನು ಭಾವಿಸುತ್ತೇನೆ. ನೀವು ಇದನ್ನು ಗುಣಾವಗುಣಗಳ ಮೇಲೆ ಹಾಕಿ.

**ರೈಟ್ ಆನರಬಲ್ ಡಾ. ಎಮ್.ಆರ್. ಜಯಕರ್** : ನಾನು ನಿಮಗೆ ಹೇಳುತ್ತಿದ್ದೆ ಸ್ವಾಮಿ, ಈ ಹಂತದಲ್ಲಿ ಸಂವಿಧಾನದ ಮೂಲನಿಯಮಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು ಅಂಗೀಕರಿಸಲಾಗುವುದಿಲ್ಲ. ನಾನು ಇನ್ನು ಕೆಲವು ಖಂಡಗಳನ್ನು ನಿಮಗೆ ಓದಿ ಹೇಳುತ್ತೇನೆ. ಖಂಡ (೫) ಹೀಗೆ ಹೇಳುತ್ತದೆ:

"ಪ್ರತಿ ವಿಭಾಗದಲ್ಲೂ ಒಳಗೊಂಡಿರುವ ಪ್ರಾಂತ್ಯಗಳಿಗಾಗಿ ಪ್ರಾಂತೀಯ ಸಂವಿಧಾನವನ್ನು ಇತ್ಯರ್ಥಗೊಳಿಸಲು ಈ ವಿಭಾಗಗಳು ಮುಂದುವರಿಯಬೇಕು...."

ಇವು ಮುಂದಿನ ಮಾರ್ಚ್ ಅಥವಾ ಏಪ್ರಿಲ್‌ನಲ್ಲಿ ಸಭೆ ಸೇರುತ್ತವೆ ಎಂದು ನಾನು ಗ್ರಹಿಸುತ್ತೇನೆ. ಇತರ ಅಪ್ರಸ್ತುತ ಭಾಗಗಳನ್ನು ಬಿಡುತ್ತೇನೆ. ಅನಂತರ ಖಂಡ (೬) ಬರುತ್ತದೆ. ಸಂವಿಧಾನಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಯಾವ ಹಂತದಲ್ಲಿ ಇತ್ಯರ್ಥಗೊಳಿಸಬಹುದು ಎಂಬುದನ್ನು ಕುರಿತು ಅದು ನಿರೂಪಿಸುತ್ತದೆ.

"ಒಕ್ಕೂಟದ ಸಂವಿಧಾನವನ್ನು ಇತ್ಯರ್ಥಗೊಳಿಸುವ ಉದ್ದೇಶದಿಂದ ವಿಭಾಗಗಳ ಮತ್ತು ಭಾರತೀಯ ರಾಜ್ಯಗಳ ಈ ಪ್ರತಿನಿಧಿಗಳು ಪುನಃ ಸೇರಬೇಕು."

ಸಂವಿಧಾನದ ಮೂಲನಿಯಮಗಳನ್ನು ಇತ್ಯರ್ಥಗೊಳಿಸಬಹುದಾದ ಹಂತ ಅದಾಗಿದೆ. ಏಕೆಂದರೆ ಆ ಹಂತದಲ್ಲಿ ರಾಜ್ಯಗಳು, ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗ್‌ಗಳು ಎಲ್ಲ ಹಾಜರಿರುತ್ತವೆ. ಇದು ಹೀಗಿರುವುದು ಏಕೆಂದರೆ, ಸಂವಿಧಾನಕ್ಕೆ ಸಂಬಂಧಪಟ್ಟ ವಿಷಯಗಳನ್ನು ಕುರಿತು ಈ ಮೂರು ಅಂಗಗಳಿಗೆ ತಮ್ಮದೇ ಆದ ಅಭಿಪ್ರಾಯಗಳನ್ನು ತಿಳಿಸಲು ಒಂದು ಅವಕಾಶವಿರಬೇಕಾದದ್ದು ಅಗತ್ಯ ಎಂದು ಈ ಯೋಜನೆಯು ಪರಿಗಣಿಸುತ್ತದೆ. ಆ ಹಂತವನ್ನು ಇನ್ನು ತಲುಪಲಾಗಿಲ್ಲ, ಆದ್ದರಿಂದ ನನ್ನ ನಿವೇದನೆ ಏನೆಂದರೆ ಪ್ರಸ್ತುತ ಸಮಯದಲ್ಲಿ ಈ ಪ್ರಶ್ನೆಯನ್ನು ಪರಿಗಣಿಸಲಾಗುವುದಿಲ್ಲ ಅಥವಾ ಅಂತಿಮವಾಗಿ ನಿರ್ಧರಿಸಲಾಗುವುದಿಲ್ಲ. ಹೇಗಾದರೂ ನೀವು ಅಂಗೀಕರಿಸಲು ಇಷ್ಟಪಡುವುದಾದರೆ ಈ ಕಷ್ಟದಿಂದ ಹೊರಬರಲು ಒಂದು ಸಲಹೆಯನ್ನು ನಾನು ನೀಡುತ್ತೇನೆ.

**ಶ್ರೀ ಎಮ್.ವಿ. ಗಾಡ್ಗಿಲ್** (ಬಾಂಬೆ : ಸಾಮಾನ್ಯ) : ಖಂಡ (೪) ರಲ್ಲಿ ಯಾವ ನಿಷೇಧವೂ ಇಲ್ಲ.

**ರೈಟ್ ಆನರಬಲ್ ಡಾ. ಎಮ್.ಆರ್. ಜಯಕರ್** : ಅದು ಅಲ್ಲಿ ಪರೋಕ್ಷವಾಗಿ ಸೂಚಿತವಾಗಿದೆ. ನೀವು ಖಂಡ (೪) ಮತ್ತು (೬) ಅನ್ನು ತೆಗೆದುಕೊಂಡರೆ ಅಲ್ಲಿಯ ಸ್ಪಷ್ಟವಾದ ಅರ್ಥವೆಂದರೆ ಪೂರ್ವಭಾವಿ ಸಭೆಯು ಕೆಲವು ಸಂಗತಿಗಳಿಗೆ ಮಾತ್ರ ಸಂಬಂಧಪಟ್ಟಿರಬೇಕು ಮತ್ತು ಸಂವಿಧಾನವನ್ನು ಇತ್ಯರ್ಥಗೊಳಿಸುವುದನ್ನು ನಾವು ಖಂಡ (vi) ರವರೆಗೆ ಬರುವವರೆಗೂ ಮುಂದಕ್ಕೆ ಹಾಕಬೇಕು. ಇಲ್ಲದಿದ್ದರೆ ಖಂಡ (vi) ಸಂಪೂರ್ಣವಾಗಿ ಅವಶ್ಯಕತೆಗೆ ಮೀರಿದ್ದಾಗುತ್ತದೆ ಮತ್ತು ಅಸಮಂಜಸವಾಗಿರುತ್ತದೆ. ಆದ್ದರಿಂದ ಈ ಎರಡೂ ಖಂಡಗಳನ್ನು ಒಟ್ಟಿಗೆ ತೆಗೆದುಕೊಂಡಾಗ ಖಂಡ (೪) ರ ಹಂತದಲ್ಲಿ ಏನನ್ನು ಮಾಡಲು ಉದ್ದೇಶಿಸಲಾಗಿದೆ ಎನ್ನುವುದು ಸ್ಪಷ್ಟವಾಗುತ್ತದೆ. ಅದನ್ನು ಆ ಖಂಡದಲ್ಲಿ ಸ್ಪಷ್ಟವಾಗಿ ಮತ್ತು ಕರಾರುವಾಕ್ಕಾಗಿ ಪ್ರಸ್ತಾವಿಸಲಾಗಿದೆ. ವಿಸ್ತಾರವಾದ ಇತ್ಯರ್ಥದ ರೂಪದಲ್ಲಿಯೇ ಆಗಲಿ ಅಥವಾ ಮೂಲನಿಯಮಗಳ ಸ್ಥೂಲ ರೂಪರೇಷೆಗಳ ರೂಪದಲ್ಲಿಯೇ ಆಗಲಿ, ಒಕ್ಕೂಟದ ಸಂವಿಧಾನಕ್ಕೆ ಸಂಬಂಧಿಸಿದ್ದು ಎಲ್ಲ ಖಂಡ (೬)ನೇ ಹಂತವನ್ನು ತಲಪುವವರೆಗೂ ಕಾಯಬೇಕು.

ಈಗ ನಾನು ಈ ಪ್ರಶ್ನೆಯ ಮೇಲೆ ಹೆಚ್ಚು ಬೆಳಕನ್ನು ಚೆಲ್ಲುವ ಖಂಡ (೭)ಕ್ಕೆ ಬರುತ್ತೇನೆ. ಯಾವುದಾದರೂ ಪ್ರಮುಖ ಕೋಮುವಾರು ವಿವಾದ ತಲೆಯೆತ್ತಿದರೆ ಆ ಖಂಡದಲ್ಲಿ ಸೂಚಿಸಿರುವ ಪ್ರಕಾರ ವ್ಯವಹರಿಸಲಾಗುತ್ತದೆ ಎಂದು ಅದು ನಿಬಂಧಿಸುತ್ತದೆ. ಪ್ರಮುಖ ಕೋಮುವಾರು ವಿವಾದವನ್ನು ಎತ್ತಬಹುದಾದಂತಹ ಯಾವ ಪಕ್ಷವೂ ಇಲ್ಲಿಲ್ಲ. ಆದ್ದರಿಂದ ನೀವು ಖಂಡ (೭)ರ ಕಡೆಗೆ ಹಿಂತಿರುಗಿ ನೋಡಿದಾಗ ನಾನು ಪ್ರಸ್ತಾವಿಸಿರುವ ರೀತಿಯಲ್ಲಿ ಅದರ ಅರ್ಥವು ಸ್ಪಷ್ಟವಾಗುತ್ತದೆ.

ಈ ಕಾನೂನಿನ ಅಂಶವಲ್ಲದೆ ಈ ಪ್ರಶ್ನೆಯನ್ನು ಮುಂದಿನ ಒಂದು ಹಂತದಲ್ಲಿ ಪರಿಗಣಿಸಲು

ಮುಂದೂಡಬೇಕಾದುದರ ಪ್ರಾಯೋಗಿಕ ಔಚಿತ್ಯದ ಕೆಲವು ಪರಿಗಣನೆಗಳನ್ನು ನಿಮ್ಮ ಮುಂದೆ ಒತ್ತಿಹೇಳಲು ನಾನು ಬಯಸುತ್ತೇನೆ. ಈ ಕಷ್ಟದಿಂದ ಪಾರಾಗುವ ಒಂದು ಮಾರ್ಗವಾಗಿ ನಾನು ಸಲಹೆಮಾಡುವುದೆಂದರೆ, ಈ ನಿರ್ಣಯವನ್ನು ಕುರಿತು ಇಲ್ಲಿಯವರೆಗೂ ಚರ್ಚೆ ಮಾಡಲಾಯಿತು ಮತ್ತು ಸಾರ್ವಜನಿಕರ ಮುಂದಿಡುವ ಉದ್ದೇಶವೂ ನೆರವೇರಿದಂತಾಯಿತು, ಈ ಸಭೆಯು ಪ್ರಸ್ತುತ ಅದರ ಮೇಲೆ ಮತದಾನವನ್ನು ಮಾಡಬಾರದು, ಮತ್ತು ಖಂಡ(೬)ರಲ್ಲಿ ಪ್ರಸ್ತಾಪಿಸಿರುವ ಹಂತಕ್ಕೆ ಮುಂದೂಡಬೇಕು. ಆಗ ಅದನ್ನು ಕುರಿತು ಹೊಸದಾಗಿ ಪರ್ಯಾಲೋಚಿಸುವಾಗ, ಅದರ ಬಗೆಗೆ ಅಂತಿಮವಾಗಿ ಮತಕ್ಕೆ ಹಾಕುವ ದೃಷ್ಟಿಯಿಂದ ಮಂಡಿಸಿದಾಗ ಇಂದು ಇಲ್ಲಿ ಗೈರುಹಾಜರಾಗಿರುವ ಎರಡು ಕಕ್ಷಿಗಳ ಪ್ರತಿನಿಧಿಗಳು ಅಲ್ಲಿ ಹಾಜರಾಗಬಹುದಾಗಿದೆ. ಈ ಕಷ್ಟವನ್ನು ಎದುರಿಸಲು ಒಂದು ಪರ್ಯಾಯ ಮಾರ್ಗವಾಗಿ ನಾನು ಇದನ್ನು ಸೂಚಿಸುತ್ತಿದ್ದೇನೆ.

**ಮಿ. ಆರ್.ಕೆ. ಸಿಧ್ವಾ** (ಸಿ.ಪಿ ಮತ್ತು ಬೇರಾರ್) : ಮಾನ್ಯರೆ, ನಾನು ಇಲ್ಲಿ ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಡಾ. ಜಯಕರ್ ಅವರ ತಿದ್ದುಪಡಿಯು ಹೀಗೆ ಹೇಳುತ್ತದೆ:

"…..ಈ ಸಭೆಯ ನಡವಳಿಗಳಲ್ಲಿ ಭಾಗವಹಿಸಲು ಈ ಎರಡು ಸಂಸ್ಥೆಗಳ ಪ್ರತಿನಿಧಿಗಳು (ಭಾರತೀಯ ರಾಜ್ಯಗಳು ಮತ್ತು ಮುಸ್ಲಿಮ್ ಲೀಗ್) ಬಯಸಿದರೆ ಅದು ಸಾಧ್ಯವಾಗುವಂತೆ ಮಾಡಲು ಈ ಸಭೆಯು ಈ ಪ್ರಶ್ನೆಯನ್ನು ಕುರಿತ ಮುಂದಿನ ಪರಿಗಣನೆಯನ್ನು ಮುಂದಿನ ಒಂದು ದಿನಾಂಕಕ್ಕೆ ಮುಂದೂಡುತ್ತದೆ."

ಅವರು ೧೯ ನೆಯ ಕಂಡಿಕೆಯ ಖಂಡ (೨) ಅನ್ನು ಉದ್ಧರಿಸಿದ್ದಾರೆ. ಆ ಖಂಡ ಹೀಗೆ ಹೇಳುತ್ತದೆ: "ರಾಜ್ಯಗಳಿಗೆ ಅಂತಿಮ ಸಂವಿಧಾನ ರಚನಾಸಭೆಯಲ್ಲಿ ಸೂಕ್ತವಾದ ಪ್ರಾತಿನಿಧ್ಯವನ್ನು ಕೊಡಲಾಗುವುದೆನ್ನುವುದು ಉದ್ದೇಶವಾಗಿದೆ….."

ಆ ಹಂತವನ್ನು ಇನ್ನೂ ತಲಪಲಾಗಿಲ್ಲ. ಆದ್ದರಿಂದ ಭಾರತೀಯ ರಾಜ್ಯಗಳು ಇಲ್ಲಿ ಈಗ ಪ್ರತಿನಿಧಿತವಾಗಿಲ್ಲ ಎಂಬ ಆಕ್ಷೇಪವನ್ನು ಎತ್ತುವುದು ತರ್ಕಬದ್ಧವಾಗಿಲ್ಲ. ಮತ್ತೆ ನೀವು ಮುಂದೆ ನೋಡಿದರೆ....

**ಮಾನ್ಯ ಅಧ್ಯಕ್ಷರು** : ಅದು ಒಂದು ಕ್ರಿಯಾಲೋಪವಲ್ಲ. ಅದು ಈಗಾಗಲೇ ಹೇಳಿರುವುದರ ವಿರುದ್ಧ ಒಂದು ವಾದವಾಗಿದೆ.

**ರೈಟ್ ಆನರಬಲ್ ಡಾ. ಎಮ್. ಆರ್. ಜಯಕರ್** : ನಾನು ಮುಂದುವರಿಸಬಹುದೇ ಮಾನ್ಯರೆ?

**ಮಾನ್ಯ ಅಧ್ಯಕ್ಷರು** : ಆಗಲಿ.

**ರೈಟ್ ಆನರಬಲ್ ಡಾ. ಎಮ್.ಆರ್. ಜಯಕರ್** : ನಾನು ಒತ್ತಾಯಪೂರ್ವಕವಾಗಿ ಹೇಳುತ್ತಿರುವ ವಾದ ಇಷ್ಟೇ: ಇಂದು ರೂಪಗೊಂಡಿರುವ ಸ್ಥಿತಿಯಲ್ಲಿ ಈ ಸಂವಿಧಾನ ರಚನಾಸಭೆಯು ಪೂರ್ಣವಾಗಿಲ್ಲ. ಇಬ್ಬರು ಗೈರುಹಾಜರಾಗಿದ್ದಾರೆ: ತಮ್ಮದೇನೂ ತಪ್ಪಿಲ್ಲದ ಭಾರತೀಯ ರಾಜ್ಯಗಳು, ಏಕೆಂದರೆ ಅವರು ಈ ಹಂತದಲ್ಲಿ ಒಳಗೆ ಬರಲಾರರು; ಅದು ನಿಜವಾದ ಪರಿಸ್ಥಿತಿ. ಸಂವಿಧಾನ ಸಮಿತಿಯನ್ನು ರಾಜ್ಯಗಳು ರಚಿಸಿವೆ, ಆದರೆ ನಾವು ನಮ್ಮ ಸಂಧಾನ ಸಮಿತಿಯನ್ನು ಇನ್ನೂ ರಚಿಸಿಲ್ಲ. ನಾವು ಹಾಗೆ ಮಾಡಿದಾಗ ಎರಡು ಸಮಿತಿಗಳೂ ಸಂಧಿಸುತ್ತದೆ. ಈ ದಾಖಲೆಯ ಷರತ್ತುಗಳ ಪ್ರಕಾರ ರಾಜ್ಯಗಳು ಒಳಗೆ ಬರಬಹುದಾದ ಹಂತ ಇದೇ ಆಗಿದೆ. ಮುಸ್ಲಿಮ್ ಲೀಗ್ ಪ್ರಕಾರ ಪರಿಸ್ಥಿತಿಯು ಬೇರೆಯಾಗಿದೆ ಮತ್ತು ಈ ವ್ಯತ್ಯಾಸವು ಬಹಳ ದೊಡ್ಡದಾಗಿದೆ.

ಮುಸ್ಲಿಮ್ ಲೀಗ್ ಇತ್ತೀಚೆಗೆ ಮೂರು ಅಥವಾ ನಾಲ್ಕು ರಿಯಾಯಿತಿಗಳನ್ನು ಪಡೆದುಕೊಂಡಿದೆ. ಅದನ್ನು ಶ್ರೇಷ್ಠವಾದ ಕಾರ್ಯತಂತ್ರದಿಂದ ಪಡೆಯಲಾಯಿತೋ ಅಥವಾ ಬೇರೆ ಯಾವುದಾದರೂ ಸಾಧನಗಳಿಂದಲೋ ಎಂದು ಇಲ್ಲಿ ನಾನು ಹೇಳಲಾರೆ. ಅವರು ಮೂರು ಅಥವಾ ನಾಲ್ಕು ಮುಖ್ಯವಾದ ಅಂಶಗಳನ್ನು ತಮಗೆ ಅನುಕೂಲಕರವಾಗಿ ಪಡೆದಿದ್ದಾರೆ.

ಇಲ್ಲಿ ವ್ಯಾಖ್ಯಾನ ಮಾಡಲು ಎರಡು ಅಂಶಗಳಿವೆ. ಒಂದು ಮತದಾನಕ್ಕೆ ಸಂಬಂಧಪಟ್ಟಿದ್ದು ಇನ್ನೊಂದು

ವಿಭಾಗಗಳಾಗಿ ಗುಂಪುಗೂಡುವುದಕ್ಕೆ ಸಂಬಂಧಪಟ್ಟಿದ್ದು. ಆ ಪ್ರಶ್ನೆಯನ್ನು ಫೆಡರಲ್ ನ್ಯಾಯಾಲಯಕ್ಕೆ ವಹಿಸಲಾಗುವುದು ಎಂದು ನಾನು ಎಣಿಸುತ್ತೇನೆ. ಫೆಡರಲ್ ನ್ಯಾಯಾಲಯದ ಮಾಜಿ ನ್ಯಾಯಾಧೀಶನಾಗಿ ಮತ್ತು ಸರ್ವೋನ್ನತ ನ್ಯಾಯಾಧಿಕರಣವಾದ 'ಜ್ಯುಡಿಷಿಯಲ್ ಕಮಿಟಿ ಆಫ್ ದ ಪ್ರಿವಿ ಕೌನ್ಸಿಲ್'ನ ಹಾಲಿ ಸದಸ್ಯನಾಗಿ ಫೆಡರಲ್ ನ್ಯಾಯಾಲಯಕ್ಕೆ ವಹಿಸಿಕೊಡುವ ಪ್ರಸ್ತಾವಕ್ಕೆ ಸಂಬಂಧಿಸಿದಂತೆ ಹೆಚ್ಚಿಗೆ ಏನೂ ಹೇಳುವ ಅಗತ್ಯವಿಲ್ಲ ಎಂಬುದನ್ನು ಗುರುತಿಸುತ್ತೇನೆ ಅಥವಾ ಅದು ಸರಿಯೇ ಮತ್ತು ಕ್ರಮವಾಗಿದೆಯೇ ಎಂದು ನಾನು ಹೇಳಬೇಕಾಗಿಲ್ಲ. ನಿಮಗೆ ಶುಭವಾಗಲಿ ಎಂದಷ್ಟೇ ನಾನು ಹೇಳುತ್ತೇನೆ. ಅತ್ಯಂತ ಸಮರ್ಥರಾದ ಸಾಂವಿಧಾನಿಕ ವಕೀಲರಲ್ಲಿ ಒಬ್ಬರ ಸೇವೆಯನ್ನು ನಿಮ್ಮ ಉದ್ದೇಶಕ್ಕೆ ಗೊತ್ತುಮಾಡಿಕೊಳ್ಳುವ ಅವಕಾಶ ನಿಮಗೆ ದೊರಕಿರುವುದಕ್ಕೆ ನಿಮ್ಮನ್ನು ಅಭಿನಂದಿಸುತ್ತೇನೆ. ಅವರೇ ನನ್ನ ಸ್ನೇಹಿತರಾದ ಸರ್, ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್. ಆದರಿಂದ ಆಚೆಗೆ ಫೆಡೆರಲ್ ನ್ಯಾಯಾಲಯಕ್ಕೆ ವಹಿಸಿಕೊಟ್ಟಿರುವುದಕ್ಕೆ ಸಂಬಂಧಿಸಿದಂತೆ ಬೇರೇನನ್ನೂ ಹೇಳಲು ನಾನು ಇಚ್ಛಿಸುವುದಿಲ್ಲ. ಆದರೆ ಸ್ಪಷ್ಟವಾದ ಸಂಗತಿ ಏನೆಂದರೆ ಗುಂಪುಗೂಡುವುದು ಮತ್ತು ಮತದಾನವನ್ನು ಮಾಡುವುದಕ್ಕೆ ಸಂಬಂಧಿಸಿದ ಹಾಗೆ ವ್ಯಾಖ್ಯಾವನ್ನು ಪಡೆಯಲು ನೀವು ಫೆಡರಲ್ ನ್ಯಾಯಾಲಯಕ್ಕೆ ಹೋಗಬಹುದಾದರೂ ಮುಸ್ಲಿಮ್ ಲೀಗ್ ಗಳಿಸಿಕೊಂಡ ಕೊನೆಯ ಅಂಶವನ್ನು ಕುರಿತು, ಅಂದರೆ ಸಂವಿಧಾನದ ರಚನೆಯಲ್ಲಿ ಅಪಾರ ಸಂಖ್ಯೆಯ ಜನರು ಪ್ರಾತಿನಿಧ್ಯವನ್ನು ಪಡೆಯದೆ ಇರುವಾಗ ಅವಕಾಶವನ್ನು ಕೊಡುವುದನ್ನು ಕುರಿತು ಫೆಡರಲ್ ನ್ಯಾಯಾಲಯಕ್ಕೆ ನೀವು ಹೋಗಲಾಗುವುದಿಲ್ಲ. ಚಕ್ರವರ್ತಿಗಳ ಸರ್ಕಾರಕ್ಕೆ ದೇಶದ ಒಪ್ಪದ ಭಾಗಗಳಲ್ಲಿರುವ ಜನಗಳ ಮೇಲೆ ಅಂತಹ ಒಂದು ಸಂವಿಧಾನವನ್ನು ಬಲಾತ್ಕಾರವಾಗಿ ಹೇರಲು ಇಷ್ಟವಿರುವುದಿಲ್ಲ. ಅದು ವ್ಯಾಖ್ಯಾನದ ಪ್ರಶ್ನೆಯಲ್ಲ. ಅದು ಮೇ ೧೬ರ ಹೇಳಿಕೆಗೆ ಹೆಚ್ಚುವರಿಯಾಗಿ ಸೇರಿಸುವ ಮೂಲಕ ಮುಸ್ಲಿಮ್ ಲೀಗ್‌ಗೆ ಕೊಟ್ಟ ಒಂದು ಹೊಸ ರಿಯಾಯಿತಿ. ಆ ಅಂಶವನ್ನು ನೀವು ಫೆಡರಲ್ ನ್ಯಾಯಾಲಯಕ್ಕೆ ಪ್ರಸ್ತಾವಿಸಬಹುದು ಎಂದು ನನಗೆ ತೋರುತ್ತಿಲ್ಲ. ಅದು ಹಕ್ಕುಬಾಧ್ಯತೆಗಳಿಗೆ ಸಂಬಂಧಿಸಿದ ಅಂಶ. ಅದನ್ನು ಮುಸ್ಲಿಮ್ ಲೀಗ್ ಗೆ ಬಿಟ್ಟುಕೊಡಲಾಗಿದೆ. ಅಂದರೆ, ಈ ವರ್ಷ ಮಾರ್ಚ್ ೧೫ ರಂದು ಹೌಸ್ ಆಫ್ ಕಾಮನ್ಸ್‌ನಲ್ಲಿ ಪ್ರಧಾನಮಂತ್ರಿ ಶ್ರೀ ಆ್ಯಟ್ಲೀ ಅವರು ನೀಡಿದ ಹೇಳಿಕೆಗೆ ಅದು ವಿರುದ್ಧವಾಗಿದೆ; ಅದು ಏನೆಂದರೆ ಅಲ್ಪಸಂಖ್ಯಾತರನ್ನು ಸಂರಕ್ಷಿಸಲಾಗುವುದಾದರೂ ಅವರು ಬಹುಸಂಖ್ಯಾತರ ಪ್ರಗತಿಗೆ ವೀಟೋ (ನಿರಾಕರಣಾಧಿಕಾರ) ಚಲಾಯಿಸಲು ಅವಕಾಶ ನೀಡಲಾಗುವುದಿಲ್ಲ. ೧೯೪೬ ಮಾರ್ಚ್‌ನಲ್ಲಿ ಸ್ವತಃ ಪ್ರಧಾನಮಂತ್ರಿಗಳೇ ಖಚಿತವಾಗಿ ಪ್ರತಿಪಾದಿಸಿದ ನಿಲುವು ಅದು. ಅದು ಹೊರಟುಹೋಯಿತು. ಈಗಿನ ನಿಲುವು ದಿಟವಾಗಿಯೂ ತೀರ ಬೇರೆಯಾಗಿದೆ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್** (ಬಾಂಬೆ : ಸಾಮಾನ್ಯ) : ರೈಟ್ ಆನರಬಲ್ ಸಜ್ಜನರು ಚಕ್ರವರ್ತಿಯ ಸರ್ಕಾರವು ವಿಧಿಸಿದ ನೀತಿಯನ್ನು ಇಲ್ಲಿ ವ್ಯಾಖ್ಯಾನಿಸುತ್ತಿದ್ದಾರೆ ಎಂದು ನಾನು ಭಾವಿಸಬಹುದೇ ಮಾನ್ಯರೆ? ರೈಟ್ ಆನರಬಲ್ ಸಜ್ಜನರು ಉಲ್ಲೇಖಿಸುತ್ತಿರುವ ರಿಯಾಯಿತಿಗಳೆಂದು ಹೇಳಲಾಗುತ್ತಿರುವವು ಎಲ್ಲ ಶ್ವೇತಪತ್ರದಲ್ಲಿ ಮಾಡಿದ ಹೇಳಿಕೆಗೆ ಸೇರ್ಪಡೆ ಅಥವಾ ಹೆಚ್ಚುವರಿ. ಅವುಗಳನ್ನು ನಾವು ಅಂಗೀಕರಿಸಿಲ್ಲ. ಈ ಸದನವು ಮೇ ೧೬ರ ದಾಖಲೆಗೆ ಯಾವುದೇ ಸೇರ್ಪಡೆಯನ್ನಾಗಲಿ ಅಥವಾ ಬದಲಾವಣೆಯನ್ನಾಗಲಿ ಒಪ್ಪಿಕೊಳ್ಳುವುದಿಲ್ಲ. (ಚಪ್ಪಾಳೆ).

**ರೈಟ್ ಆನರಬಲ್ ಡಾ. ಎಮ್.ಆರ್. ಜಯಕರ್** : ನಿಮ್ಮ ದಾರಿಯಲ್ಲಿರುವ ಕಷ್ಟಗಳನ್ನು ನಾನು ತೋರಿಸುತ್ತಿದ್ದೇನೆ ಅಷ್ಟೆ. ಯಾವುದೇ ಹೆಚ್ಚುವರಿಯನ್ನು ಒಪ್ಪಿಕೊಳ್ಳಿ ಎಂದು ನಿಮ್ಮನ್ನು ಕೇಳುತ್ತಿಲ್ಲ. ಮುಸ್ಲಿಮ್ ಲೀಗ್‌ನವರು ಹೊಸದಾಗಿ ಕಂಡುಕೊಂಡ ಅನುಕೂಲವನ್ನು ತೋರಿಸುತ್ತಿದ್ದೇನೆ. ಅದು ನಿಮ್ಮ ದಾರಿಯಲ್ಲಿ ಒಂದು ದೊಡ್ಡ ಕಷ್ಟವನ್ನು ಸೃಷ್ಟಿಸುತ್ತದೆ. ಮುಸ್ಲಿಮ್ ಲೀಗ್ ಬರುವವರೆಗೆ ವಿಷಯಗಳನ್ನು ತಡೆಹಿಡಿಯಬೇಕಾದ ಅಗತ್ಯವನ್ನು ಹೇಳುತ್ತಿದ್ದೇನೆ. ಆ ವಿಚಾರವಾಗಿ ನನ್ನ ಅಭಿಪ್ರಾಯಗಳು ತೀರ ಪ್ರಸ್ತುತವಾಗಿವೆ. ಇಂತಹ

ಯಾವುದೇ ಸೇರ್ಪಡೆಯನ್ನು ಕಾಂಗ್ರೆಸ್ ತಿರಸ್ಕರಿಸುತ್ತದೆಂದು ಗೌರವಾನ್ವಿತ ಸರ್ದಾರ್ ಪಟೇಲ್ ಅವರು ಭಾವಿಸಿದರೆ, ಅವರಿಗೆ ಹಾಗೆ ಮಾಡಲು ಸ್ವಾಗತ.

ಈಗ, ಮಾನ್ಯರೆ, ಏನು ಇದರ ಅರ್ಥ? ಸಂವಿಧಾನ ರಚನೆಯಲ್ಲಿ ಮುಸ್ಲಿಮ್ ಸಮುದಾಯದಂತಹ ಒಂದು ಸಮುದಾಯವು ಇಲ್ಲಿ ಪ್ರತಿನಿಧಿತವಾಗಿಲ್ಲವೆಂದರೆ ಅದರಿಂದ ಮುಂದೆ ಏನಾಗುತ್ತದೆ? ಸರ್ ಸ್ಟ್ಯಾಫರ್ಡ್ ಕ್ರಿಪ್ಸ್ 'ದೇಶದ ಇಷ್ಟವಿಲ್ಲದ ಭಾಗಗಳು' ಎಂಬ ಶಬ್ದಗಳನ್ನು ಕೂಡ ವ್ಯಾಖ್ಯಾನ ಮಾಡಿದ್ದಾರೆ. ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿರುವ ಭಾರತದ ಯಾವುದೇ ಭಾಗ ಎಂದು ಆ ಶಬ್ದಗಳ ಅರ್ಥ ಎಂದು ಅವರು ಹೇಳುತ್ತಾರೆ. ಅಂತಹ ಭಾಗಗಳ ಮೇಲೆ, ಅವರಿಗೆ ಇಷ್ಟವಿಲ್ಲದಿದ್ದರೆ, ಮುಸ್ಲಿಮ್ ಸಮುದಾಯದ ಗೈರುಹಾಜರಿಯಲ್ಲಿ ನೀವು ರಚಿಸಬಹುದಾದ ಸಂವಿಧಾನವನ್ನು ಹೇರಲಾಗುವುದಿಲ್ಲ. ಆ ಶಬ್ದಗಳು 'ದೇಶದ ಇಷ್ಟವಿಲ್ಲದ ಭಾಗಗಳು'. ಬೇರೆ ಯಾವುದಾದರೂ ಸಮುದಾಯವು ಈ ಅವಕಾಶದ ಅನುಕೂಲವನ್ನು ಪಡೆಯಬಹುದೇ ಎಂದು ನನಗೆ ಗೊತ್ತಿಲ್ಲ. ಅದು ಇತ್ಯರ್ಥ ಮಾಡಿಕೊಳ್ಳಬೇಕಾಗಬಹುದಾದ ವಿಚಾರ, ಆದರೆ ಇಷ್ಟು ಮಾತ್ರ ಖಚಿತ. ಅದನ್ನು ಸರ್ ಸ್ಟ್ಯಾಫರ್ಡ್ ಕ್ರಿಪ್ಸ್ ಅವರು ಹೌಸ್ ಆಫ್ ಕಾಮನ್ಸ್‌ನಲ್ಲಿ ನಡೆದ ಚರ್ಚೆಯಲ್ಲಿ ಕರಾರುವಾಕ್ಕಾಗಿ ಹೇಳಿದ್ದಾರೆ. ಯಾವ ಸಂವಿಧಾನದ ರಚನೆಯಲ್ಲಿ ಅವರ ಪ್ರಾತಿನಿಧ್ಯವಿಲ್ಲವೋ ಅಂತಹುದನ್ನು ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿರುವ ಆ ಪ್ರದೇಶಗಳಲ್ಲಿ ಒಪ್ಪಿಕೊಳ್ಳುವಂತೆ ಒತ್ತಾಯ ಮಾಡಲಾಗುವುದಿಲ್ಲ. "ಅವರ ಪ್ರಾತಿನಿಧ್ಯವಿಲ್ಲ" ಎಂಬ ಶಬ್ದಗಳನ್ನು ನೆನಪಿಟ್ಟುಕೊಳ್ಳಿ, ಅಂದರೆ ಅವರು ಹಾಜರಿಲ್ಲ.

ಈಗ, ಈ ನಿರ್ದಿಷ್ಟವಾದ ಸೇರ್ಪಡೆಯನ್ನು ಇಂಗ್ಲೆಂಡಿನಲ್ಲಿ ಕೆಲವು ವಿಚಾರಪಂಥಗಳು ಸಂತೋಷದಿಂದ ಸ್ವಾಗತಿಸಿ ಶುಭ ಹಾರೈಸಿವೆ. ಶ್ರೀ ಚರ್ಚಿಲ್ ಅದನ್ನು, ದೀರ್ಘ ಪಯಣದಲ್ಲಿ ಒಂದು ಮುಖ್ಯವಾದ ಮೈಲಿಗಲ್ಲು ಎಂದು ಕರೆದಿದ್ದಾರೆ. ಅದು ಒಂದು ಮುಖ್ಯವಾದ ಮೈಲಿಗಲ್ಲೋ ಅಥವಾ ಅಪಾಯಕಾರಿಯಾದ ಮೈಲಿಗಲ್ಲೋ ಎಂಬುದು ನಮಗೆ ಸಂಬಂಧಿಸಿದ್ದಲ್ಲ. ವಾಸ್ತವಿಕ ಸಂಗತಿಯೆಂದರೆ ಮುಸ್ಲಿಮರು ಪ್ರಸ್ತುತ ಸಮಯದಲ್ಲಿ ಅದನ್ನು ಪಡೆದುಕೊಂಡಿದ್ದಾರೆ.

ಆದ್ದರಿಂದ, ಈಗಿನ ಪರಿಸ್ಥಿತಿ ಏನೆಂದರೆ, ಯಾವುದೇ ಕಾರಣಗಳಿಂದ ಅವರು ನಿಮ್ಮ ಪರ್ಯಾಲೋಚನೆಗಳಲ್ಲಿ ಭಾಗವಹಿಸಬಾರದು ಎಂಬುದನ್ನು ಆಯ್ಕೆಮಾಡಿಕೊಂಡರೆ ಅವರು ನಿಮ್ಮ ಕೆಲಸವನ್ನು ನಿರರ್ಥಕ ಮತ್ತು ನಿಷ್ಫಲಗೊಳಿಸಬಲ್ಲರು. ಅವರನ್ನು ಕಟ್ಟಿಹಾಕುವ ನಿಮ್ಮ ಎಲ್ಲ ಪ್ರಯತ್ನಗಳೂ ವಿಫಲವಾಗುತ್ತವೆ. ಅವರ ಗೈರುಹಾಜರಿಯಲ್ಲಿ ನೀವು ರಚಿಸಬಹುದಾದ ಯಾವುದೇ ಸಂವಿಧಾನವು ವಿಭಾಗ 'ಎ' ಅಂತಹ ಇಷ್ಟವಿರುವ ಪ್ರದೇಶಗಳಿಗೆ ಬಂಧಕವಾಗಿರುತ್ತದೆ; ವಿಭಾಗ 'ಬಿ' ಮತ್ತು 'ಸಿ' ಗಳ ಮೇಲೆ ಅದು ಪರಿಣಾಮ ಬೀರುತ್ತದೆಯೇ ಎನ್ನುವುದರಲ್ಲಿ ನನಗೆ ಪೂರ್ಣ ಅನುಮಾನವಿದೆ. ಇದರ ಫಲಿತಾಂಶವೇನೆಂದರೆ ಇಲ್ಲಿ ಈಗ ಇಡೀ ಭಾರತಕ್ಕೆ ಒದಗಿಸುವಂತೆ ಒಂದು ಸಂವಿಧಾನವನ್ನು ರಚಿಸಲು ನೀವು ಏನೇ ಪ್ರಯತ್ನ ಮಾಡಬಹುದು, ಆದರೆ ಈ ನಿರ್ಣಯವು ಪ್ರಸ್ತಾವಿಸುವಂತೆ ಮುಸ್ಲಿಮ್ ಲೀಗಿನ ಗೈರುಹಾಜರಿಯಲ್ಲಿ ಅದನ್ನು ಇಂದು ನೀವು ಅಂಗೀಕರಿಸಿದರೆ, ನಿಮ್ಮ ಪ್ರಯತ್ನವು ಮುಸ್ಲಿಮ್ ಲೀಗ್‌ಗೆ ಬಂಧಕವಂತೂ ಆಗುವುದೇ ಇಲ್ಲ. ಕೇವಲ ನಿಮ್ಮ ತೊಂದರೆ ಮತ್ತು ಪರಿಶ್ರಮವನ್ನು ಉಳಿಸುವ ಸಾಧನವಾಗಿ, ಈ ಸಾಂವಿಧಾನಿಕ ಅಂಶಗಳನ್ನು ಮತ್ತಷ್ಟು ಪರಿಗಣಿಸುವ ವಿಚಾರವನ್ನು ಮುಂದಿನ ಒಂದು ದಿನಾಂಕಕ್ಕೆ ಮುಂದೂಡುವುದು ವಿವೇಕವಲ್ಲವೇ ಎಂಬ ಪ್ರಶ್ನೆಯನ್ನು ಇದು ಎತ್ತುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಅದು ಪರಿಶ್ರಮವನ್ನು ಉಳಿಸುತ್ತದೆ.

ನಿರ್ಣಯದಲ್ಲಿ ಸೂಚಿಸಲಾಗಿರುವ ಸಂವಿಧಾನವನ್ನು ನೀವು ನೋಡಿದರೆ ರಾಜ್ಯಗಳು ಮತ್ತು ಮುಸ್ಲಿಮರನ್ನು ನಿಕಟವಾಗಿ ಸಂಬಂಧಿಸಿದ ಅಂಶಗಳು ಅದರಲ್ಲಿ ಕಂಡುಬರುತ್ತವೆ. ನೀವು ಒಂದು ಗಣರಾಜ್ಯವನ್ನು ಕುರಿತು ಮಾತನಾಡುತ್ತಿದ್ದೀರಿ. ವೈಯಕ್ತಿಕವಾಗಿ ನನಗೆ ಯಾವುದೇ ಆಕ್ಷೇಪವಿಲ್ಲ.

**ಡಾ. ಸುರೇಶ್ಚಂದ್ರ ಬ್ಯಾನರ್ಜಿ** (ಬಂಗಾಳ : ಸಾಮಾನ್ಯ) : ಮಾಹಿತಿಗಾಗಿ ಕೇಳುತ್ತಿದ್ದೇನೆ ಮಾನ್ಯರೆ.

ಮುಸ್ಲಿಮರು ಬರದೇ ಹೋದರೆ ಎಷ್ಟು ಕಾಲ ನಾವು ಕಾಯಬೇಕು? ಎಷ್ಟು ಕಾಲ ನಾವು ಮೌನವಾಗಿ ಕುಳಿತುಕೊಳ್ಳಬೇಕು? ಅವರು ಒಳಗೆ ಬರಬಹುದಾಗಿತ್ತು. ಅವರು ಸ್ವಇಚ್ಛೆಯಿಂದ ಬಂದಿಲ್ಲ.

**ರೈಟ್ ಆನರಬಲ್ ಡಾ. ಎಮ್.ಆರ್. ಜಯಕರ್** : ಇದು ಒಂದು ಕ್ರಿಯಾಲೋಪವಲ್ಲ.

**ಡಾ. ಸುರೇಶ್ಚಂದ್ರ ಬ್ಯಾನರ್ಜಿ** : ಆ ಮಾಹಿತಿಯನ್ನು ಡಾ. ಜಯಕರ್ ಅವರು ಕೊಡಬೇಕು.

**ಮಾನ್ಯ ಅಧ್ಯಕ್ಷರು** : ಅದು ಒಂದು ವಾದವಾಗಿದ್ದು ಗೌರವಾನ್ವಿತ ಸದಸ್ಯರು ತಮ್ಮ ಸರದಿ ಬಂದಾಗ ಅದನ್ನು ಮುಂದುವರಿಸಬಹುದು.

**ರೈಟ್ ಆನರಬಲ್ ಡಾ. ಎಮ್. ಆರ್. ಜಯಕರ್** : ಗೌರವಾನ್ವಿತ ಸದಸ್ಯರು ನನ್ನ ಮಾತಿಗೆ ಅಡ್ಡಿಪಡಿಸದಿದ್ದರೆ ಮತ್ತು ಸ್ವಲ್ಪ ಸಮಯ ಕಾದಿದ್ದರೆ, ಅವರ ಪ್ರಶ್ನೆಗೆ ನಾನು ಉತ್ತರ ಕೊಟ್ಟಿರುತ್ತಿದ್ದೆ.

ಮಾನ್ಯರೆ, ಇದರ ಫಲಿತಾಂಶವೇನೆಂದರೆ ಇಲ್ಲಿ ಉಪಸ್ಥಿತರಿಲ್ಲ ಎಂಬ ಒಂದು ಸರಳ ತಂತ್ರವನ್ನು ಇಟ್ಟುಕೊಂಡು ಮುಸ್ಲಿಮ್ ಲೀಗ್ ನಿಮ್ಮ ಇಡೀ ಕಾರ್ಯವನ್ನೇ ನಿಷ್ಪ್ರಯೋಜಕಗೊಳಿಸಬಲ್ಲದು. ಅದರ ಅರ್ಥವೇನು? ಮುಸ್ಲಿಮ್ ಲೀಗ್ ಒಳಗೆ ಬರದಿದ್ದರೆ ರಾಜ್ಯಗಳೂ ಒಳಗೆ ಬರದಿರಬಹುದು. ಒಂದಕ್ಕಿಂತ ಹೆಚ್ಚು ಬಾರಿ ಅವರು ಅದನ್ನು ಸ್ಪಷ್ಟಪಡಿಸಿದ್ದಾರೆ. ಮತ್ತು ಹೌಸ್ ಆಫ್ ಕಾಮನ್ಸ್‌ನಲ್ಲಿ ಸ್ಪಷ್ಟವಾಗಿ ಹೇಳಿರುವುದೇನೆಂದರೆ ಕೇವಲ ಒಂದೇ ಒಂದು ಪಕ್ಷದಿಂದ ಕೂಡಿದ ಸಂವಿಧಾನದ ರಚನಾಸಭೆಯೊಡನೆ ರಾಜ್ಯಗಳು ವ್ಯವಹರಿಸದಿರಬಹುದು. ಆದ್ದರಿಂದ ಸ್ಪಷ್ಟವಾದ ಸಂಗತಿ ಏನೆಂದರೆ ಮುಸ್ಲಿಮ್ ಲೀಗ್ ಗೈರುಹಾಜರಾಗುವುದನ್ನು ಆರಿಸಿಕೊಂಡರೆ, ಮತ್ತು ಹಾಗೆ ಮಾಡುವಂತೆ ನಮ್ಮ ಕ್ರಿಯೆಯಿಂದ ಅವರನ್ನು ಪ್ರಚೋದಿಸಿದರೆ, ರಾಜ್ಯಗಳು ಕೂಡ ಒಳಗೆ ಬರದೆ ಇರಬಹುದು.

**ಗೌರವಾನ್ವಿತ ಪಂಡಿತ್ ಗೋವಿಂದವಲ್ಲಭ ಪಂತ್** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ): ಹೌಸ್ ಆಫ್ ಕಾಮನ್ಸ್‌ನಲ್ಲಿ ಮುಸ್ಲಿಮ್ ಲೀಗ್ ಒಳಬರದಿದ್ದರೆ ರಾಜ್ಯಗಳು ಕೂಡ ಸಂವಿಧಾನ ರಚನಾಸಭೆಯನ್ನು ಸೇರಿಕೊಳ್ಳುವುದಿಲ್ಲ ಎಂದು ಧಾರಾಳವಾಗಿ ಸ್ಪಷ್ಟಪಡಿಸಲಾಗಿದೆ ಎಂದು ರೈಟ್ ಆನರಬಲ್ ಸದಸ್ಯರು ಹೇಗೆ ಹೇಳುತ್ತಾರೆ?

**ರೈಟ್ ಆನರಬಲ್ ಡಾ. ಎಮ್.ಆರ್. ಜಯಕರ್** : ಹೌದು.

**ಗೌರವಾನ್ವಿತ ಪಂಡಿತ್ ಗೋವಿಂದವಲ್ಲಭ ಪಂತ್** : ಅಲ್ಲಿ ಏನನ್ನು ಹೇಳಲಾಯಿತು ಎನ್ನುವ ಬಗೆಗೆ ರೈಟ್ ಆನರಬಲ್ ಸಜ್ಜನರ ವ್ಯಾಖ್ಯಾನಕ್ಕೆ ನಾನು ಸಮ್ಮತಿಸುವುದಿಲ್ಲ.

**ರೈಟ್ ಆನರಬಲ್ ಡಾ. ಎಮ್.ಆರ್. ಜಯಕರ್** : ಅದನ್ನು ಕುರಿತು ನನ್ನ ವ್ಯಾಖ್ಯಾನವನ್ನು ನಾನು ಮಂಡಿಸುತ್ತೇನೆ. ಅನಂತರ ಗೌರವಾನ್ವಿತ ಸದಸ್ಯರು ಅದನ್ನು ಕುರಿತು ತಮ್ಮ ವ್ಯಾಖ್ಯಾನವನ್ನು ಕುರಿತು ಮಂಡಿಸಲು ಸ್ವತಂತ್ರರು.

**ಗೌರವಾನ್ವಿತ ಪಂಡಿತ್ ಗೋವಿಂದವಲ್ಲಭ ಪಂತ್** : ರಾಜ್ಯಗಳ ಪ್ರತಿನಿಧಿಗಳು ಅಥವಾ ಸಂಧಾನ ಸಮಿತಿಯು ತನ್ನ ನಿಲುವನ್ನು ಸ್ಪಷ್ಟಪಡಿಸದಿದ್ದರೆ ಡಾ. ಜಯಕರ್ ಅವರು ರಾಜ್ಯಗಳ ಅಭಿಪ್ರಾಯವನ್ನು ಪ್ರತಿನಿಧಿಸಲು ಯಾವ ಹಕ್ಕನ್ನೂ ಹೊಂದಿಲ್ಲ.

**ರೈಟ್ ಆನರಬಲ್ ಡಾ. ಎಮ್. ಆರ್. ಜಯಕರ್** : ನಾನು ರಾಜ್ಯಗಳ ಅಭಿಪ್ರಾಯವನ್ನು ಹೇಳುತ್ತಿಲ್ಲ. ಹೌಸ್ ಆಫ್ ಕಾಮನ್ಸ್‌ನಲ್ಲಿ ಏನನ್ನು ಹೇಳಲಾಗಿದೆಯೇ ಅದನ್ನು ನಾನು ಹೇಳುತ್ತಿದ್ದೇನೆ. ಮುಸ್ಲಿಮ್ ಲೀಗ್ ಒಳಗೆ ಬರದಿದ್ದರೆ ರಾಜ್ಯಗಳು ಒಳಗೆ ಬರದೇ ಇರಬಹುದು. ಕೇವಲ ಒಂದೇ ಒಂದು ಪಕ್ಷದಿಂದ ರಚಿತವಾದ ಸಂವಿಧಾನ ರಚನಾಸಭೆಯೊಡನೆ ವ್ಯವಹರಿಸಲು ರಾಜ್ಯಗಳು ಊಹಿಸುವಂತೆ ಇಷ್ಟಪಡಲಾರವು. ಹಾಗಾದ ಪಕ್ಷದಲ್ಲಿ ಫಲಿತಾಂಶವೇನು? (ಅಡ್ಡಿ).

**ಮಾನ್ಯ ಅಧ್ಯಕ್ಷರು** : ಡಾ. ಜಯಕರ್ ಅವರಿಗೆ ಮುಂದುವರಿಸಲು ಅವಕಾಶ ಕೊಡುವುದು ಉತ್ತಮ

ಎಂದು ನಾನು ಭಾವಿಸುತ್ತೇನೆ.

**ರೈಟ್ ಆನರಬಲ್ ಡಾ. ಎಮ್.ಆರ್. ಜಯಕರ್ :** ಸುಮಾರು ಇಪ್ಪತ್ತು ನಿಮಿಷಗಳ ಕಾಲ ನನ್ನ ಮಾತುಗಳನ್ನು ಮುಂದುವರಿಸಲು ಅವಕಾಶ ಕೊಡುವುದಿಲ್ಲವೆ? ನನ್ನ ಭಾಷಣದಲ್ಲಿ ರಂಧ್ರಾನ್ವೇಷಣೆ ಮಾಡಲು ಇಡೀ ವಾರವೇ ನಿಮಗಿದೆ ಎಂದು ಎಣಿಸುತ್ತೇನೆ.

**ಗೌರವಾನ್ವಿತ ಪಂಡಿತ್ ಗೋವಿಂದವಲ್ಲಭ ಪಂತ್ :** ನಿಮ್ಮ ಭಾಷಣದಲ್ಲಿ ರಂಧ್ರಾನ್ವೇಷಣೆ ಮಾಡುವುದಕ್ಕಿಂತ ಇನ್ನೂ ಹೆಚ್ಚಿನ ಕೆಲಸ ನಮಗಿರುತ್ತದೆ.

**ರೈಟ್ ಆನರಬಲ್ ಡಾ. ಎಮ್.ಆರ್. ಜಯಕರ್ :** ಮುಸ್ಲಿಮ್ ಲೀಗ್ ಒಳಬರದಿದ್ದರೆ ರಾಜ್ಯಗಳು ಒಳಬರದಿರುವ ಎಲ್ಲ ಸಂಭವನೀಯತೆಯೂ ಇದೆ. ಏನಾಗುತ್ತದೆ? ಪ್ರಾಯಃ ಆಗ ನೀವು ವಿಭಾಗ 'ಎ' ಗೆ ಸಂವಿಧಾನವನ್ನು ರಚನೆ ಮಾಡುತ್ತೀರಿ. ಬಹುಶಃ ನೀವು ವಿಭಾಗ 'ಎ' ಯಲ್ಲಿರುವ ಪ್ರಾಂತ್ಯಗಳ ಒಕ್ಕೂಟ ಕೇಂದ್ರಕ್ಕೆ ಒಂದು ಸಂವಿಧಾನವನ್ನು ರಚನೆ ಮಾಡುತ್ತೀರಿ. ಈ ಪ್ರಾಂತ್ಯಗಳಿಗೆ ಒಂದು ಒಕ್ಕೂಟ ಕೇಂದ್ರವನ್ನು ಹೊಂದಲು ನೀವು ಬಯಸಬಹುದು. ಆದರೆ ಮುಸ್ಲಿಮ್ ಲೀಗ್ ಪ್ರಧಾನವಾಗಿರುವ ವಿಭಾಗ 'ಬಿ' ಗೆ ಒಂದು ಸಂವಿಧಾನವನ್ನು ರಚಿಸಲು ನೀವು ಅಸಮರ್ಥರಾಗುತ್ತೀರಿ ಎನ್ನುವುದು ನಿಶ್ಚಿತ. ಇದರ ಫಲಿತಾಂಶವೇನೆಂದರೆ ಶ್ರೀ ಜಿನ್ನಾ ಅಪೇಕ್ಷಿಸುತ್ತಿರುವ ಹಾಗೆ ವಿಭಾಗ 'ಬಿ' ಮತ್ತು 'ಸಿ' ಗಳಿಗೆ ಸಂವಿಧಾನವನ್ನು ರಚಿಸಲು ಇನ್ನೊಂದು ಸಂವಿಧಾನ ರಚನಾಸಭೆ ಇರಬೇಕಾಗುತ್ತದೆ. ಆ ವಿಭಾಗಗಳಲ್ಲಿರುವ ಅಲ್ಪಸಂಖ್ಯಾತರು 'ಇಷ್ಟಪಡದ ಭಾಗಗಳು ಸಂವಿಧಾನವನ್ನು ಒಪ್ಪಿಕೊಳ್ಳುವಂತೆ ಒತ್ತಾಯ ಮಾಡಲಾಗುವುದಿಲ್ಲ' ಎಂಬ ಸೂತ್ರದ ಪ್ರಯೋಜನವನ್ನು ಪಡೆದುಕೊಳ್ಳುತ್ತಾರೋ, ಪಂಜಾಬಿನ ಹಿಂದೂಗಳು ಆ ಉಪಬಂಧದ ಪ್ರಯೋಜವನ್ನು ಪಡೆದುಕೊಳ್ಳುತ್ತಾರೋ ನನಗೆ ತಿಳಿಯದು. ಆ ವಿಷಯವಾಗಿ ನಾನು ಯಾವ ಅಭಿಪ್ರಾಯವನ್ನೂ ವ್ಯಕ್ತಪಡಿಸಲಾರೆ. ಈ ವಿಧ್ಯುಕ್ತವಾದ ಹೇಳಿಕೆಯ ತತ್ತ್ವದ ಪ್ರಯೋಜವನ್ನು ಪಡೆದುಕೊಳ್ಳಲು ಅವರು ಸಮರ್ಥರಾಗಬಹುದು, ಮತ್ತು ಹೀಗೆ ಹೇಳಬಹುದು, "ಈ ಸಂವಿಧಾನವನ್ನು ರೂಪಿಸುವಲ್ಲಿ ನಮ್ಮ ಕೈವಾಡವೇನೋ ಇರಲಿಲ್ಲ. ಆದ್ದರಿಂದ ಆ ಸಂವಿಧಾನವನ್ನು ನಮ್ಮ ಮೇಲೆ ಬಲಾತ್ಕಾರವಾಗಿ ಹೇಳಬಾರದು." ಅದು ಒಂದು ಸಾಧ್ಯತೆ. ಇಡೀ ಭಾರತವನ್ನು ಒಂದು ಒಕ್ಕೂಟವಾಗಿ ಪರಿಗಣಿಸಿ ಒಂದು ಸಂವಿಧಾನವನ್ನು ರಚಿಸುವ ನಮ್ಮ ಪ್ರಯತ್ನವು ವಿಫಲವಾಗುವುದು ಎನ್ನುವುದಂತೂ ನಿಶ್ಚಿತ. ಇದರ ಸಂಭವನೀಯ ಫಲಿತಾಂಶವೆಂದರೆ ಹಿಂದೂಗಳಿಗೇ ಒಂದು ಸಂವಿಧಾನ ಮತ್ತು ಮುಸ್ಲಿಮರಿಗಾಗಿಯೇ ಒಂದು ಸಂವಿಧಾನ ಆಗಬಹುದು. ಇದು ಸಂಭವಿಸಿತೆಂದರೆ ರಾಜ್ಯಗಳಿಗೆ ಒಂದು ಮೂರನೆಯ ಸಂವಿಧಾನವು ಇರುತ್ತದೆ. ಒಂದು ಸಂಯುಕ್ತ ಭಾರತದ ಬದಲು ಒಂದು ಹಿಂದೂಸ್ಥಾನದ ಸಂವಿಧಾನ, ಒಂದು ಸೌಮ್ಯವಾದ ಮತ್ತು ಸಂಕ್ಷೇಪಗೊಳಿಸಿದ ಅಥವಾ ಪರಿಮಾಣಿಸಿದ ಪಾಕಿಸ್ತಾನ್ ಸಂವಿಧಾನ ಮತ್ತು ರಾಜಸ್ಥಾನ್ ಸಂವಿಧಾನವನ್ನು ಕೂಡ ಹೊಂದಬೇಕಾದ ಜುಲುಮೆಗೆ ನಾವು ಸಿಕ್ಕಿಹಾಕಿಕೊಳ್ಳಬಹುದು. ಕೇಂದ್ರದಲ್ಲಿನ ನಿಮ್ಮ ಒಕ್ಕೂಟವು ಹೋಗುತ್ತದೆ. ಅದು ಸ್ಥಾಪಿತವಾಗುವುದಿಲ್ಲ. ಪ್ರಸ್ತುತ ನಿಮಗೆ ಕನಿಷ್ಠಪಕ್ಷ ಇರುವ ಈ ಪ್ರಯೋಜನವೆಂದರೆ, ವಿಭಾಗ 'ಬಿ' ಮತ್ತು 'ಸಿ' ಗಳಲ್ಲಿ ಯಾವುದೋ ಒಂದು ರೂಪದ ಪಾಕಿಸ್ತಾನವು ಸ್ಥಾಪಿತವಾಗುವುದಾದರೂ ಕೃಶಗೊಳಿಸಲಾದ ಒಂದು ಒಕ್ಕೂಟದ ಕೇಂದ್ರವಿರುತ್ತದೆ. ಆದ್ದರಿಂದ ಪ್ರಸ್ತುತ ಸನ್ನಿವೇಶದ ಅನಿವಾರ್ಯ ಅಗತ್ಯವೆಂದರೆ ಮುಸ್ಲಿಮರು ಇಲ್ಲಿ ಒಳಗೆ ಬರುವಂತೆ ಆಹ್ವಾನಿಸಲು ಪ್ರತಿಯೊಂದು ಪ್ರಯತ್ನವನ್ನೂ ನಾವು ಮಾಡಬೇಕು, ಮತ್ತು ಅದನ್ನು ಇನ್ನು ಕಠಿಣವಾಗುವಂತೆ ಮಾಡಬಾರದು. ಇದಕ್ಕೆ ಮುಖ್ಯವಾದ ಕಾರಣವೇನೆಂದರೆ ನಮ್ಮ ಕಾರ್ಯವು ಫಲವನ್ನು ಕೊಡಬೇಕು. ಈ ನಿಟ್ಟಿನಲ್ಲಿ ಪಂಡಿತ್ ಜವಾಹರಲಾಲ್ ನೆಹರು ಅವರು ಈ ನಿರ್ಣಯವನ್ನು ಮಂಡಿಸುವಾಗ ವ್ಯಕ್ತಪಡಿಸಿದ ಭಾವನೆಗಳನ್ನು ನಾನು ಮೆಚ್ಚುತ್ತೇನೆ. ನಾವು ಮುಸ್ಲಿಮರ ಸಹಕಾರವನ್ನು ಕೋರಬೇಕು ಎಂದು ಅವರು ವಾಸ್ತವವಾಗಿ ಹೇಳಿದರು. ಹಿಂದೆ ನಮ್ಮ ಪ್ರಯತ್ನಗಳು ಸಾಕಷ್ಟು ಪ್ರತಿಸ್ಪಂದನವನ್ನು ಎಬ್ಬಿಸದಿದ್ದರೂ ನಮ್ಮ

ಪ್ರಯತ್ನವನ್ನು ನಾವು ಮುಂದುವರಿಸಲೇಬೇಕು. ನನ್ನ ವಾದವನ್ನು ಇದಕ್ಕಿಂತ ಉತ್ತಮ ಶಬ್ದಗಳಲ್ಲಿ ಹೇಳಬಹುದು ಎಂದು ನನಗೆ ಅನ್ನಿಸುತ್ತಿಲ್ಲ. ಕನಿಷ್ಠಪಕ್ಷ ಮುಂದಿನ ಏಪ್ರಿಲ್‌ವರೆಗೆ ನೀವು ಯಾವುದೇ ಸಂವಿಧಾನವನ್ನು ರಚನೆಯನ್ನು ಮಾಡಲಾರಿರಿ ಎನ್ನುವುದು ಸ್ಪಷ್ಟವಾಗಿದೆ. ಆದ್ದರಿಂದ ಈ ನಿರ್ಣಯದ ಮತ್ತಷ್ಟು ಪರಿಗಣನೆಯನ್ನು ಇನ್ನು ಕೆಲವು ವಾರಗಳ ಕಾಲ ಮುಂದೂಡುವುದರಲ್ಲಿ ಯಾವ ಹಾನಿ ಇದೆ? ಕನಿಷ್ಠಪಕ್ಷ ಮುಸ್ಲಿಮ್ ಲೀಗ್ ಒಂದು ಔಪಚಾರಿಕ ನಿರ್ಣಯವನ್ನು ಮಾಡಿ, ಒಳಗೆ ಬರುವ ಉದ್ದೇಶ ನಮಗಿಲ್ಲ ಎಂದು ಘೋಷಣೆ ಮಾಡುವವರೆಗಾದರೂ ಕಾಯಬಹುದು. ಅವರು ತಮ್ಮ ಉದ್ದೇಶವನ್ನು ಮುಂದಿನ ಕೆಲವು ವಾರಗಳಲ್ಲಿ ಘೋಷಿಸಬೇಕು. ಸರ್ ಸ್ಟ್ಯಾಫರ್ಡ್ ಕ್ರಿಪ್ಸ್ ಅವರು ಸಂಸತ್ತಿನ ಚರ್ಚೆಯಲ್ಲಿ ನೀಡಿದ ಹೇಳಿಕೆಯನ್ನು ನಾನು ಓದಿದೆ. ಶ್ರೀ ಜಿನ್ನಾ ಅವರು ಭಾರತಕ್ಕೆ ಮರಳಿ ಹೋದಮೇಲೆ, ೬ ನೇ ಡಿಸೆಂಬರ್‌ನ ಹೇಳಿಕೆಯನ್ನು ಕಾಂಗ್ರೆಸ್ ಒಪ್ಪಿಕೊಂಡಿದ್ದರೆ, ಅವರು ಮುಸ್ಲಿಮ್ ಲೀಗ್‌ನ ಸಭೆಯನ್ನು ಕರೆದು ಈ ಪ್ರಶ್ನೆಯ ಮೇಲೆ ನಿರ್ಧಾರ ಕೈಗೊಳ್ಳುತ್ತಾರೆ. ಹೌಸ್ ಆಫ್ ಕಾಮನ್ಸ್‌ನ ಸಭಾಂಗಣದಲ್ಲಿ ಮಾಡಿದ ಹೇಳಿಕೆ ಅದು. ಒಂದು ಅಧಿಕಾರಯುಕ್ತವಾದ ಔಪಚಾರಿಕ ನಿರ್ಣಯವನ್ನು ಕೈಗೊಂಡಮೇಲೆ ಮುಸ್ಲಿಮ್ ಲೀಗ್ ಒಳಬರದಿರಲು ನಿರ್ಧರಿಸಿತ್ತು ಎಂದು ನಿಮಗೆ ತಿಳಿದುಬಂದ ಅನಂತರ ಏನು ಮಾಡಬೇಕೆನ್ನುವುದನ್ನು ನೀವು ನಿರ್ಧರಿಸಬಹುದು. ಒಂದು ಅಡೆತಡೆಯನ್ನು ದಾಟಬಹುದಾಗಿತ್ತು. ಆದರೆ ಮುಸ್ಲಿಮ್ ಲೀಗ್ ಒಳಗೆ ಬರುವುದಿಲ್ಲ ಎಂದು ಭಾವಿಸುವುದು ನನಗೆ ಯುಕ್ತವೆಂದು ತೋರುವುದಿಲ್ಲ. ಅದು ಪ್ರಾಯೋಗಿಕ ರಾಜಕಾರಣವಲ್ಲ. ಇಂದು ಬೆಳಗ್ಗೆ ಒಬ್ಬರು ಸ್ನೇಹಿತರು ನನ್ನ ಬಳಿಗೆ ಬಂದು ಹೇಳಿದರು: ಡಾ. ಜಯಕರ್, ನಿನ್ನೆಯವರೆಗೆ ನಾನು ಸಂಪೂರ್ಣವಾಗಿ ನಿಮ್ಮ ತಿದ್ದುಪಡಿಯ ಪರವಾಗಿದ್ದೆ. ಆದರೆ ಲಂಡನ್ನಿನಲ್ಲಿ ಶ್ರೀ ಜಿನ್ನಾ ಅವರ ಸುದ್ದಿಗೋಷ್ಠಿಯು ಸಂಪೂರ್ಣ ಬದಲಾವಣೆಯನ್ನು ಮಾಡಿತು. "ನಾನು ಕೇಳದೆ, ಅದು ಯಾವ ಬದಲಾವಣೆಯನ್ನು ಮಾಡಿತು?" ಅವರು ಹೇಳಿದರು, "ಶ್ರೀ ಜಿನ್ನಾ ಅವರು ಇನ್ನೆಂದು ಈ ಸಂವಿಧಾನ ರಚನಾ ಸಭೆಯೊಳಕ್ಕೆ ಬರುವುದಿಲ" ಎಂದು ಈಗ ಹೇಳಿಕೆ ನೀಡಿದ್ದಾರೆ. ಶ್ರೀ ಜಿನ್ನಾ ಅಂತಹ ಒಂದು ಹೇಳಿಕೆಯನ್ನು ಮಾಡಿದ್ದಾರೆ ಎಂದು ನಾನು ಭಾವಿಸುವುದಿಲ್ಲ. ಒಂದು ಪಕ್ಷ ಹಾಗೆ ಮಾಡಿದ್ದರೂ ಅದು ಮುಸ್ಲಿಮ್ ಲೀಗ್‌ನ ಅಂತಿಮ, ಅಧಿಕಾರಯುಕ್ತ ಉದ್ದೇಶಪೂರ್ವಕ, ಔಪಚಾರಿಕ ಹೇಳಿಕೆ ಎಂದು ತೆಗೆದುಕೊಳ್ಳಬೇಕೆಂದು ನನಗೆ ತೋರುವುದಿಲ್ಲ. ಅಲ್ಲಿಯವರೆಗೆ ಈ ನಿರ್ಣಯದಮೇಲಿನ ಅಂತಿಮ ಮತದಾನವನ್ನು ಮುಂದೂಡುವುದರಲ್ಲಿ ಏನು ಹಾನಿಯಿದೆ? ನೀವು ಯಾವುದೇ ಪ್ರಸಂಗದಲ್ಲಿಯೂ ಯಾವುದೇ ಗಣನೀಯವಾದುದನ್ನೂ ಕನಿಷ್ಠಪಕ್ಷ ೨೦ ನೇ ಜನವರಿಗೆ ಮಾಡಲು ಹೋಗುವುದಿಲ್ಲ. ಕನಿಷ್ಠಪಕ್ಷ ಅಲ್ಲಿಯವರೆಗಾದರೂ ನೀವು ಮುಸ್ಲಿಮ್ ಲೀಗ್ ಒಳಗೆ ಬಂದು ನಡವಳಿಗಳಲ್ಲಿ ಭಾಗವಹಿಸಲು ಅನುವಾಗುವಂತೆ ಮಾರ್ಗವನ್ನು ಮುಕ್ತವಾಗಿಟ್ಟುಕೊಳ್ಳಬೇಕು. ನನ್ನ ವಾದಕ್ಕೆ ಒಂದು ಉತ್ತರ: "ಮುಸ್ಲಿಮ್ ಲೀಗ್ ಕಾನೂನು ಸಮ್ಮತವಾಗಿ ಆಕ್ಷೇಪಿಸುವಂತಹ ಯಾವುದನ್ನೂ ನಾವು ಮಾಡುತ್ತಿಲ್ಲ" ಅದು ನನ್ನ ಅಂಶವನ್ನು ಸ್ಪರ್ಶಿಸುವುದಿಲ್ಲ. ಮುಸ್ಲಿಮ್ ಲೀಗ್ ಆಕ್ಷೇಪ ಮಾಡದಿರುವಂತಹ ಯಾವುದನ್ನೋ ಮಾಡುವ ಪ್ರಶ್ನೆ ಇದಲ್ಲ. ಈ ನಿರ್ಣಯವನ್ನು ಕುರಿತ ಪರ್ಯಾಲೋಚನೆಯ ಸಮಯದಲ್ಲಿ ಅವರಿಗೆ ಇಲ್ಲಿರುವ ಹಕ್ಕು ಮತ್ತು ಅವಕಾಶವನ್ನು ಕೊಡುವ ಪ್ರಶ್ನೆ ಅದು. ಅದನ್ನು ಪಡೆಯಲೇ ನಾನು ಪ್ರಯತ್ನಮಾಡುತ್ತಿದ್ದೇನೆ. ಶ್ವೇತಪತ್ರಕ್ಕೆ ವಿರುದ್ಧವಾದದ್ದು ಇಲ್ಲಿ ಏನೂ ಇಲ್ಲ ಎಂದು ಹೇಳಲಾಗಿದೆ. ಅದೂ ಕೂಡ ಮತ್ತೆ ನನ್ನ ಅಂಶವನ್ನು ಸ್ಪರ್ಶಿಸುತ್ತಿಲ್ಲ. ನನ್ನ ಉದ್ದೇಶವು ಈ ಸಂವಿಧಾನ ರಚನಾಸಭೆಯ ಕಾರ್ಯವು ನಿಷ್ಫಲವಾಗುವುದನ್ನು ತಡೆಯುವುದು. ತಾಳಿ, ನಿಧಾನವಾಗಿ ಹೋಗಿ. ಕೆಲವೇ ವಾರಗಳು ಯಾವುದೇ ಗಣನೀಯ ವ್ಯತ್ಯಾಸವನ್ನೂ ಮಾಡುವುದಿಲ್ಲ. ಪ್ರಸ್ತುತ ಅಧಿವೇಶನದಲ್ಲಿ ಈ ನಿರ್ಣಯವನ್ನು ಅಂಗೀಕರಿಸುವ ಬದಲು ಇಂದಿನಿಂದ ಕೆಲವು ವಾರಗಳವರೆಗೆ ನೀವು ಮುಂದೂಡುವುದರಿಂದ ಮಹಾ ಹಾನಿಯೇನು ಸಂಭವಿಸುವುದಿಲ್ಲ. ವಾಸ್ತವಾಂಶವೇನೆಂದರೆ ಜನವರಿಯ ಕೊನೆಯವರೆಗೆ ನೀವು ಮುಂದೂಡಲಿದ್ದೀರಿ,

ಆದರೆ ನನ್ನ ತಿದ್ದುಪಡಿಯ ಷರತ್ತುಗಳನ್ನು ಅನುಷ್ಠಾನಗೊಳಿಸಲು ನೀವು ಹಾಗೆ ಮಾಡುವುದಿಲ್ಲ. ಅದೊಂದು ಗಮನಾರ್ಹವಾದ ಸಂಗತಿ. ನೀವು ಸ್ವಲ್ಪ ಕಾಲ ಏಕೆ ಕಾಯಬಾರದು, ತನ್ಮೂಲಕ ಮುಸ್ಲಿಮ್ ಲೀಗ್‌ಗೆ ಒಳಬರಲು ಕಡಿಮೆ ಕಷ್ಟವಾಗುವಂತೆ ಏಕೆ ಮಾಡಬಾರದು? ನಾವು ಈ ನಿರ್ಣಯವನ್ನು ಅಂಗೀಕರಿಸಿದ ಮೇಲೆ ಮುಸ್ಲಿಮ್ ಲೀಗ್ ಒಳಗೆ ಬರಬಹುದು. ನನ್ನ ಉತ್ತರವೇನೆಂದರೆ ಈ ಪರ್ಯಾಲೋಚನೆಗಳಲ್ಲಿ ಉಪಸ್ಥಿತರಿರುವುದು ಮತ್ತು ತಮ್ಮ ಕೊಡುಗೆಯನ್ನು ನೀಡುವುದು ಅವರ ಹಕ್ಕು. ದಯವಿಟ್ಟು ನೆನಪಿನಲ್ಲಿಡಿ: ಮುಸ್ಲಿಮ್ ಲೀಗ್ ನಾಯಕರು ಲಂಡನ್ನಿನ ತಮ್ಮ ಸುದ್ದಿಗೋಷ್ಠಿಯಲ್ಲಿ ಈಗಾಗಲೇ ತಮ್ಮ ಅಸಂತೋಷವನ್ನು ತೋಡಿಕೊಂಡಿದ್ದಾರೆ. "ಆಗಿಹೋದದ್ದನ್ನು *(fait accomli)* ನನಗೆ ಸಲ್ಲಿಸುವುದನ್ನು ನಾನು ಇಷ್ಟಪಡುವುದಿಲ್ಲ" ಎಂದು ಅವರು ದೂರಿದ್ದಾರೆ. ಸಂವಿಧಾನದ ಮೂಲನಿಯಮಗಳನ್ನು ರೂಪಿಸುವಂತಹ ಮುಖ್ಯವಾದ ಮತ್ತು ಜೀವಧಾರಕವಾದ ಪ್ರಶ್ನೆಯನ್ನು ಅವರು ಬರುವ ಸಾಧ್ಯತೆಗಳಿವೆ ಎಂದು ತಿಳಿದಿದ್ದರೂ ಅವರ ಗೈರುಹಾಜರಿಯಲ್ಲಿ ಮುಗಿಸಲಾಗಿದೆ ಎಂದು ಈಗ ನೀವು ಅವರಿಗೆ ನ್ಯಾಯಸಮ್ಮತವಾಗಿ ದೂರುವ ಅವಕಾಶವನ್ನು ಕೊಡುತ್ತೀರಾ? ಈ ರೀತಿಯಾಗಿ ಮುಸ್ಲಿಮ್ ಲೀಗ್ ಸಂವಿಧಾನ ರಚನಾಸಭೆಗೆ ಬರುವುದನ್ನು ಇನ್ನೂ ಹೆಚ್ಚು ಕಠಿಣವಾಗಿ ನೀವು ಮಾಡುತ್ತೀರಾ? ನಿಮ್ಮ ಗಮನವನ್ನು ಒತ್ತಾಯ ಪೂರ್ವಕವಾಗಿ ನಾನು ಸೆಳೆಯುತ್ತಿರುವುದು ಏನೆಂದರೆ, ನನ್ನ ತಿದ್ದುಪಡಿಯಂತೆ ನೀವು ಮಾಡಿದರೆ ಅದೊಂದು ಉತ್ತಮವಾದ ಕೆಲಸವನ್ನು ನೀವು ಮಾಡಿದಂತಾಗುತ್ತದೆ, ನನ್ನ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದರಲ್ಲಿ ಏನು ಹಾನಿಯಿದೆ? "ನಿಧಾನವಾಗಿ ಹೋಗಿ" ಎಂದು ನಾನು ಹೇಳುತ್ತೇನೆ. ಅದರಲ್ಲೇನು ತೊಂದರೆ? ನಾವು ನಿಧಾನವಾಗಿ ಹೋಗುತ್ತೇವೆ ಆದರೆ ನಿಮ್ಮ ತಿದ್ದುಪಡಿಗೆ ಅನುಗುಣವಾಗಿ ಅಲ್ಲ, ಅಂದರೆ, ಮುಸ್ಲಿಮ್ ಲೀಗ್ ಒಳಗೆ ಬರುವುದಕ್ಕೆ ಅನುಕೂಲ ಮಾಡಿಕೊಡುವುದಿಲ್ಲ ಎಂದು ಹೇಳಲು ನೀವು ಬಯಸುತ್ತೀರಾ? ಅದು ಘನತೆಯ ಸಂಗತಿಯಲ್ಲ. ಅದು ತೀರ ಕ್ಷುಲ್ಲಕವಾಗಿ ಕಾಣುತ್ತದೆ. 'ನಾವು ಮುಂದೂಡುತ್ತಿದ್ದೇವೆ. ಏಕೆಂದರೆ ಮುಸ್ಲಿಮ್ ಲೀಗ್‌ಗೆ ಒಳಗೆ ಬರಲು ಒಂದು ಅವಕಾಶವನ್ನು ಕೊಡಲು ನಾವು ಬಯಸುತ್ತೇವೆ. ತನ್ಮೂಲಕ ಈ ಪ್ರಶ್ನೆಯನ್ನು ಅವರ ಉಪಸ್ಥಿತಿಯಲ್ಲಿ ಚರ್ಚಿಸಿ ಅಂತಿಮವಾಗಿ ಅಂಗೀಕರಿಸಬಹುದು' ಎಂದು ನೀವು ಹೇಳಿದರೆ ಅದು ಒಂದು ಘನತೆಯಿಂದ ಕೂಡಿದ ಚರ್ಯೆಯಾಗುತ್ತದೆ ಇದು ಪಂಡಿತ್ ಜವಾಹರಲಾಲ್ ಅವರು ಹೇಳಿದ ಪರಿಸ್ಥಿತಿ. ನಾವು ಈಗ ಹಾದುಹೋಗುತ್ತಿರುವ ಮಹಾನ್ ಸಂಕಷ್ಟಗಳನ್ನು ಪರಿಗಣಿಸಿದರೆ ಪ್ರಸ್ತುತ ಸಮಯದಲ್ಲಿ ಸಹಕಾರ ಮತ್ತು ಹೊಂದಾಣಿಕೆ ಮನೋಭಾವದ ತೀವ್ರವಾದ ಅಗತ್ಯವಿದೆ. ತೊಂದರೆಗಳನ್ನು ನಾನು ನಿಮಗೆ ವಿವರಿಸಿದ್ದೇನೆ ಮತ್ತು ಈ ಕೆಲಸವು ನಿಷ್ಫಲವಾಗುವ ಅಪಾಯವನ್ನೂ ತಿಳಿಸಿದ್ದೇನೆ. ಆ ಸಾಧ್ಯತೆ ಮತ್ತು ಅಪಾಯದ ಬೆಳಕಿನಲ್ಲಿ, ನನ್ನ ಸುಪರ್ದಿನಲ್ಲಿರುವ ಎಲ್ಲ ಶಬ್ದಗಳನ್ನು ಉಪಯೋಗಿಸಿ ನಾನು ಒತ್ತಾಯ ಪೂರ್ವಕವಾಗಿ ಹೇಳುವುದೇನೆಂದರೆ ಪಂಡಿತ್ ಜವಾಹರಲಾಲ್ ನೆಹರು ಅವರ ಮಾತುಗಳನ್ನು ಕ್ರಿಯೆಯಾಗಿ ಪರಿವರ್ತಿಸಬೇಕು. ನಾವು ಮುಸ್ಲಿಮರ ಸಹಕಾರವನ್ನು ಕೋರುತ್ತೇವೆ. ಈ ನಿರ್ಣಯವನ್ನು ಮುಂದೂಡುವ ಮೂಲಕ ಅದನ್ನು ಕೋರಲು ನಾವು ನಮ್ಮ ಮಾರ್ಗದಿಂದ ಆಚೆ ಹೋಗುತ್ತಿದ್ದೇವೆ. ಮಾನ್ಯರೆ, ಇಲ್ಲಿಂದ ಮೈಲಿಗಟ್ಟಲೆ ದೂರದಲ್ಲಿ ಆ ಒಂಟಿ ಜೀವಿ ಕಾರ್ಯಮಗ್ನರಾಗಿದ್ದಾರೆ. ಅವರ ಹೆಜ್ಜೆಗಳನ್ನು ನಾವು ಅನುಸರಿಸುತ್ತಿದ್ದೇವೆಂದು ಹೇಳಿಕೊಳ್ಳುತ್ತಿದ್ದೇವೆ. ಆ ಶ್ರೇಷ್ಠ ಮಹಾತ್ಮ- ಒಂಟಿಯಾಗಿ, ಪರಿಮಿತ ಆಹಾರ, ಪರಿಮಿತ ನಿದ್ರೆ ಮತ್ತು ಆರೋಗ್ಯದ ಕೊರತೆಯಲ್ಲೂ, ದುಃಖಿತರಾಗಿ, ಏಕಾಂತದಲ್ಲಿ ಸ್ನೇಹಮಯ ಸದ್ಭಾವನೆ ಮತ್ತು ಸಹಕಾರದಲ್ಲಿ ಮುಸ್ಲಿಮ್ ಸಮುದಾಯವನ್ನು ಗೆಲ್ಲಲು ಪ್ರಯತ್ನಿಸುತ್ತಿದ್ದಾರೆ. ಅವರ ಉದಾಹರಣೆಯನ್ನು ನಾವೇಕೆ ಇಲ್ಲಿ ಅನುಸರಿಸಬಾರದು? ಮಾನ್ಯರೆ, ನಾನು ಹೀಗೆ ಹೇಳಬಹುದಾದರೆ, ಈ ಘನಗಾಂಭೀರ್ಯದಿಂದ ಕೂಡಿದ ಸಭೆಯ ಪರ್ಯಾಲೋಚನೆಗಳಿಗೆ ಅಧ್ಯಕ್ಷತೆ ವಹಿಸಲು ನೀವಿದ್ದೀರಿ ಎನ್ನುವುದು ನನಗೆ ಸಂತೋಷದ ಸಂಗತಿ. ಈ ಎಲ್ಲ ವರ್ಷಗಳಲ್ಲಿ ನಾನು ನಿಮ್ಮನ್ನು ಅರಿತಿರುವಂತೆ ನೀವು ಸದ್ಭಾವನೆಯ ಅಪಾರ ಸಾಮರ್ಥ್ಯವನ್ನು

ಹೊಂದಿದ್ದೀರಿ. ನಿಮ್ಮ ಸಜ್ಜನಿಕೆ, ಹೊಂದಾಣಿಕೆಯ ಮನೋಭಾವ ಮತ್ತು ವಿರುದ್ಧ ದೃಷ್ಟಿಕೋನವನ್ನು ನೋಡುವ ನಿಮ್ಮ ಸಾಮರ್ಥ್ಯ ಮತ್ತು ಈ ಎಲ್ಲ ಗುಣಗಳ ಬಗೆಗೆ ನಿಮಗೆ ಇರುವ ಗೌರವದಿಂದಾಗಿ ಈ ಸಮಯದಲ್ಲಿ ನೀವು ಅಧ್ಯಕ್ಷಪೀಠದಲ್ಲಿರುವುದು ಬಹಳ ಮಹತ್ತ್ವದ್ದು ಎಂದು ನಾನು ಭಾವಿಸುತ್ತೇನೆ, ಮತ್ತು ನನ್ನ ಪ್ರಯತ್ನವು ನಿಮ್ಮ ನಿರ್ದಿಷ್ಟವಾದ ಆಕರ್ಷಣೆಯ ಕೊಡುಗೆಯೊಡನೆ ಉತ್ತಮವಾಗಿ ಏಳಿಗೆಯಾಗಬಲ್ಲ ಆ ವಾತಾವರಣವನ್ನು ಸ್ಥಾಪಿಸುವುದು. ಆದ್ದರಿಂದ ನಾನು ಈ ಪ್ರಾರ್ಥನೆಯನ್ನು ಮಾಡುತ್ತಿದ್ದೇನೆ, ಏಕೆಂದರೆ ನಾವು ಈ ನಿರ್ಣಯದ ಪರಿಗಣನೆಯನ್ನು ಮುಂದೂಡಬೇಕು. ಅದರಿಂದಾಗಿ ನಿಮಗೆ ಮುಸ್ಲಿಮರ ಸಹಕಾರವನ್ನು ಪಡೆಯುವ ಅವಕಾಶ ದೊರೆಯುತ್ತದೆ. ಆದರೆ ನಿರ್ಣಯವನ್ನು ಅಂಗೀಕರಿಸಿದ ಮೇಲೆ ಅವರು ಒಳಗೆ ಬಂದಾಗ ಅವರ ಸಹಕಾರವನ್ನು ಪಡೆಯುತ್ತೇವೆ ಎಂದು ಹೇಳಲಾಗಿದೆ. ಆದರೆ ಬುದ್ಧಿಪೂರ್ವಕವಾಗಿ ಒಂದು ನಿರ್ಣಯವನ್ನು ಅಂಗೀಕರಿಸಿದಮೇಲೆ ಅದನ್ನು ಮಾರ್ಪಡಿಸುವುದು ವಿವೇಕವೂ ಅಲ್ಲ ಅಥವಾ ಸುಲಭವೂ ಅಲ್ಲ. ನನ್ನ ವಾದದ ಸಾರಾಂಶವೆಂದರೆ ಮುಸ್ಲಿಮ್ ಲೀಗ್‌ಗೆ ಈ ಪರ್ಯಾಲೋಚನೆಗಳಲ್ಲಿ ಭಾಗವಹಿಸಲು, ನಿಮ್ಮ ಪಕ್ಕದಲ್ಲಿ ಕುಳಿತುಕೊಳ್ಳಲು ಪೂರ್ವಾನ್ವಯವಾಗಿ ಆಗದೆ ಈ ನಿರ್ಣಯವನ್ನು ಅಂಗೀಕರಿಸುವ ಮುನ್ನ ಮತ್ತು ಆ ಅವಧಿಯಲ್ಲಿ ಭಾಷಣವನ್ನು ಮಾಡಲು ಒಂದು ಅವಕಾಶವನ್ನು ಕೊಡುವುದು. ಅದು ನಿಜವಾದ ಸಹಕಾರ. ಅವರು ಒಳಗೆ ಬರಲು ಬಯಸಿದ ಮೇಲೆ ನೀವು ಆಗಲೇ ಮಾಡಿ ಮುಗಿಸಿರುವುದನ್ನು ಒಪ್ಪಿಕೊಳ್ಳುವಂತೆ ಕೇಳುವುದಿಲ್ಲ.

ನನ್ನ ಈ ಅಭಿಪ್ರಾಯವನ್ನು ನಿಮ್ಮಲ್ಲಿ ಅನೇಕರು ಒಪ್ಪುವುದಿಲ್ಲ ಎನ್ನುವುದು ನನ್ನ ಆತಂಕ. "ನೀವು ತೀವ್ರವಾಗಿ ಜನಮೆಚ್ಚುಗೆಯನ್ನು ಕಳೆದುಕೊಳ್ಳುತ್ತೀರಿ" ಎಂದು ನನಗೆ ಎಚ್ಚರಿಕೆ ಕೊಡಲಾಯಿತು. "ಬಾಲ್ಯದಿಂದಲೂ ಅಪಖ್ಯಾತಿಯೇ ನನ್ನ ಪಾರಿತೋಷಕವಾಗಿತ್ತು" ಎಂದು ನನ್ನ ಮಿತ್ರರಿಗೆ ಹೇಳಿದೆ. ನಾನು ಅನೇಕ ಅಪಖ್ಯಾತಿಗಳನ್ನು ಹಾದು ಬಂದಿದ್ದೇನೆ. ಸ್ವರಾಜ್ ಪಕ್ಷವನ್ನು ಪ್ರಾರಂಭಿಸಲು ಸಹಾಯ ಮಾಡಿದಾಗ ನಾನು ಅಪಖ್ಯಾತಿಗೆ ಒಳಗಾದೆ. ನಾನು 'ರೆಸ್ಪಾನ್ಸೀವ್ ಕೋ ಆಪರೇಷನ್ ಪಾರ್ಟಿ' ಪ್ರಾರಂಭಿಸಿದಾಗ ಅಪಖ್ಯಾತನಾಗಿದ್ದೆ. ಲಂಡನ್ನಿನಲ್ಲಿ ನಡೆದ ಭಾರತೀಯ ದುಂಡು ಮೇಜಿನ ಪರಿಷತ್ತಿಗೆ ಹೋದಾಗ ನಾನು ಅಪಖ್ಯಾತನಾಗಿದ್ದೆ. ೧೯೩೫ರ ಕಾಯಿದೆಯನ್ನು ಅಂಗೀಕರಿಸುವಲ್ಲಿ ನಾನು ಸೇರಿಕೊಂಡಾಗ ಅಪಖ್ಯಾತನಾಗಿದ್ದೆ. ನನ್ನ ಅಭಿಪ್ರಾಯದ ಪ್ರಕಾರ ನೀವು ವಿವೇಚನಾರಹಿತವಾಗಿ ಆ ಶಾಸನವನ್ನು ತಿರಸ್ಕರಿಸಿದಾಗ ನಾನು ಅಪಖ್ಯಾತನಾಗಿದ್ದೆ. ಹಾಗೆ ಮಾಡಿದಮೇಲೆ ಆ ತಿರಸ್ಕೃತ ಶಾಸನದಿಂದ ನಾಲ್ಕು ಅಂಶಗಳನ್ನು ಈಗ ಎರವಲು ಪಡೆದುಕೊಳ್ಳುತ್ತಿದ್ದೀರಿ: ಒಂದು ಒಕ್ಕೂಟ, ಕೃಶಗೊಳಿಸಿದ ಒಂದು ಕೇಂದ್ರ, ಸ್ವಯಮಾಧಿಕಾರದ ಪ್ರಾಂತ್ಯಗಳು ಮತ್ತು ಪ್ರಾಂತ್ಯಗಳಲ್ಲಿ ಉಳಿಕೆಯ ಅಧಿಕಾರಗಳು. ಹೇಗಾದರೂ ಕಾಲ ಉರುಳಿದಂತೆ ನನ್ನ ಅಪಖ್ಯಾತಿಗಳು ಉಬ್ಬಿ ಬೃಹದಾಕಾರದ ಬಹುಸಂಖ್ಯೆಯನ್ನು ತಳೆದಿವೆ ಎಂದು ನಾನು ಹೇಳಬಹುದೆ? ಆದ್ದರಿಂದ ನನ್ನ ಈ ವಯಸ್ಸಿನಲ್ಲಿ ಮತ್ತು ಅನುಭವದಲ್ಲಿ ಅಪಖ್ಯಾತಿಗಳು ನನ್ನನ್ನು ಬೆದರಿಸುವುದಿಲ್ಲ. ನೀವು ಅನುಸರಿಸಲು ಹೊರಟಿರುವ ಮಾರ್ಗವು ತಪ್ಪು, ನ್ಯಾಯಾಬಾಹಿರ, ಅಪಕ್ವ, ಅಪಾಯಕಾರಿ ಮತ್ತು ಅನರ್ಥಕಾರಿ ಎಂದು ನಿಮಗೆ ಹೇಳಬೇಕಾದದ್ದು ನನ್ನ ಕರ್ತವ್ಯ. ಅದು ನಿಮ್ಮನ್ನು ತೊಂದರೆಯತ್ತ ಕರೆದೊಯ್ಯುತ್ತದೆ, ನಾನು ನಿಮ್ಮ ಪಕ್ಷದಿಂದ ಟಿಕೆಟ್ ಪಡೆದು ಚುನಾಯಿತನಾಗಿರುವುದರಿಂದ ಬಿಚ್ಚು ಮನಸ್ಸಿನಿಂದ ನಿಮಗೆ ಹೇಳಲು ನಾನು ಬದ್ಧನಾಗಿದ್ದೇನೆ. ಮುಂದೆ ಅಪಾಯವಿದೆ, ಆಶಾಭಂಗಗೊಳ್ಳುವ ಅಪಾಯವಿದೆ. ಘರ್ಷಣೆ ಮತ್ತು ವಿಭಜನೆಯ ಅಪಾಯವಿದೆ. ಅದನ್ನು ನಿವಾರಿಸುವುದು ನಮ್ಮ ಕರ್ತವ್ಯ. ಮಾನ್ಯರೆ, ನನ್ನ ಮಾತನ್ನು ಮುಗಿಸುತ್ತೇನೆ.

**ಮಾನ್ಯ ಅಧ್ಯಕ್ಷರು** : ಸರ್ ಹರಿಸಿಂಗ್ ಗೌರ್ ಒಂದು ತಿದ್ದುಪಡಿಯ ಅಧಿಸೂಚನೆಯನ್ನು ಕೊಟ್ಟಿದ್ದಾರೆ. ಇದು ನನಗೆ ಕ್ರಮರಹಿತವಾಗಿಲ್ಲ ಎಂದು ತೋರುತ್ತದೆ. ಆದರೆ ಹಾಗೆ ತೀರ್ಪು ಕೊಡುವ ಮೊದಲು ಅದು ಹೇಗೆ ಪ್ರಕೃತ ವಿಷಯಕ್ಕೆ ಸಂಬಂಧಿಸಿದೆ ಎಂದು ತೋರಿಸಿಕೊಡಲು ಸರ್ ಹರಿಸಿಂಗ್ ಗೌರ್ ಅವರನ್ನು ಕೇಳುತ್ತೇನೆ. ಆ ತಿದ್ದುಪಡಿಯು ಹೀಗಿದೆ:

"ಏನೆಂದರೆ ಸದರಿ ನಿರ್ಣಯದಲ್ಲಿ ಈ ಶಬ್ದಗಳಿಗೆ:

"ಈ ಸಭೆಯ ನಡವಳಿಗಳಲ್ಲಿ ಭಾಗವಹಿಸಲು ಈ ಎರಡು ಸಂಸ್ಥೆಗಳ ಪ್ರತಿನಿಧಿಗಳು ಬಯಸಿದರೆ ಅದು ಸಾಧ್ಯವಾಗುವಂತೆ ಮಾಡಲು ಈ ಸಭೆಯು ಈ ಪ್ರಶ್ನೆಯನ್ನು ಕುರಿತ ಮುಂದಿನ ಪರಿಗಣನೆಯನ್ನು ಮುಂದಿನ ಒಂದು ದಿನಾಂಕಕ್ಕೆ ಮುಂದೂಡುತ್ತದೆ.

ಮುಂದಿನ ಶಬ್ದಗಳನ್ನು ಬದಲಿಯಾಗಿ ಬಳಸಬೇಕು:

"ಈ ಸಭೆಯ ಅಭಿಪ್ರಾಯವೇನೆಂದರೆ ಎಲ್ಲೆಡೆಯೂ ಪಾಕಿಸ್ತಾನದ ಇತಿಹಾಸವನ್ನು ದೃಷ್ಟಿಯಲ್ಲಿಟ್ಟುಕೊಂಡು ಮುಸ್ಲಿಮ್ ಲೀಗ್ ಮಾಡಿದ ಹಕ್ಕೊತ್ತಾಯವು ಆತ್ಮಘಾತಕವಾಗಿದೆ ಮತ್ತು ಏನೆಂದರೆ ಮುಸಲ್ಮಾನರು ಮತ್ತು ಇತರ ಸಮುದಾಯಗಳ ಹಿತದೃಷ್ಟಿಯಲ್ಲಿ ಮತದಾರರ ಸಮುದಾಯವನ್ನು ನಿಯೋಜಿಸಬೇಕು, ಅದರಲ್ಲಿ ಅಲ್ಪಸಂಖ್ಯಾತ ಸಮುದಾಯಗಳಿಗೆ ಮುಂದಿನ ಐದು ವರ್ಷಗಳ ಕಾಲ ಸಮಾನ ಸ್ಥಾನಮಾನಗಳನ್ನು ಕಾಯ್ದಿರಿಸಬೇಕು ಮತ್ತು ಮತ್ತಷ್ಟು ಸುರಕ್ಷತೆಯನ್ನು ಒದಗಿಸುವುದಕ್ಕಾಗಿ ಬೇರೆ ಸಮುದಾಯಗಳ ಇಂತಿಷ್ಟು ಶೇಕಡಾವಾರು ಮತಗಳನ್ನು ಗಳಿಸದಿದ್ದರೆ ಒಂದು ಸಮುದಾಯದ ಯಾವ ಸದಸ್ಯನೂ ಕ್ರಮಬದ್ಧವಾಗಿ ಚುನಾಯಿತನಾಗಿದ್ದಾನೆ ಎಂದು ಪರಿಗಣಿಸಬಾರದು."

ಮೂಲ ನಿರ್ಣಯ ಅಥವಾ ಡಾ. ಜಯಕರ್ ಅವರ ತಿದ್ದುಪಡಿಯಲ್ಲಿ ಇರುವುದಕ್ಕಿಂತ ತೀರ ಆಚೆಗೆ ಈ ತಿದ್ದುಪಡಿಯು ಹೋಗುತ್ತದೆ ಎಂದು ತೋರಬಹುದು. ಆದ್ದರಿಂದ ನಾನು ಇದು ಕ್ರಮಬದ್ಧವಾಗಿಲ್ಲ ಎಂದು ಹೇಳುವ ನಿಲುವನ್ನು ತಾಳಬಹುದು. ಆದರೆ ನಾನು ಈ ಹಂತದಲ್ಲಿ ನನ್ನ ತೀರ್ಮಾನವನ್ನು ಕೊಡುವುದಿಲ್ಲ. ಅದು ಹೇಗೆ ಕ್ರಮಬದ್ಧವಾಗಿದೆ ಎಂದು ತೋರಿಸುವಂತೆ ನಾನು ಅವರನ್ನು ಕೇಳುತ್ತೇನೆ.

**ಡಾ. ಸರ್ ಹರಿಸಿಂಗ್ ಗೌರ್** (ಸಿ. ಪಿ. ಮತ್ತು ಬೇರಾರ್ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಡಾ. ಜಯಕರ್ ಅವರ ತಿದ್ದುಪಡಿಯು ಕ್ರಮಬದ್ಧವಾಗಿದೆ ಎಂದು ಹೇಳುವ ನನ್ನ ತಿದ್ದುಪಡಿಯ ಪ್ರಶ್ನೆಯ ಮೇಲೆ ಉತ್ತರಿಸಲು ನನ್ನನ್ನು ಕರೆಯಲಾಗಿದೆ ಎಂಬುದು ಸದ್ಯದ ವಿಷಯವಾಗಿದೆ. ಡಾ. ಜಯಕರ್ ಅವರ ತಿದ್ದುಪಡಿಯು ಕ್ರಮಬದ್ಧವಾಗಿದ್ದರೆ ಆ ತಿದ್ದುಪಡಿಯ ಮೇಲಿನ ನನ್ನ ತಿದ್ದುಪಡಿಯೂ ಕ್ರಮಬದ್ಧವಾಗಿದೆ ಎಂದು ಅರಿಕೆಮಾಡಿಕೊಳ್ಳಲು ನಾನು ಬಯಸುತ್ತೇನೆ. ಆ ತಿದ್ದುಪಡಿಯ ಕಾನೂನಾತ್ಮಕತೆ ಅಥವಾ ಕ್ರಮಬದ್ಧತೆಯನ್ನು ತೋರಿಸುವುದರ ವಿನಾ ಹೆಚ್ಚಿನದೇನನ್ನೂ ನಾನು ಮಾಡಿಲ್ಲ ಎಂದು ಭಾವಿಸಬೇಕು. ನಾನು ಯಾವಾಗಲೂ ಯೋಚಿಸುತ್ತಿದ್ದುದು ಏನೆಂದರೆ ಡಾ. ಜಯಕರ್ ಅವರು ಇಡೀ ನಿರ್ಣಯವನ್ನು ಕೈಬಿಡಬೇಕೆಂದು ಬಯಸಿದ್ದರೆ ಪ್ರಾಯಃ ಅದು ಒಂದು ತಿದ್ದುಪಡಿಯ ರೂಪದಲ್ಲಿ ಬರುತ್ತಿರಲಿಲ್ಲ. ತಿದ್ದುಪಡಿ ಎಂದರೆ ಸರಿಪಡಿಸುವುದು. ಆದ್ದರಿಂದ ಗೌರವಾನ್ವಿತ ಪಂಡಿತ್ ಜವಾಹರಲಾಲ್ ಅವರ ಮೂಲ ನಿರ್ಣಯವನ್ನು ಅವರು ಸರಿಪಡಿಸಿದಂತೆ ಅಂಗೀಕರಿಸಬೇಕು. ಅದು ಒಂದು ತಿದ್ದುಪಡಿ ಎಂದಾಗಬಹುದು. ಮೂಲ ನಿರ್ಣಯವನ್ನು ಸಂಪೂರ್ಣವಾಗಿ ತೊಡೆದು ಹಾಕಬೇಕೆಂದು ನೀವು ಬಯಸಿದರೆ ಮತ್ತು ಒಂದು ಮಧ್ಯಂತರ ಅವಧಿಯವರೆಗೆ ಯಾವ ಚರ್ಚೆಯೂ ಇರಬಾರದು ಎಂದು ಬಯಸಿದರೆ, ಡಾ. ಜಯಕರ್ ಅವರು ಏನನ್ನು ತಿದ್ದುಪಡಿ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂದು ಅರ್ಥಮಾಡಿಕೊಳ್ಳಲು ನಾನು ವಿಫಲವಾಗುತ್ತೇನೆ. ಅವರು ಮೊದಲು ತಮ್ಮ ತಿದ್ದುಪಡಿಯನ್ನೇ ತಿದ್ದುಪಡಿ ಮಾಡಿಕೊಳ್ಳುವುದು ಉತ್ತಮ. ಆ ತಿದ್ದುಪಡಿಯು ಅಂಗೀಕಾರವಾಗುತ್ತದೆ ಎಂದು ನಾನು ಭಾವಿಸಿಕೊಂಡೆ, ಆದ್ದರಿಂದ ನನ್ನ ತಿದ್ದುಪಡಿಗೆ ಅಧಿಸೂಚನೆಯನ್ನು ಕೊಟ್ಟೆ. ಆದರೆ ಮಾನ್ಯ ಅಧ್ಯಕ್ಷರೆ, ಅವರ ತಿದ್ದುಪಡಿ ಮತ್ತು ನನ್ನದರ ಬಗೆಗೆ ಸ್ವಲ್ಪ ಮಟ್ಟಿನ ಮಾನಸಿಕ ಮೀಸಲನ್ನು ಇಟ್ಟುಕೊಂಡು ನಾನು ಅದಕ್ಕೆ ಪೂರಕವಾಗಿ ಮೂಲ ನಿರ್ಣಯದ ಮೇಲೆ ಇನ್ನೊಂದು ತಿದ್ದುಪಡಿಯ ಅಧಿಸೂಚನೆಯನ್ನು ನೀಡಿದ್ದೇನೆ. ಅದು ಮುಖ್ಯಾಂಶಗಳಲ್ಲಿ ನನ್ನ ಪ್ರಸ್ತುತ ತಿದ್ದುಪಡಿಯ ಎಲ್ಲ ಷರತ್ತುಗಳನ್ನು ಮರು ನಿರೂಪಿಸುತ್ತದೆ. ಈಗ, ಸಂಕ್ಷಿಪ್ತವಾಗಿ ನನ್ನ ಪ್ರಕರಣ ಇದಾಗಿದೆ. ಗೌರವಾನ್ವಿತ ಡಾ.

ಜಯಕರ್ ಅವರ ತಿದ್ದುಪಡಿಯು ಕ್ರಮಬದ್ಧವಾಗಿದೆ ಎಂದಾದರೆ ಮತ್ತು ಅದನ್ನು ಚರ್ಚಿಸಲಾಗುವುದಾದರೆ, ಅದನ್ನು ಸರಿಪಡಿಸಲು ನನಗೆ ಅರ್ಹತೆ ಇದೆ. ಇನ್ನೊಂದು ಕಡೆಯಿಂದ ನೋಡಿದರೆ ಅದು ಕ್ರಮಬದ್ಧವಾಗಿಲ್ಲ ಎಂದು ತೀರ್ಪು ನೀಡಿದರೆ, ನಾನು ನನ್ನ ತಿದ್ದುಪಡಿಯನ್ನು ಮಂಡಿಸಲು ಬಯಸುವುದಿಲ್ಲ.

ಹಾಗಿದ್ದರೆ ನಾನು ಅಧಿಸೂಚನೆ ನೀಡಿರುವ ಎರಡನೆಯ ತಿದ್ದುಪಡಿಯನ್ನು ಮಂಡಿಸುತ್ತೇನೆ.

**ಮಾನ್ಯ ಅಧ್ಯಕ್ಷರು** : ಸಮಯ ಬಂದಾಗ ನಾವು ಎರಡನೆಯ ತಿದ್ದುಪಡಿಯನ್ನು ಎತ್ತಿಕೊಳ್ಳೋಣ.

ಡಾ. ಹರಿಸಿಂಗ್ ಗೌರ್ ಅವರು ಮಾಡಿದ ತಿದ್ದುಪಡಿಯಿಂದ ಈ ನಿರ್ಣಯವು ಇಡಿಯಾಗಿ ಹೀಗೆ ಕಾಣುತ್ತದೆ:

"ಈ ಸಭೆಯು ತನ್ನ ದೃಢವಾದ ಮತ್ತು ವಿದ್ಯುಕ್ತವಾದ ನಿರ್ಧಾರವನ್ನು ಘೋಷಿಸುವುದು ಏನೆಂದರೆ, ಭಾರತದ ಭಾವೀ ಆಡಳಿತಕ್ಕಾಗಿ ಈ ಸಭೆಯು ಸಿದ್ಧಗೊಳಿಸಲಿರುವ ಸಂವಿಧಾನವು ಒಂದು ಸ್ವತಂತ್ರವಾದ ಮತ್ತು ಪ್ರಜಾಸತ್ತಾತ್ಮಕವಾದ ಸೌರ್ವಭೌಮ ದೇಶಕ್ಕಾಗಿ ಇರಬೇಕು; ಆದರೆ ಅಂತಹ ಒಂದು ಸಂವಿಧಾನವನ್ನು ರೂಪಿಸುವಾಗ, ಮುಸ್ಲಿಮ್ ಲೀಗ್ ಮತ್ತು ಭಾರತೀಯ ರಾಜ್ಯಗಳ ಸಹಕಾರವನ್ನು ಪಡೆದುಕೊಳ್ಳುವ ದೃಷ್ಟಿಯನ್ನು ಹೊಂದಿರಬೇಕು, ಮತ್ತು ಆ ಮೂಲಕ ಈ ನಿರ್ಧಾರದ ದೃಢತೆಯನ್ನು ತೀವ್ರಗೊಳಿಸುವುದಕ್ಕಾಗಿ ಈ ಸಭೆಯ ಅಭಿಪ್ರಾಯವೇನೆಂದರೆ ಎಲ್ಲೆಡೆಯೂ ಪಾಕಿಸ್ತಾನದ ಇತಿಹಾಸವನ್ನು ದೃಷ್ಟಿಯಲ್ಲಿಟ್ಟುಕೊಂಡು ಮುಸ್ಲಿಮ್ ಲೀಗ್ ಮಾಡಿದ ಹಕ್ಕೊತ್ತಾಯವು ಆತ್ಮಘಾತಕವಾಗಿದೆ ಮತ್ತು ಏನೆಂದರೆ ಮುಸಲ್ಮಾನರು ಮತ್ತು ಇತರ ಸಮುದಾಯಗಳ ಹಿತದೃಷ್ಟಿಯಲ್ಲಿ ಮತದಾರರ ಸಮುದಾಯವನ್ನು ನಿಯೋಜಿಸಬೇಕು, ಅದರಲ್ಲಿ ಅಲ್ಪಸಂಖ್ಯಾತ ಸಮುದಾಯಗಳಿಗೆ ಮುಂದಿನ ಐದು ವರ್ಷಗಳ ಕಾಲ ಒಂದು ನಿರ್ದಿಷ್ಟವಾದ ಸಂಖ್ಯೆಯ ಸೀಟುಗಳನ್ನು ಕಾಯ್ದಿರಿಸಬೇಕು ಮತ್ತು ಮತ್ತಷ್ಟು ಸುರಕ್ಷತೆಯನ್ನು ಒದಗಿಸುವುದಕ್ಕಾಗಿ ಬೇರೆ ಸಮುದಾಯಗಳ ಇಂತಿಷ್ಟು ಶೇಕಡಾವಾರು ಮತಗಳನ್ನು ಗಳಿಸದಿದ್ದರೆ ಒಂದು ಸಮುದಾಯದ ಯಾವ ಸದಸ್ಯನೂ ಕ್ರಮಬದ್ಧವಾಗಿ ಚುನಾಯಿತನಾಗಿದ್ದಾನೆ ಎಂದು ಪರಿಗಣಿಸಬಾರದು."

ಡಾ. ಹರಿಸಿಂಗ್ ಗೌರ್ ನಿರ್ಣಯದ ಎರಡು ಭಾಗಗಳನ್ನು ಜೋಡಿಸುವಲ್ಲಿ ಅಸಮರ್ಥರಾಗಿದ್ದಾರೆ ಎಂದು ತಿಳಿಸಲು ನಾನು ವಿಷಾದಿಸುತ್ತೇನೆ ಮತ್ತು ಅದು ಕ್ರಮಬದ್ಧವಾಗಿಲ್ಲ.

ತಿದ್ದುಪಡಿಯ ಅಧಿಸೂಚನೆಗಳನ್ನು ಕೊಟ್ಟಿರುವ ಸದಸ್ಯರನ್ನು ಅವು ಕ್ರಮಬದ್ಧವಾಗಿದ್ದರೆ, ಒಬ್ಬರಾದ ಮೇಲೊಬ್ಬರಂತೆ ಮಂಡಿಸಲು ಕರೆಯಬೇಕೆಂದು ನಾನು ಉದ್ದೇಶಿಸಿದ್ದೇನೆ. ನಿರ್ಣಯ ಮತ್ತು ತಿದ್ದುಪಡಿಗಳನ್ನು ಒಟ್ಟಿಗೆ ಚರ್ಚಿಸಬಹುದು. ಅದು ಸಮಯವನ್ನು ಉಳಿತಾಯ ಮಾಡುತ್ತದೆ ಎಂದು ನಾನು ಭಾವಿಸುತ್ತೇನೆ.

**ಡಾ. ಬಿ. ಪಟ್ಟಾಭಿ ಸೀತಾರಾಮಯ್ಯ** : ಗೌರವಾನ್ವಿತ ಡಾ. ಜಯಕರ್ ಅವರ ತಿದ್ದುಪಡಿಯು ನಿರ್ಣಯದ ಪರಿಗಣನೆಯ ನಿಲುವಳಿ ಸೂಚನೆಯ ಸ್ವರೂಪದಲ್ಲಿರುವುದರಿಂದ, ಬೇರೆ ತಿದ್ದುಪಡಿಗಳಿಗಿಂತ ಇದು ಚರ್ಚೆ ಮತ್ತು ತೀರ್ಮಾನ ಎರಡರಲ್ಲೂ ಆದ್ಯತೆಯನ್ನು ಪಡೆಯಬೇಕು. ಇತರ ತಿದ್ದುಪಡಿಗಳು ಪ್ರಸ್ತಾವದ ಹಕ್ಕುಬಾಧ್ಯತೆಗಳಿಗೆ ಸಂಬಂಧಿಸಿದ ತಿದ್ದುಪಡಿಗಳಾಗಿವೆ.

**ದಿವಾನ್ ಚಮನಲಾಲ್** (ಪಂಜಾಬ್ : ಸಾಮಾನ್ಯ) : ಡಾ. ಜಯಕರ್ ಅವರ ತಿದ್ದುಪಡಿ ಕೂಡ ಹಕ್ಕುಬಾಧ್ಯತೆಗಳಿಗೆ ಸಂಬಂಧಿಸಿದ್ದು. ಅದು ಕಾರ್ಯವಿಧಾನಕ್ಕೆ ಸಂಬಂಧಿಸಿದ್ದಲ್ಲ, ಅಲ್ಲದೆ ಅದು ಪ್ರಜಾಪ್ರಭುತ್ವವನ್ನು ಕುರಿತು, ಗಣರಾಜ್ಯ ಎಂಬ ಶಬ್ದವನ್ನು ತೆಗೆದುಹಾಕುವುದನ್ನು ಕುರಿತು ಮಾತನಾಡುತ್ತದೆ. ಅದು ಮುಂದಿನ ಪರಿಗಣನೆಯನ್ನು ಮುಂದೂಡಬಹುದೆಂದು ಹೇಳಿದರೂ ಅದನ್ನು ಕೇವಲ ಕಾರ್ಯವಿಧಾನಕ್ಕೆ ಸಂಬಂಧಿಸಿದ ತಿದ್ದುಪಡಿ ಎಂದು ಪರಿಗಣಿಸಲಾಗುವುದಿಲ್ಲ.

**ಮಾನ್ಯ ಅಧ್ಯಕ್ಷರು** : ನಾವು ಅದನ್ನು ಒಂದು ತಿದ್ದುಪಡಿ ಎಂದೇ ಪರಿಗಣಿಸಿದ್ದೇವೆ. ಮುಂದಿನ

ತಿದ್ದುಪಡಿಯ ಅಧಿಸೂಚನೆಯನ್ನು ನೀಡಿದವರು ಶ್ರೀ ಸೋಮನಾಥ ಲಹಿರಿ. ಆ ತಿದ್ದುಪಡಿಗೆ ಸಂಬಂಧಿಸಿದಂತೆ ಕೂಡ ಪ್ರಸ್ತುತ ನನ್ನ ಅಭಿಪ್ರಾಯವು ಅದು ಕ್ರಮಬದ್ಧವಾಗಿಲ್ಲ ಎನ್ನುವುದೇ ಆಗಿದೆ. ಅದು ಹೇಗೆ ಕ್ರಮಬದ್ಧವಾಗಿದೆ ಎಂದು ತೋರಿಸುವಂತೆ ನಾನು ಅವರನ್ನು ಕೇಳುತ್ತೇನೆ.

**ಶ್ರೀ ಸೋಮನಾಥ ಲಹಿರಿ** (ಬಂಗಾಳ : ಸಾಮಾನ್ಯ) : ಮಾನ್ಯ ಅಧ್ಯಕ್ಷರೇ, ಭಾರತವನ್ನು ಒಂದು ಸ್ವತಂತ್ರ ಸಾರ್ವಭೌಮ ಗಣರಾಜ್ಯವೆಂದು ಘೋಷಿಸುವುದು ಈ ಸಂವಿಧಾನ ರಚನಾಸಭೆಯ ಗುರಿಯಾಗಿರಬೇಕೆಂದು ದೃಢನಿಶ್ಚಯವನ್ನು ಸೂಚಿಸುವ ಮೂಲ ನಿರ್ಣಯದ ಮೇಲೆ ನನ್ನದೊಂದು ತಿದ್ದುಪಡಿ ಇದೆ. ನನ್ನ ತಿದ್ದುಪಡಿಯನ್ನು ಒಂದು ತಿದ್ದುಪಡಿಯನ್ನಾಗಿಯೇ ಪರಿಗಣಿಸಲಾಗುತ್ತದೆ. ಇದಕ್ಕಿರುವ ಸರಳ ಕಾರಣವೆಂದರೆ ಅದು ಅದೇ ವಿಷಯವನ್ನು ಕುರಿತು ವಿವೇಚಿಸುತ್ತದೆ. ಅದು ಮೂಲನಿರ್ಣಯದ ಮುಖ್ಯವಿಚಾರಕ್ಕೆ ವಿರುದ್ಧವಾಗಿ ಹೋಗುವುದಿಲ್ಲ. ಅದು ಮೂಲ ನಿರ್ಣಯದ ವ್ಯಾಪ್ತಿಯನ್ನು ವಿಸ್ತರಿಸುವಲ್ಲಿ ತಿದ್ದುಪಡಿಯ ವ್ಯಾಪ್ತಿಯಲ್ಲಿಯೇ ಸದಾ ಇರುತ್ತದೆ.

**ಮಾನ್ಯ ಅಧ್ಯಕ್ಷರು :** ನಿಮ್ಮ ತಿದ್ದುಪಡಿಯ ವಿಷಯದಲ್ಲಿ ತೆಗೆದುಕೊಂಡ ಆಕ್ಷೇಪವೇನೆಂದರೆ, ಮೂಲ ನಿರ್ಣಯದಲ್ಲಿಲ್ಲದ ಕೆಲವು ಕ್ರಮಗಳನ್ನು ಅದು ವಿಧಿಸುತ್ತದೆ. ಉದಾಹರಣೆಗೆ ಇಲ್ಲಿಯೇ ಮತ್ತು ಈಗಾಗಲೇ ಗಣರಾಜ್ಯವನ್ನು ಘೋಷಿಸಬೇಕೆಂದು ಅದು ಬಯಸುತ್ತದೆ. ಅದು ಮಧ್ಯಂತರ ಸರ್ಕಾರವು ಒಂದು ನಿರ್ದಿಷ್ಟವಾದ ರೀತಿಯಲ್ಲಿ ನಡೆದುಕೊಳ್ಳಬೇಕೆಂದು ಕರೆಕೊಡುತ್ತದೆ, ಮತ್ತು ಈ ಬಗೆಯ ಇನ್ನೂ ಅನೇಕ ಇತರ ವಿಷಯಗಳಿವೆ. ಅದು ಒಂದು ನಿರ್ಣಯವಾಗಿದೆ. ಇಲ್ಲಿಯೇ ಮತ್ತು ಈಗಲೇ ಕ್ರಮ ಕೈಗೊಳ್ಳಬೇಕೆಂದು ನಿರ್ದೇಶಿಸುವ ನಿರ್ಣಯ ಇದಾಗಿರುವುದರಿಂದ ಆ ಅರ್ಥದಲ್ಲಿ ಅದು ಕ್ರಮಬದ್ಧವಾಗಿಲ್ಲ ಎಂದು ಸೂಚಿಸಲಾಗಿದೆ.

**ಶ್ರೀ ಸೋಮನಾಥ ಲಾಹಿರಿ :** ಆ ನಿರ್ಣಯದ ಉದ್ದೇಶಗಳ ಮುಂದುವರಿಕೆಯಾಗಿ ಕೆಲವು ಕ್ರಮಗಳನ್ನು ಸೂಚಿಸಲಾಗಿದ್ದು, ಅದು ಖಂಡಿತವಾಗಿಯೂ ತಿದ್ದುಪಡಿಯ ವ್ಯಾಪ್ತಿಯೊಳಗೆ ಬರುತ್ತದೆ ಎಂದು ನಾನು ಭಾವಿಸುತ್ತೇನೆ. ಉದಾಹರಣೆಗೆ, ಗೌರವಾನ್ವಿತ ಜವಾಹರಲಾಲ್ ನೆಹರು ಅವರು ಮಂಡಿಸಿದ ಮೂಲ ನಿರ್ಣಯದಲ್ಲಿ ಇಲ್ಲದ ಮುಸ್ಲಿಮ್ ಲೀಗ್ ಮತ್ತು ಇತರ ವಿಷಯಗಳಿಗೆ ಸಂಬಂಧಿಸಿದ ಕೆಲವು ವಿಚಾರಗಳನ್ನು ಡಾ. ಜಯಕರ್ ಅವರ ನಿರ್ಣಯದಲ್ಲಿ ನೀವು ಅನುಮತಿಸಿದ್ದೀರಿ. ಮುಸ್ಲಿಮ್ ಲೀಗ್ ಮತ್ತು ಇತರರು ಒಳಗೆ ಬರಲು ಒಂದು ಅವಕಾಶವನ್ನು ಕೊಡಬೇಕು ಎಂದು ಅವರು ಯೋಚಿಸುತ್ತಾರೆ ಎಂಬ ಕಾರಣಕ್ಕಾಗಿ ಸಭೆಯನ್ನೇ ಮುಂದೂಡುವ ಮಟ್ಟಿಗೆ ಕ್ರಮವನ್ನು ಕೈಗೊಳ್ಳಬೇಕೆ? ಅವರು ತಮ್ಮ ತಿದ್ದುಪಡಿಯನ್ನು ಸೂಚಿಸಿದರು ಮತ್ತು ಅದು ಸಂಪೂರ್ಣವಾಗಿ ಕ್ರಮಬದ್ಧವಾಗಿದೆ ಎಂದು ನೀವು ಒಪ್ಪಿಕೊಂಡಿದ್ದೀರಿ. ಮುಂದೂಡುವುದು ಹೇಗೆ ಒಂದು ಬಗೆಯ ಕ್ರಿಯೆಯೋ, ಸಲಹೆ ಮಾಡಬಹುದಾದ ಬೇರೆ ಯಾವುದೇ ಸಂಗತಿ ಕೂಡ ಖಂಡಿತವಾಗಿಯೂ ಕ್ರಮಬದ್ಧವಾಗಿರುತ್ತದೆ. ೧೯೩೯ ರ ಒಂದು ಘಟನೆಯನ್ನು ನಿಮಗೆ ಜ್ಞಾಪಿಸುತ್ತೇನೆ ಮಾನ್ಯರೆ. ಆಗ ನೀವು ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದಿರಿ. ಆಗ ಯುದ್ಧ ಘೋಷಣೆಯಾದ ಸಮಯದಲ್ಲಿ ಎ. ಐ. ಸಿ. ಸಿ. ಯಲ್ಲಿ ಒಂದು ನಿರ್ಣಯವನ್ನು ಮಂಡಿಸಲಾಯಿತು. ಅಲ್ಲಿ ಪಂಡಿತ್ ಜವಾಹರಲಾಲ್ ನೆಹರು ಅವರು ಬ್ರಿಟಿಷರಿಗೆ ತಮ್ಮ ಯುದ್ಧದಲ್ಲಿ ನಾವು ಸಹಕರಿಸಲು ಕೆಲವು ಷರತ್ತುಗಳನ್ನು ವಿಧಿಸಿ ಅವುಗಳ ಆಧಾರದ ಮೇಲೆ ತಾವು ಸಹಕರಿಸುವುದಾಗಿ ಒಂದು ನಿರ್ಣಯವನ್ನು ಮಂಡಿಸಿದರು. ನಾನು ಕೂಡ ಒಂದು ತಿದ್ದುಪಡಿಯನ್ನು ಮಂಡಿಸಿದ್ದಾಗಿ ನೆನಪಾಗುತ್ತಿದೆ. ನಾವು ದೇಶವನ್ನು ಹೋರಾಟಕ್ಕೆ ಸಿದ್ಧಗೊಳಿಸಬೇಕು ಎಂದು ಅದು ಹೇಳಿತ್ತು. ಮೂಲ ನಿರ್ಣಯದಲ್ಲಿ ಏನನ್ನು ಸಂವಹನಿಸಲಾಗಿತ್ತೋ ಅದಕ್ಕೆ ಈ ತಿದ್ದುಪಡಿಯ ಉದ್ದೇಶವು ತೀರ ವಿರುದ್ಧವಾಗಿದೆ ಎಂದು ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು ಅವರು ಎತ್ತಿ ತೋರಿಸಿದರೂ, ಅಧ್ಯಕ್ಷರಾಗಿದ್ದ ನೀವು ಅದು ಪೂರ್ಣವಾಗಿ ಕ್ರಮಬದ್ಧವಾಗಿದೆ ಎಂದು ಹೇಳಿದ್ದಿರಿ.

**ಒಬ್ಬರು ಗೌರವಾನ್ವಿತ ಸದಸ್ಯರು :** ಅದು ವರದಿಯಾಗಿರುವ ಒಂದು ಪ್ರಕರಣವೆ?

**ಮಾನ್ಯ ಅಧ್ಯಕ್ಷರು** : ಅದು ಒಂದು ಪೂರ್ವೋದಾಹರಣೆಯಾಗಲಾರದು ಎಂದು ಹೇಳಲು ನಾನು ವಿಷಾದಿಸುತ್ತೇನೆ. (ನಗು).

**ಶ್ರೀ ಸೋಮನಾಥ ಲಾಹಿರಿ** : ಇದು ನನ್ನ ಅರಿಕೆ. ಆದರೂ ಇದನ್ನು ಕ್ರಮಬದ್ಧವಲ್ಲವೆಂದು ನಿರ್ಣಯ ಕೊಡಲು ನೀವು ಯೋಚಿಸಿದರೆ, ಮುಖ್ಯ ನಿರ್ಣಯದ ಮೇಲೆ ಮಾತನಾಡುವ ಅವಕಾಶವನ್ನು ನನಗೆ ಕೊಟ್ಟರೆ ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಬಲ್ಲೆ.

**ಮಾನ್ಯ ಅಧ್ಯಕ್ಷರು** : ಈ ತಿದ್ದುಪಡಿಯು ಕ್ರಮಬದ್ಧವಾಗಿಲ್ಲ ಎಂದು ನಾನು ಭಾವಿಸುತ್ತೇನೆ. ಮುಖ್ಯ ನಿರ್ಣಯದ ಮೇಲೆ ಮಾತನಾಡಲು ಮುಂದೆ ನಿಮಗೆ ಅವಕಾಶ ಕೊಡುತ್ತೇನೆ.

ಸದಸ್ಯರು ಅಧಿಸೂಚನೆಯ ನೀಡಿದ್ದ ಅನೇಕ ತಿದ್ದುಪಡಿಗಳನ್ನು ಹಿಂದಕ್ಕೆ ತೆಗೆದುಕೊಳ್ಳಲಾಗಿದೆ ಎಂಬ ಸೂಚನೆ ನನಗೆ ಬಂದಿದೆ. ಅಂತಹ ಅಭಿಪ್ರಾಯವನ್ನು ವ್ಯಕ್ತಪಡಿಸಿಲ್ಲದ ಸದಸ್ಯರು ಮಾತ್ರ ಇಚ್ಛೆಪಟ್ಟರೆ ತಮ್ಮ ತಿದ್ದುಪಡಿಗಳನ್ನು ಮಂಡಿಸಬಹುದು ಎಂದು ಆಹ್ವಾನಿಸುತ್ತಿದ್ದೇನೆ. ಆದ್ದರಿಂದ ಹಿಂದಕ್ಕೆ ತೆಗೆದುಕೊಂಡಿಲ್ಲದ ಮುಂದಿನ ತಿದ್ದುಪಡಿಯೆಂದರೆ ರಾಯ್ ಬಹಾದೂರ್ ಶ್ಯಾಮನಂದನ ಸಹಾಯ ಅವರದು. ಅವರು ಬಯಸಿದರೆ ಮುಂದೆ ಬಂದು ತಮ್ಮ ತಿದ್ದುಪಡಿಯನ್ನು ದಯವಿಟ್ಟು ಮಂಡಿಸಬಹುದು.

**ರಾಯ್ ಬಹಾದೂರ್ ಶ್ಯಾಮನಂದನ ಸಹಾಯ** (ಬಿಹಾರ್ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ನಾನು ಮಂಡಿಸುತ್ತೇನೆ ಮಾನ್ಯರೆ:

> "ಏನೆಂದರೆ ನಿರ್ಣಯದ ೧ನೆಯ ಮತ್ತು ೨ನೆಯ ಕಂಡಿಕೆಗಳ ಬದಲಾಗಿ ಕೆಳಗೆ ನಮೂದಿಸಿದ್ದನ್ನು ಸೇರಿಸಬಹುದು:
>
> ಅತ್ಯಂತ ಕ್ಷಿಪ್ರಕಾಲದಲ್ಲಿ ಭಾರತವನ್ನು ಪ್ರಾರಂಭದ ಹಂತದಲ್ಲಿ ಕೆಳಕಂಡವುಗಳಿಂದ ಕೂಡ ಒಂದು ಸ್ವತಂತ್ರ ಸಾರ್ವಭೌಮ ಗಣತಂತ್ರವಾಗಿ ನಿಯೋಜಿಸಲು ತನ್ನ ದೃಢ ಮತ್ತು ವಿಧ್ಯುಕ್ತ ನಿರ್ಧಾರವನ್ನು ಈ ಸಂವಿಧಾನ ರಚನಾಸಭೆಯು ಘೋಷಿಸುತ್ತದೆ–
>
> (ಎ) ಈಗ ಬ್ರಿಟಿಷ್ ಇಂಡಿಯಾ ಎಂದು ರೂಪಿತವಾಗಿರುವ ಪ್ರದೇಶಗಳು, ಮತ್ತು ಸಾಧ್ಯವಾದಷ್ಟು ಬೇಗ ಮುಂದಿನವೂ ಕೂಡ,
>
> (ಬಿ) ಈಗ ಭಾರತದ ರಾಜ್ಯಗಳು ಎಂದು ರೂಪಿತವಾಗಿರುವ ಪ್ರದೇಶಗಳು,
>
> (ಸಿ) ಬ್ರಿಟಿಷ್ ಇಂಡಿಯಾ ಮತ್ತು ಭಾರತದ ರಾಜ್ಯಗಳ ಹೊರಗಿರುವಂತಹ ಇತರ ಭಾಗಗಳು ಮತ್ತು
>
> (ಡಿ) ಸ್ವತಂತ್ರ ಸಾರ್ವಭೌಮ ಭಾರತದ ಗಣರಾಜ್ಯವನ್ನು ಸೇರಲು ಇಷ್ಟಪಡುವ ಇತರ ಪ್ರದೇಶಗಳು, ಮತ್ತೂ ಮುಂದುವರಿದು ನಿರ್ಧರಿಸುವುದೇನೆಂದರೆ ಭಾವೀ ಆಡಳಿತಕ್ಕಾಗಿ ಒಂದು ಸಂವಿಧಾನವನ್ನು ರಚಿಸಬೇಕು ಮತ್ತು ವಿಧಿಸಬೇಕು."

ಮಾನ್ಯರೆ, ಕೆಲಮಟ್ಟಿನ ಹಿಂಜರಿಕೆಯಿಂದ ನಾನು ಇಲ್ಲಿ ನನ್ನ ತಿದ್ದುಪಡಿಯನ್ನು ಮಂಡಿಸಲು ನಿಂತಿದ್ದೇನೆ. ಈ ನಿರ್ಣಯದ ಗೌರವಾನ್ವಿತ ಮಂಡನೆಕಾರರ ಮಹೋನ್ನತವಾದ ಮತ್ತು ಅದ್ಭುತವಾದ ಭಾಷಣದ ಅನಂತರ ನನ್ನ ಈ ತಿದ್ದುಪಡಿಯನ್ನು ಕಳುಹಿಸಿಕೊಡಲು ನಿರ್ಧರಿಸುವ ಮುನ್ನ ಬಹಳವಾದ ಯೋಜನೆ ಮತ್ತು ಡೋಲಾಯಮಾನ ಸ್ಥಿತಿಯನ್ನು ಅನುಭವಿಸಬೇಕಾಯಿತು. ವಿಶೇಷವಾದ ಕಾರಣವೇನೆಂದರೆ ಗೌರವಾನ್ವಿತ ಮಂಡನೆಕಾರರು ಅದರ ಉದ್ದೇಶ ಸಾಧನೆಯ ಹಾದಿಯಲ್ಲಿ ಪ್ರಾಯಃ ಅಡ್ಡನಿಲ್ಲದಿದ್ದರೆ ಯಶಸ್ವಿಯಾಗುತ್ತದೇನೋ ಎಂದು ನಾನು ಯೋಚಿಸಿದೆ. ಈ ಸಂವಿಧಾನ ರಚನಾಸಭೆಯನ್ನು ಇಂದು ನಿಯೋಜಿಸುವ ನಮ್ಮಂಥವರನ್ನು ಕೆಲವು ಹಿತಾಸಕ್ತಿಯ ಪಕ್ಷಗಳು ಪ್ರತ್ಯೇಕಗೊಳಿಸಲು ಪ್ರಾಯಃ ಪ್ರಯತ್ನ ಮಾಡಬಹುದೇನೋ ಎಂಬ ಭೀತಿ ನನಗಿದೆ. ಆದರೆ ಏನೇ ಸಂಭವಿಸಲಿ ಈ ಸಂವಿಧಾನ ರಚನಾಸಭೆಯು ತನ್ನ ಕೆಲಸದಲ್ಲಿ ಮುಂದುವರಿಯಬೇಕು ಎನ್ನುವುದು ನನ್ನ ಅಪೇಕ್ಷೆ, ನನ್ನ ತೀವ್ರವಾದ ಅಪೇಕ್ಷೆ, ಮತ್ತು ನಾನು ತಿಳಿದಂತೆ ಅದು ಇಲ್ಲಿ ಸೇರಿರುವ

ಪ್ರತಿಯೊಬ್ಬರ ಅಪೇಕ್ಷೆಯೂ ಆಗಿದೆ. ಗೌರವಾನ್ವಿತ ಡಾ. ಜಯಕರ್ ಅವರು ತಮ್ಮ ಭಾಷಣದಲ್ಲಿ ಅನೇಕ ಕಷ್ಟಗಳ ಬಗೆಗೆ ಉಲ್ಲೇಖಿಸಿದರು. ಅವರು ಎತ್ತಿತೋರಿದ ಕಷ್ಟಗಳಲ್ಲಿ ಒಂದು ಎಂದರೆ ನಾವು ಸಂಪುಟ ನಿಯೋಗ ವಿಧಿಸಿದ ಪರಿಮಿತಿಗಳ ಅಡಿಯಲ್ಲಿ ಕೆಲಸಮಾಡಬೇಕು. ಸಾಂವಿಧಾನಿಕ ಕಾನೂನುಗಳ ಪರಿಜ್ಞಾನದಲ್ಲಿ ನಾನು ಅವರಿಗೆ ಯಾವ ರೀತಿಯಲ್ಲೂ ಹತ್ತಿರದಲ್ಲಿಲ್ಲ. ಆದರೆ ಈ ಸಂವಿಧಾನ ರಚನಾಸಭೆಯ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹೇಳಿದ್ದನ್ನು ನಾನು ಕೇಳಿದ ಪ್ರಕಾರ, ಸಂವಿಧಾನ ರಚನಾಸಭೆಯ ಮೇಲೆ ಪರಿಮಿತಿಗಳನ್ನು ಹೇರಲಾಗಿದೆಯಾದರೂ, ಅವುಗಳಿಂದ ಪಾರಾಗುವ ಅಂತರ್ನಿಹಿತವಾದ ಹಕ್ಕು ಅದಕ್ಕಿದೆ. ನನ್ನ ತಿದ್ದುಪಡಿಯನ್ನು ಈ ಪರಿಗಣನೆಯನ್ನು ಮೇಲೆ ಭಾಗಶಃ ಆಧರಿಸಿದ್ದೇನೆ. ಮಾನ್ಯರೆ, ಈಗ ಮೂಲ ನಿರ್ಣಯ ಮತ್ತು ನಾನು ಮಂಡಿಸಿರುವ ತಿದ್ದುಪಡಿಯ ನಡುವಣ ವ್ಯತ್ಯಾಸವನ್ನು ತೋರಿಸಲು ಪ್ರಯತ್ನಿಸುತ್ತೇನೆ. ಏಕೆಂದರೆ ಈ ನಿರ್ಣಯದಲ್ಲಿ ನಾನು ಕೆಲವು ಬದಲಾವಣೆಗಳನ್ನು ಏಕೆ ಸೇರಿಸಿದೆ ಎನ್ನುವುದನ್ನು ವಿವರಿಸಬೇಕಾದ ಅಗತ್ಯವಿದೆ. ಮೊದಲನೆಯದಾಗಿ ನಾನು 'ಘೋಷಿಸು' (proclaim) ಎಂಬ ಶಬ್ದವನ್ನು 'ನಿಯೋಜಿಸು' (constitute) ಎಂದು ಬದಲಾಯಿಸಿದ್ದೇನೆ. ಹಾಗೆ ಮಾಡಿದ್ದರ ಕಾರಣವನ್ನು ಮುಂದೆ ಕೊಡುತ್ತೇನೆ. ಈಗ ನಿರ್ಣಯ ಮತ್ತು ತಿದ್ದುಪಡಿಯ ನಡುವಣ ವ್ಯತ್ಯಾಸ ಏನು ಎಂಬುದಷ್ಟನ್ನೇ ತೋರಿಸುತ್ತೇನೆ. ಆಮೇಲೆ ನಾನು 'ಒಕ್ಕೂಟ' (Union) ಎಂಬ ಶಬ್ದವನ್ನು ತೆಗೆದುಹಾಕಿದ್ದೇನೆ. ನಾನು "ಅತ್ಯಂತ ಕ್ಷಿಪ್ರಕಾಲದಲ್ಲಿ" ಎಂಬ ಶಬ್ದಗಳನ್ನು ಸೇರಿಸಿದ್ದೇನೆ. ಸಂವಿಧಾನವನ್ನು ರಚಿಸುವುದಷ್ಟೇ ಅಲ್ಲ ಅದನ್ನು ವಿಧಿಸಬೇಕು ಎಂದು ಹೇಳಿದ್ದೇನೆ. ಇವು ಪ್ರಸ್ತಾವಿತವಾದ ನಿರ್ಣಯ ಮತ್ತು ನನ್ನ ತಿದ್ದುಪಡಿಯ ನಡುವಣ ಕೆಲವು ವ್ಯತ್ಯಾಸಗಳ ಪ್ರಧಾನ ವಿವರಗಳು. ನಾನು ಈ ನಿರ್ಣಯವನ್ನು ಜಾಗರೂಕತೆಯಿಂದ ಓದಿದ್ದೇನೆ ಮತ್ತು ಈ ನಿರ್ಣಯದ ಗೌರವಾನ್ವಿತ ಸೂಚಕರ ಮುಂದೆ ಕೆಲಮಟ್ಟಿಗೆ ನನ್ನ ಅಭಿಪ್ರಾಯಗಳನ್ನು ಮಂಡಿಸುವ ಒಂದು ಅವಕಾಶ ನನಗೆ ದೊರೆತಿತ್ತು. ಅವರು ಈ ನಿರ್ಣಯದ ಶಬ್ದವಿನ್ಯಾಸ ಅಲ್ಲಲ್ಲಿ ಹಳೆಯ ಕಾಲದ ರೀತಿಯಲ್ಲಿದೆ ಎಂಬುದನ್ನು ಒಪ್ಪಿಕೊಂಡಿದ್ದರು. ಅಮೆರಿಕದ ಸಂವಿಧಾನ ರಚಕರಿಗೆ ಅಥವಾ ಇತರ ದೇಶಗಳ ಸಂವಿಧಾನಗಳಿಗೆ ಪ್ರಾಯಃ ಒಂದು ಕಾನೂನನ್ನು ರೂಪಿಸಲು ಅಥವಾ ಒಂದು ಸಂವಿಧಾನವನ್ನು ರಚಿಸಲು ೧೦೦ ವರ್ಷಗಳ ಹಿಂದೆ ಉಪಯೋಗಿಸುತ್ತಿದ್ದ ಪಾರಿಭಾಷಿಕ ಶಬ್ದಗಳನ್ನು ಬಳಸುವುದು ಅಗತ್ಯವಾಗಿದ್ದಿರಬಹುದು, ಆದರೆ ನಮ್ಮ ವಿಷಯದಲ್ಲಿ, ಹಿಂದಿನ ಸಂವಿಧಾನಗಳಲ್ಲಿ ಬಳಕೆಯಾಗಿವೆ ಎಂಬ ಒಂದೇ ಕಾರಣದಿಂದ ಶಬ್ದಗಳನ್ನು ಉಪಯೋಗಿಸುವುದಕ್ಕಿಂತ ಖಚಿತವಾಗಿರುವುದು ಮತ್ತು ನಮ್ಮ ಅಭಿಪ್ರಾಯವನ್ನು ನಿಸ್ಸಂದಿಗ್ಧವಾದ ಮತ್ತು ಸುಲಭವಾಗಿ ಅರ್ಥಮಾಡಿಕೊಳ್ಳಬಹುದಾದ ಭಾಷೆಯಲ್ಲಿ ನಿರೂಪಿಸುವುದು ಹೆಚ್ಚು ಉಪಯುಕ್ತ ಮತ್ತು ಹೆಚ್ಚು ಸಹಾಯಕವಾಗಿರುತ್ತದೆ ಎಂದು ನಾನು ಭಾವಿಸುತ್ತೇನೆ. ನಾನು ಪ್ರಸ್ತಾವಿಸಿದ ಬದಲಾವಣೆಗಳಿಗೆ ಕಾರಣಗಳೇನು ಎಂದು ಈಗ ನಾನು ವಿವರಿಸಲು ಪ್ರಯತ್ನಿಸುತ್ತೇನೆ. ಈ ಸಂವಿಧಾನ ರಚನಾಸಭೆಯು ಏನನ್ನು ಮಾಡಬೇಕೆಂದು ನೀವು ಬಯಸುತ್ತಿರೋ ಅದು ಖಚಿತವಾಗಿ ಘೋಷಣೆ ಎಂಬ ಶಬ್ದವಲ್ಲ ಎಂದು ನಾನು ಭಾವಿಸುತ್ತೇನೆ. ಇದಕ್ಕೆ ಮುಂಚೆ ಬೇರೆ ಸಂದರ್ಭಗಳಲ್ಲಿ ಸ್ವಾತಂತ್ರ್ಯದ ಘೋಷಣೆಯನ್ನು ಮಾಡಲಾಗಿತ್ತು ಎಂದು ನಾನು ಭಾವಿಸುತ್ತೇನೆ. ಈಗ ನಮ್ಮ ಕರ್ತವ್ಯವೆಂದರೆ ನಮ್ಮ ರಾಷ್ಟ್ರವನ್ನು ಒಂದು ಸ್ವತಂತ್ರವಾದ ಸಾರ್ವಭೌಮ ಗಣರಾಜ್ಯವಾಗಿ ನಿಯೋಜಿಸುವುದು. ಆದ್ದರಿಂದ ನಾನು 'ಘೋಷಿಸು' ಎಂಬ ಶಬ್ದದ ಬದಲು 'ನಿಯೋಜಿಸು' ಎಂಬ ಶಬ್ದವನ್ನು ಸೇರಿಸಿದ್ದೇನೆ. ಮಾನ್ಯರೆ, 'ಒಕ್ಕೂಟ' ಎಂಬ ಶಬ್ದವನ್ನು ಕೂಡ ನಾನು ಕೈಬಿಟ್ಟಿದ್ದೇನೆ. ಭಾರತವೆಂದರೆ ಭಾರತವೇ ಎಂದು ನಾನು ನಂಬಿದ್ದೇನೆ. ಅದಕ್ಕೆ ಒಕ್ಕೂಟದ ಅಗತ್ಯವಿಲ್ಲ. ಅದಕ್ಕೆ ದೈವದತ್ತವಾದ ಒಗ್ಗಟ್ಟಿದೆ. ಅದನ್ನು ಈಗ ಪುನರುಚ್ಚರಿಸಲೂ ನಾನು ಇಷ್ಟಪಡುವುದಿಲ್ಲ. ಏಕೆಂದರೆ ಭಾರತದ ಒಕ್ಕೂಟವನ್ನು ಇನ್ನೂ ಸಾಧಿಸಬೇಕಾಗಿದೆ ಎಂದು ಅದನ್ನು ಅರ್ಥೈಸಲು ಹೋಗಬಹುದು. ಪ್ರಸ್ತುತ ನಾವು ರಚಿಸುವ ಸಂವಿಧಾನವನ್ನು ಭಾರತದ ಒಂದು ಭಾಗದಲ್ಲಿ ಮಾತ್ರ ಜಾರಿಗೆ ತರಲು ನಾವು ಸಮರ್ಥರಾಗಬಹುದು

ಎನ್ನುವುದು ತೀರ ಬೇರೆಯಾದ ಸಂಗತಿ. ಆದರೆ ಆದಷ್ಟು ಶೀಘ್ರವಾಗಿ ಅದನ್ನು ಇತರ ಭಾಗಗಳಲ್ಲೂ ಜಾರಿಗೆ ತರುವುದನ್ನು ನಾವು ಎದುರು ನೋಡುತ್ತಿದ್ದೇವೆ. ಹೀಗಿರುತ್ತ ನನ್ನ ವಿವೇಚನೆಗೆ ಬಿಟ್ಟರೆ ಭಾರತ ಎಂಬ ಶಬ್ದವನ್ನು ಹಾಗೇ ಉಳಿಸಿಕೊಳ್ಳಲು ಮತ್ತು 'ಒಕ್ಕೂಟ' ಎಂಬ ಶಬ್ದವನ್ನು ಬಳಸದಿರಲು ಬಯಸುತ್ತೇನೆ. ಬೇರೆ ದೇಶಗಳಲ್ಲಿ 'ಒಕ್ಕೂಟ' ಎಂಬ ಶಬ್ದವನ್ನು ಉಪಯೋಗಿಸಲಾಗಿದ್ದು, ಹಾಗೆ ಉಪಯೋಗಿಸಲು ಉತ್ತಮ ಕಾರಣವಿದೆ. ಇಲ್ಲಿ 'ಒಕ್ಕೂಟ' ಎಂಬ ಶಬ್ದವನ್ನು ಕೈಬಿಡುವುದು ಉತ್ತಮ ಎಂದು ಭಾವಿಸುತ್ತೇನೆ. ಅನಂತರ ನಾನು ಹೇಳಿದಂತೆ 'ರಚಿಸು ಮತ್ತು ವಿಧಿಸು' ಎಂಬ ಶಬ್ದಗಳನ್ನು ಬಳಸಿದ್ದೇನೆ. ಈ ಹಿಂದೆ ಈ ಸದನದಲ್ಲಿ ಹೇಳಿದ್ದನ್ನು ನಾನು ಕೇಳಿರುವುದೇನೆಂದರೆ ಸಂವಿಧಾನ ರಚನಾಸಭೆಯು ತನ್ನ ಹಿನ್ನೆಲೆಯಲ್ಲಿ ತಾನು ರಚಿಸುವ ಸಂವಿಧಾನವನ್ನು ಅನುಷ್ಠಾನಗೊಳಿಸಲು ಅನುಮತಿಯನ್ನು ಪಡೆದಿದೆ. ಅಲ್ಲದೆ ನಾನು ಮೇ ೧೬ ರ ಘೋಷಣೆಯನ್ನು ಕೂಡ ಜಾಗರೂಕತೆಯಿಂದ ಓದಿದ್ದೇನೆ. ಇಲ್ಲಿ ಅನುಮೋದಿತವಾಗುವ ಸಂವಿಧಾನವು ಬ್ರಿಟಿಷ್ ಸಂಸತ್ತಿನಲ್ಲಿ ಮಂಜೂರಾತಿಯನ್ನು ಪಡೆಯಬೇಕು ಎಂದು ಅದು ಎಲ್ಲಿಯೂ ಹೇಳಿಲ್ಲ. ಅಲ್ಲಿ ವಿಧಿಸಲಾಗಿರುವ ಎರಡು ಅತ್ಯಾವಶ್ಯಕವಾದ ಷರತ್ತುಗಳು ಎಂದರೆ ಇಂಗ್ಲೆಂಡ್ ಮತ್ತು ಭಾರತದ ನಡುವೆ ಒಂದು ಕೌಲನ್ನು ಮಾಡಿಕೊಳ್ಳಲಾಗುವುದು ಮತ್ತು ಅಲ್ಪಸಂಖ್ಯಾತರನ್ನು ಸಂರಕ್ಷಿಸಲಾಗುವುದು. ಆದ್ದರಿಂದ ನಾನು ಭಾವಿಸುವುದೇನೆಂದರೆ, ಇಲ್ಲಿ ಸೇರಿರುವ ನಾವು ಕೇವಲ ಒಂದು ಸಂವಿಧಾನವನ್ನು ರಚಿಸುವ ಹಕ್ಕು ಮತ್ತು ಅಧಿಕಾರವನ್ನಷ್ಟೇ ಹೊಂದಿಲ್ಲ, ಅದನ್ನು ವಿಧಿಸುವ ಹಾಗೂ ಅನುಷ್ಠಾನಕ್ಕೆ ತರುವ ಜವಾಬ್ದಾರಿಯನ್ನೂ ಹೊಂದಿದ್ದೇವೆ. ಆ ಕಾರಣದಿಂದಾಗಿಯೇ ನಾನು 'ಬರೆಯುವುದು' ಎಂಬ ಶಬ್ದವನ್ನು ಬಿಟ್ಟು ಬದಲಿಗೆ 'ರಚಿಸು ಮತ್ತು ವಿಧಿಸು' ಎಂಬ ಶಬ್ದಗಳನ್ನು ಉಪಯೋಗಿಸಿದ್ದೇನೆ.

ಮಾನ್ಯರೆ, ತಿದ್ದುಪಡಿಯಲ್ಲಿ ನಾನು ಮಾಡಿರುವ ಇನ್ನೊಂದು ಮುಖ್ಯ ಬದಲಾವಣೆ ಎಂದರೆ, ಸಮಸ್ತ ಭಾರತದಲ್ಲಿ ಈ ಸಂವಿಧಾನವು ಅನುಷ್ಠಾನಕ್ಕೆ ಬರುವ ವಿವಿಧ ಹಂತಗಳನ್ನು ನಿರ್ದಿಷ್ಟವಾಗಿ ಹೇಳಲು ಪ್ರಯತ್ನಿಸಿದ್ದೇನೆ. ನಾನು ತೋರಿಸಿಕೊಡಬಹುದಾದರೆ, ಮೂಲ ನಿರ್ಣಯದಲ್ಲೂ ಕೂಡ ಪ್ರಾಯಃ ಮುಂದೆ ತೀರ ತಡವಾಗಿ ಒಕ್ಕೂಟಕ್ಕೆ ಬರಬಹುದಾದ ಕೆಲವು ಪ್ರದೇಶಗಳನ್ನು ಕಲ್ಪಿಸಿಕೊಳ್ಳಲಾಗಿದೆ. ಮಾನ್ಯರೆ, ಬ್ರಿಟಿಷ್ ಇಂಡಿಯಾ ಮತ್ತು ಭಾರತೀಯ ರಾಜ್ಯಗಳು ಇವೆರಡರಿಂದಲೂ ಆಚೆ ಇವೆ ಎಂದು ವರ್ಣಿಸಲಾದ ಎರಡು ಪ್ರದೇಶಗಳನ್ನು ನಾನು ಉಲ್ಲೇಖಿಸುತ್ತೇನೆ. ಒಕ್ಕೂಟದಲ್ಲಿ ಸೇರಿಕೊಳ್ಳಲು ಆಸಕ್ತವಾಗಿರಬಹುದಾದ ಅಂತಹ ಇನ್ನೂ ಇತರ ಪ್ರದೇಶಗಳಿವೆ. ಈಗ ಒಕ್ಕೂಟದ ಈ ಎರಡು ಭಾಗಗಳು ಈ ಕ್ಷಣ ಇಲ್ಲಿ ಖಂಡಿತವಾಗಿಯೂ ಒಳಗೆ ಬರುವುದಿಲ್ಲ. ಆದ್ದರಿಂದ ಮೂಲ ನಿರ್ಣಯದಲ್ಲಿ ಕೂಡ ಸಂಪೂರ್ಣ ಒಕ್ಕೂಟದ ರಚನೆಯನ್ನು ವಿವಿಧ ಹಂತಗಳಲ್ಲಿ ಕಲ್ಪಿಸಿಕೊಳ್ಳಲಾಗಿದೆ. ಆದ್ದರಿಂದ ನಾನು ನನ್ನ ತಿದ್ದುಪಡಿಯಲ್ಲಿ ವಿಶದಪಡಿಸಲು ಪ್ರಯತ್ನಿಸಿರುವುದೇನೆಂದರೆ ಸ್ವತಂತ್ರ ಸಾರ್ವಭೌಮ ಗಣರಾಜ್ಯವು ಪ್ರಥಮತಃ ಈಗ ಬ್ರಿಟಿಷ್ ಇಂಡಿಯಾದಲ್ಲಿ ಇರುವ ಪ್ರದೇಶಗಳನ್ನು ಒಳಗೊಳ್ಳುತ್ತದೆ. ಅನಂತರ ಸಾಧ್ಯವಾದಷ್ಟು ಬೇಗ ಭಾರತದ ರಾಜ್ಯಗಳಾಗಿರುವ ಪ್ರದೇಶಗಳು ಕೂಡ ಬರುತ್ತವೆ. ಈ ಹಿಂದೆ ನಾನು ಹೇಳಿದಂತೆ, ಈ ತಿದ್ದುಪಡಿಯನ್ನು ಮಂಡಿಸುವಲ್ಲಿ ನನಗಿರುವ ಮುಖ್ಯ ಉದ್ದೇಶವೇನೆಂದರೆ, ಮೊದನೆಯ ನಿರ್ಣಯವನ್ನು ಮಂಡಿಸುತ್ತಿರುವ ಸಮಯದಲ್ಲಿ ಅದರ ಶಬ್ದವಿನ್ಯಾಸ ಹೇಗಿರಬೇಕೆಂದರೆ ಮುಂದೆ ಯಾವುದೇ ಹಂತದಲ್ಲಿ ಅದನ್ನು ಬದಲಾಯಿಸಬೇಕಾಗಿ ಬರಬಾರದು ಎನ್ನುವುದನ್ನು ನೋಡಿಕೊಳ್ಳುವುದು. ಏನೇ ಆಗಲಿ ಇದು ಈ ಸಭೆಯ ಮೊದಲನೆಯ ಕ್ರಿಯೆ. ಮುಂದೆ ಉದ್ಭವಿಸಬಹುದಾದ ಪರಿಸ್ಥಿತಿಗಳಿಂದ ನಿರ್ಣಯವನ್ನು ತಿದ್ದುಪಡಿಮಾಡಬೇಕಾದ ಅಗತ್ಯವನ್ನು ಯಾರೂ ಇಷ್ಟಪಡುವುದಿಲ್ಲ. ಬ್ರಿಟಿಷ್ ಇಂಡಿಯಾ ಎಂದು ರೂಪಿತವಾದ ಪ್ರದೇಶಗಳಿಗೆ ಒಂದು ಸ್ವತಂತ್ರ ಸಾರ್ವಭೌಮ ಗಣರಾಜ್ಯವನ್ನು ಈ ಹಿಂದೆ ಆ ಪ್ರದೇಶದಿಂದ ಕೂಡಿದ ಬಹುಪಾಲು ಅಂಗಗಳು ಒಪ್ಪಿಕೊಂಡಿದ್ದವು. ಬೇರೆಯವರು ಸೂಚಿಸಿದಂತೆ ಅಲ್ಲಿ ಕಷ್ಟಗಳು ಇದ್ದಿರಬಹುದು. ಪ್ರಾಯಃ ನಾವು ಆ ಕಷ್ಟಗಳನ್ನು ಪರಿಗಣನೆಗೆ

ತೆಗೆದುಕೊಂಡು ಅವುಗಳನ್ನು ಪರಿಹರಿಸಲು ಪ್ರಯತ್ನಿಸಬೇಕು. ಆದ್ದರಿಂದ ನಾನು ಈ ನಿರ್ಣಯದಲ್ಲಿ ಹಂತಗಳನ್ನು ಸೂಚಿಸಿದ್ದೇನೆ. ಅದರ ಮೂಲಕ ನಾವು ಅಂತಿಮವಾಗಿ ಈ ಸ್ವತಂತ್ರ ಸಾರ್ವಭೌಮ ಗಣರಾಜ್ಯವನ್ನು ಅದರ ಸಂಪೂರ್ಣ ಸ್ವರೂಪದಲ್ಲಿ ರಚಿಸಬಹುದು. ಆದರೆ ಯಾರ ಜೊತೆಗಾರಿಕೆಯನ್ನು ಖಂಡಿತವಾಗಿಯೂ ಕೋರುತ್ತಿದ್ದೇವೆಯೋ ಅದನ್ನು ಪಡೆಯಲು ಕಾತರದಿಂದ ಕಾದಿದ್ದೇವೆಯೋ ಅದನ್ನು ಪಡೆಯಲು ನಮಗೆ ಸಾಧ್ಯವಾಗದೇ ಹೋದರೂ ಸ್ವಾತಂತ್ರ್ಯದ ಕಡೆಗಿನ ನಮ್ಮ ಯಾತ್ರೆಗೆ ಅಡಚಣೆಯುಂಟಾಗುವುದಿಲ್ಲ. ಮತ್ತು ಸಂವಿಧಾನವನ್ನು ರಚಿಸುವುದಕ್ಕೆ ಮುಂಚೆ ಪ್ರದೇಶಗಳೂ ಒಪ್ಪಿಕೊಳ್ಳಬೇಕೆಂದು ನಾವು ಕಾಯಬೇಕಾದ ಅಗತ್ಯವೇನಿಲ್ಲ. ಮಾನ್ಯರೆ, ಈ ತಿದ್ದುಪಡಿಯನ್ನು ಮಂಡಿಸಲು ನನ್ನನ್ನು ಪ್ರೇರೇಪಿಸಿದ ಕಾರಣಗಳು ಇವು. ಈ ನಿರ್ಣಯದ ಗೌರವಾನ್ವಿತ ಸೂಚಕರು ಇಂದು ಇಲ್ಲಿ ಉಪಸ್ಥಿತರಿಲ್ಲದ್ದಕ್ಕೆ ನನಗೆ ಬಹಳ ವಿಷಾದವಾಗಿದೆ. ವಾಸ್ತವವಾಗಿ, ಸಂಪೂರ್ಣವಾಗಿ ನನ್ನ ಅಪೇಕ್ಷೆ ಇದ್ದದ್ದು ನನ್ನ ಮನಸ್ಸಿನಲ್ಲಿದ್ದ ಈ ಅಂಶಗಳನ್ನು ಅವರ ಗಮನಕ್ಕೆ ತರುವುದು ಮತ್ತು ಈ ತಿದ್ದುಪಡಿಗಳನ್ನು ಅಥವಾ ಅವರು ಪ್ರತಿಪಾದಿಸಿದ ಮೂಲ ಕಲ್ಪನೆಗಳಿಗೆ ವಿರುದ್ಧವಾಗಿಲ್ಲದ ಅದರ ಭಾಗಗಳನ್ನು ಅಂಗೀಕರಿಸಲು ಸಾಧ್ಯವೇ ಎಂದು ಪರಿಗಣಿಸಲು ಅವರನ್ನು ಕೋರುವುದು.

**ಮಾನ್ಯ ಅಧ್ಯಕ್ಷರು** : ಮುಂದಿನ ತಿದ್ದುಪಡಿಯನ್ನು ಔಪಚಾರಿಕವಾಗಿ ಹಿಂಪಡೆಯಲಾಗಿಲ್ಲ. ಅದರ ಅಧಿಸೂಚನೆ ನೀಡಿರುವವರು ಶ್ರೀ ಗೋವಿಂದ ಮಾಲವೀಯ. ಅವರು ಉಪಸ್ಥಿತರಿಲ್ಲ. ಆದರೆ ಅವರು ನನಗೆ ಅಧಿಕಾರ ನೀಡಿದ್ದಾರೆ– ಸ್ವತಃ ಅವರೇ ನನಗೆ ಹೇಳಿದ್ದಾರೆ– ತಮ್ಮ ತಿದ್ದುಪಡಿಯನ್ನು ಮಂಡಿಸಲು ಅವರು ಇಷ್ಟಪಡುತ್ತಿಲ್ಲ. ಆದ್ದರಿಂದ ಅದನ್ನು ಕೂಡ ಹಿಂಪಡೆಯಲಾಗಿದೆ ಎಂದು ನಾನು ತೆಗೆದುಕೊಳ್ಳುತ್ತೇನೆ.

ಅನಂತರ ರಾಯ್ ಬಹಾದೂರ್ ಶ್ಯಾಮನಂದನ ಸಹಾಯ ಅವರ ಇನ್ನೊಂದು ತಿದ್ದುಪಡಿ ಇದೆ.

**ರಾಯ್ ಬಹಾದೂರ್ ಶ್ಯಾಮನಂದನ ಸಹಾಯ** : ಮಾನ್ಯರೆ, ನನ್ನ ಹೆಸರಿನಲ್ಲಿರುವ ಇನ್ನೊಂದು ತಿದ್ದುಪಡಿಯು ನಿರ್ಣಯದ ೪ ನೆಯ ಕಂಡಿಕೆಯನ್ನು ಕುರಿತಂತೆ ಇದೆ. ಅದರಂತೆ ಮುಂದಿನ ಶಬ್ದಗಳನ್ನು ಬಿಟ್ಟುಬಿಡಬೇಕು:

"ಸಾರ್ವಭೌಮ ಸ್ವತಂತ್ರ ಭಾರತದ ಅದರ ನಿಯೋಜಿತ ಭಾಗಗಳ ಮತ್ತು ಸರ್ಕಾರದ ಅಂಗಗಳ."

ಮೂಲ ನಿರ್ಣಯವು ಹೀಗೆ ಹೇಳುತ್ತದೆ..

**ಪ್ರಾಧ್ಯಾಪಕ ಎನ್. ಜಿ. ರಂಗ** : (ಮದ್ರಾಸ್ : ಸಾಮಾನ್ಯ): ಒಂದೇ ನಿರ್ಣಯದ ಮೇಲೆ ಒಬ್ಬ ಸದಸ್ಯರು ಒಂದು ಸಲಕ್ಕಿಂತ ಹೆಚ್ಚು ಬಾರಿ ಮಾತನಾಡಲು ಅವಕಾಶವಿದೆಯೇ? ಅವರು ಎರಡು ಅಥವಾ ಮೂರು ತಿದ್ದುಪಡಿಗಳನ್ನು ಹೊಂದಿದ್ದರೆ ಅವುಗಳನ್ನೆಲ್ಲ ಒಟ್ಟಿಗೇ ಮಂಡಿಸಿ ಒಂದೇ ಭಾಷಣವನ್ನು ಮಾಡಲಿ.

**ರಾಯ್ ಬಹಾದೂರ್ ಶ್ಯಾಮನಂದನ ಸಹಾಯ** : ತಿದ್ದುಪಡಿಗಳನ್ನು ನಿರ್ಣಯದ ಕಂಡಿಕೆಗಳಿಗೆ ಅನುಸಾರವಾಗಿ ಪಟ್ಟಿ ಮಾಡಲಾಗಿದೆ.

**ಮಾನ್ಯ ಅಧ್ಯಕ್ಷರು** : ಅವರ ಹೆಸರಿನಲ್ಲಿ ಇನ್ನೂ ಒಂದು ತಿದ್ದುಪಡಿ ಇದೆ. ಅವೆರಡನ್ನೂ ಅವರು ಮಂಡಿಸಬಹುದು.

**ರಾಯ್ ಬಹಾದೂರ್ ಶ್ಯಾಮನಂದನ ಸಹಾಯ** : ಮಾನ್ಯರೆ, ಇನ್ನೊಂದು ತಿದ್ದುಪಡಿ ಹೀಗಿದೆ:

"ಏನೆಂದರೆ ನಿರ್ಣಯದ ಕಂಡಿಕೆ ೫ ರಲ್ಲಿ 'ಕಾನೂನಿಗೆ ಮೊದಲು' ಎಂಬ ಶಬ್ದಗಳ ಬದಲು 'ಕಾನೂನಿನ ಅಡಿಯಲ್ಲಿ ರಕ್ಷಣೆಯ' ಎಂದು ಬದಲಾಯಿಸಬೇಕು."

ಇದನ್ನು ನಾನು ಮಂಡಿಸುವುದಿಲ್ಲ.

ಈಗ ಮಾನ್ಯರೆ,

"ಸಾರ್ವಭೌಮ ಸ್ವತಂತ್ರ ಭಾರತದ ಅದರ ನಿಯೋಜಿತ ಭಾಗಗಳ ಮತ್ತು ಸರ್ಕಾರದ ಅಂಗಗಳ"

–ಎಂಬ ಶಬ್ದಗಳನ್ನು ಬಿಟ್ಟುಬಿಡಬೇಕು ಎಂದು ಕೇಳುವ ತಿದ್ದುಪಡಿಯನ್ನು ಮಂಡಿಸುವುದಕ್ಕೆ ನನ್ನ

ಕಾರಣ ಏನೆಂದರೆ ಈ ಸಂವಿಧಾನ ರಚನಾಸಭೆಯ ಸುಗಮವಾಗಿ ಕೆಲಸ ಮಾಡುವುದಕ್ಕೆ ಮತ್ತು ಕಾರ್ಯ ನಿರ್ವಹಿಸುವುದಕ್ಕೆ ದಾರಿಯಲ್ಲಿ ಅಡ್ಡಬರುವ ಅಡಚಣೆಗಳನ್ನು ನಿವಾರಿಸುವುದು ಮತ್ತು ಅದರ ಇತರ ಭಾಗಗಳು ಬಂದು ಈ ಸದನವನ್ನು ಸೇರುವ ಮೊದಲು, ಪ್ರಾರಂಭದ ಹಂತದಲ್ಲಿ ಅವರಲ್ಲಿ ಹೆದರಿಸುವಂತಹ ಏನನ್ನೂ ಮಾಡದಿರುವುದು.

ಕಂಡಿಕೆ (೪) ಹೀಗೆ ಹೇಳುತ್ತದೆ:

"ಅದರಲ್ಲಿ ಸಾರ್ವಭೌಮ ಸ್ವತಂತ್ರ ರಾಜ್ಯಗಳ, ಅದರ ನಿಯೋಜಿತ ಭಾಗಗಳ ಮತ್ತು ಸರ್ಕಾರದ ಅಂಗಗಳ ಎಲ್ಲ ಬಲ ಮತ್ತು ಅಧಿಕಾರಗಳು ಜನರಿಂದ ನಿಷ್ಪನ್ನವಾಗುತ್ತವೆ."

ಅದರ ನಿಯೋಜಿತ ಭಾಗಗಳಲ್ಲಿ ಈಗ ಭಾರತೀಯ ರಾಜ್ಯಗಳು ಎಂದು ಕರೆಯಲಾಗುವ ಪ್ರದೇಶಗಳು ಇವೆ. ಬಿಕನೇರ್‌ನ ವಿಧಾನಸಭೆಯಲ್ಲಿ (ಅಥವಾ ಅದರ ಹೆಸರು ಏನೇ ಆಗಿರಲಿ) ಪ್ರಧಾನಮಂತ್ರಿಗಳು ಇತ್ತೀಚೆಗೆ ನೀಡಿದ ಒಂದು ಹೇಳಿಕೆಯತ್ತ ಈ ಸದನದ ಬಹುಪಾಲು ಸದಸ್ಯರ ಗಮನವನ್ನು ಸೆಳೆಯಲಾಗಿದೆ ಎಂದು ನಾನು ಭಾವಿಸುತ್ತೇನೆ. ಅದರಲ್ಲಿ ಪ್ರಧಾನಮಂತ್ರಿಗಳು ಹೇಳಿದ್ದೇನೆಂದರೆ ರಾಜ್ಯಗಳಿಗೆ ಸಂಬಂಧಪಟ್ಟಂತೆ ಅಧಿಕಾರವು ನಿಷ್ಪನ್ನವಾಗುವುದು ಸಾರ್ವಭೌಮತೆಯಿಂದಲೇ ವಿನಾ ಜನರಿಂದಲ್ಲ. ಇವು ಭಿನ್ನಾಭಿಪ್ರಾಯ ಇರಬಹುದಾದ ವಿಷಯಗಳು ಎಂದು ನಾನು ಅರಿಕೆಮಾಡಿಕೊಳ್ಳುತ್ತೇನೆ. ಈ ಸಂವಿಧಾನ ರಚನಾಸಭೆಯ ಇತರ ಮುಖ್ಯ ಅಂಗಗಳಿಗೆ ಹೊರಗುಳಿಯಲು ನಿಜವಾದ ಅಸಮಾಧಾನ ಉಂಟುಮಾಡುವ ಅಂತಹ ಹೇಳಿಕೆಗಳಿರುವ ಒಂದು ನಿರ್ಣಯವನ್ನು ಅಂಗೀಕರಿಸುವುದು ಯುಕ್ತವಾಗಲಾರದು. ತಿದುಪಡಿಯಾದಂತೆ ಈ ನಿರ್ಣಯವು ಹೀಗಿರುತ್ತದೆ;

"ಅದರಲ್ಲಿ ಎಲ್ಲ ಬಲ ಮತ್ತು ಅಧಿಕಾರಗಳು ಜನರಿಂದ ನಿಷ್ಪನ್ನವಾಗುತ್ತವೆ."

ನಾನು ಉದ್ದೇಶಪೂರ್ವಕವಾಗಿ "ಸಾರ್ವಭೌಮ ಸ್ವತಂತ್ರ ಭಾರತ, ಅದರ ನಿಯೋಜಿತ ಭಾಗಗಳು ಮತ್ತು ಸರ್ಕಾರದ ಅಂಗಗಳು" ಎಂಬ ಶಬ್ದಗಳನ್ನು ಬಿಟ್ಟಿದ್ದೇನೆ. ನಿಯೋಜಿತ ಭಾಗಗಳಿಗೆ ಸಂಬಂಧಿಸಿದಂತೆ ನಾನು ಏಕೆ ತಿದ್ದುಪಡಿಯನ್ನು ಮಂಡಿಸಿದೆ ಎನ್ನುವುದಕ್ಕೆ ಕಾರಣ ಮತ್ತು ಕಷ್ಟವನ್ನು ಎತ್ತಿತೋರಿಸಿದ್ದೇನೆ. ತಿದ್ದುಪಡಿ ಮಾಡಿದ ನಿರ್ಣಯ ಕೂಡ ಗೌರವಾನ್ವಿತ ಮಂಡನೆಕಾರರ ಮಂಡನೆಯ ಸಾರಾಂಶವನ್ನು ಉಳಿಸಿಕೊಂಡಿದೆ. ಅದು ಹೀಗೆ ಹೇಳುತ್ತದೆ:

"ಅದರಲ್ಲಿ ಎಲ್ಲ ಬಲ ಮತ್ತು ಅಧಿಕಾರಗಳು ಜನರಿಂದ ನಿಷ್ಪನ್ನವಾಗುತ್ತವೆ."

ನಿಯೋಜಿತ ಭಾಗಗಳನ್ನು ನಿರ್ದಿಷ್ಟವಾಗಿ ಅದರಲ್ಲಿ ಯಾವ ರೀತಿಯಲ್ಲೂ ತರಲಾಗಿಲ್ಲ. ನಿರ್ಣಯದ ಗೌರವಾನ್ವಿತ ಮಂಡನೆಕಾರರು ಕೂಡ ತಮ್ಮ ಭಾಷಣದಲ್ಲಿ ಹೇಳಿರುವುದೇನೆಂದರೆ, ಅವರು ಕಲ್ಪಿಸಿಕೊಂಡಿರುವ ಗಣರಾಜ್ಯದಲ್ಲಿ ಕೂಡ ಆಳುವ ಮುಖ್ಯಸ್ಥರಿಗೆ ಮತ್ತು ರಾಜ್ಯಪ್ರಭುತ್ವ ಅಥವಾ ದೊರೆತನ ಪದ್ಧತಿ ಇರುವ ರಾಜ್ಯಗಳಿಗೆ ಅವಕಾಶವುಂಟು. ಹೀಗಿರುತ್ತ ನಿಯೋಜಿತ ಭಾಗಗಳ ಎಲ್ಲ ಬಲ ಮತ್ತು ಅಧಿಕಾರಗಳು ಕೂಡ ಜನರಿಂದ ನಿಷ್ಪನ್ನವಾಗುತ್ತವೆ ಎಂದು ಹೇಳುವ ಒಂದು ನಿರ್ಣಯವನ್ನು ಅಂಗೀಕರಿಸುವುದು ಯುಕ್ತವಾಗುವುದಿಲ್ಲ. ಪ್ರಾಯಃ ಈ ಸದನದ ಸದಸ್ಯರು ಕಳೆದ ರಾತ್ರಿ ಪ್ರಸಾರವಾದ ಹೇಳಿಕೆಯನ್ನು ಗಮನಿಸಿರಬಹುದು. ಅದರಲ್ಲಿ ವಿವಿಧ ರಾಜ್ಯಗಳ ಪ್ರತಿನಿಧಿಗಳು ಈ ನಿರ್ಣಯವನ್ನು ಕುರಿತಂತೆ ಕೆಲವು ಆಕ್ಷೇಪಗಳಿಂದ ಕೂಡಿದ ಹೇಳಿಕೆಯನ್ನು ನೀಡಿದ್ದಾರೆ. ಅದನ್ನು ಕುರಿತು ಈ ಮೊದಲು ತಮ್ಮೊಡನೆ ಸಮಾಲೋಚಿಸಲಾಗಿಲ್ಲ ಎಂದು ದೂರಿದ್ದಾರೆ. ಈ ಎಲ್ಲವನ್ನೂ ದೃಷ್ಟಿಯಲ್ಲಿಟ್ಟುಕೊಂಡು ಮತ್ತು ಈ ಕಠಿಣವಾದ ಕಾರ್ಯವನ್ನು ಪೂರೈಸಬೇಕೆಂಬ ತೀವ್ರವಾದ ಅಪೇಕ್ಷೆ ಇಟ್ಟುಕೊಂಡು ಇಲ್ಲಿ ಸೇರಿರುವ ಪ್ರತಿಯೊಬ್ಬರ ಆಶಯವನ್ನು ದೃಷ್ಟಿಯಲ್ಲಿಟ್ಟುಕೊಂಡು, ಪ್ರಾಮಾಣಿಕವಾದ ಭಿನ್ನಾಭಿಪ್ರಾಯಕ್ಕೆ ಎಡೆಮಾಡಿಕೊಡುವಂತಹ ಒಂದು ನಿರ್ಣಯವನ್ನು ನಾವು ಅಂಗೀಕರಿಸುವುದನ್ನು ನಿವಾರಿಸಬೇಕು ಅಥವಾ ಹೇಳಿಕೆಯನ್ನು ಕೊಡಬಾರದು ಎಂದು ನಾನು ಭಾವಿಸುತ್ತೇನೆ.

ತಿದ್ದುಪಡಿ ಸಂಖ್ಯೆ ೩೦ ಅನ್ನು ನಾನು ಮಂಡಿಸುವುದಿಲ್ಲ. ಏಕೆಂದರೆ ಅದು ಕೇವಲ ಶಾಬ್ದಿಕ ಬದಲಾವಣೆ. ಆದ್ದರಿಂದ ಅದನ್ನು ನಾನು ಮಂಡಿಸುವುದಿಲ್ಲ. ಇನ್ನೊಂದು ತಿದ್ದುಪಡಿ (ಸಂಖ್ಯೆ ೪೩) ಕೂಡ ನನ್ನ ಹೆಸರಲ್ಲಿದೆ. ಅದನ್ನು ಕೂಡ ನಾನು ಮಂಡಿಸುವುದಿಲ್ಲ.

**ಮಾನ್ಯ ಅಧ್ಯಕ್ಷರು** : ಮುಂದಿನ ತಿದ್ದುಪಡಿಯು ಸರ್ ಉದಯ್ ಚಂದ್ ಮಹತಾಬ್ ಅವರ ಹೆಸರಿನಲ್ಲಿದೆ. ಸಂಖ್ಯೆ ೨೫.

**ಬುರ್ದ್ವಾನ್ ನ ಮಹಾರಾಜಾಧಿರಾಜ ಬಹಾದ್ದೂರ್ ಸರ್ ಉದಯ್ ಚಂದ್ ಮಹತಾಬ್** (ಬಂಗಾಳ : ಸಾಮಾನ್ಯ): ಈ ತಿದ್ದುಪಡಿಯನ್ನು ಮಂಡಿಸಲು ನಾನು ಉದ್ದೇಶಿಸಿಲ್ಲ.

**ಮಾನ್ಯ ಅಧ್ಯಕ್ಷರು** : ಇತರ ಎಲ್ಲ ತಿದ್ದುಪಡಿಗಳ ಮಂಡನೆಕಾರರು ತಮ್ಮ ತಿದ್ದುಪಡಿಗಳನ್ನು ಹಿಂಪಡೆಯುವುದಾಗಿ ಅಧಿಸೂಚನೆ ನೀಡಿದ್ದಾರೆ. ಇದರಲ್ಲಿ ಏನೂ ತಪ್ಪಾಗಿಲ್ಲವೆಂದು ಭಾವಿಸುತ್ತೇನೆ. ಒಂದು ಪಕ್ಷ ಏನಾದರೂ ಇದ್ದರೆ ಗೌರವಾನ್ವಿತ ಸದಸ್ಯರು ಅದನ್ನು ನನಗೆ ತೋರಿಸಿಕೊಡಬಹುದು. ಡಾ. ಸರ್. ಹರಿಸಿಂಗ್ ಗೌರ್ ಅವರು ಅಧಿಸೂಚನೆ ನೀಡಿದ ಒಂದು ತಿದ್ದುಪಡಿ ಇದೆ. ಆದರೆ ದುರದೃಷ್ಟವಶಾತ್ ಅದು ಇಂದು ಬೆಳಗ್ಗೆಯಷ್ಟೆ ನಮಗೆ ತಲಪಿತು. ತಿದ್ದುಪಡಿಯ ಅಧಿಸೂಚನೆಗಳನ್ನು ಕೊಡಲು ನಾನು ಈಗಾಗಲೇ ಒಂದು ನಿರ್ದಿಷ್ಟವಾದ ಕಾಲಮಿತಿಗಳನ್ನು ನಿಗದಿಮಾಡಿದ್ದೆ. ಡಾ ಸರ್. ಹರಿಸಿಂಗ್ ಗೌರ್ ಅವರು ಆ ಮಿತಿಯನ್ನು ಮೀರಿದ್ದಾರೆ. ಆದ್ದರಿಂದ ಅವರ ತಿದ್ದುಪಡಿಗೆ ಅವಕಾಶವನ್ನು ನೀಡಲು ನಾನು ಅಸಮರ್ಥನಾಗಿದ್ದೇನೆ.

ಈಗ ಈ ನಿರ್ಣಯವನ್ನು ಮಂಡಿಸಲಾಗಿದೆ ಮತ್ತು ಅದರ ಮೇಲೆ ತಿದ್ದುಪಡಿಗಳನ್ನೂ ಮಂಡಿಸಲಾಗಿದೆ. ಈಗ ನಿರ್ಣಯ ಮತ್ತು ಈ ತಿದ್ದುಪಡಿಗಳನ್ನು ಕುರಿತು ಈ ಸದನದಲ್ಲಿ ಚರ್ಚಿಸಲು ಅವಕಾಶ ಮಾಡಿಕೊಡಲಾಗಿದೆ.

ಗೌರವಾನ್ವಿತ ಸದಸ್ಯರು ತಮ್ಮ ಭಾಷಣಗಳನ್ನು ಸಾಧ್ಯವಾದಷ್ಟೂ ಸಂಕ್ಷಿಪ್ತವಾಗಿ ಮಾಡಬೇಕೆಂದು ಕೋರುತ್ತೇನೆ. ಏಕೆಂದರೆ ನಾವು ಈಗಾಗಲೇ ಇದರ ಮೇಲೆ ಎರಡು ದಿನಗಳನ್ನು ಕಳೆದಿದ್ದೇವೆ. ಯಾವುದೇ ಗೌರವಾನ್ವಿತ ಸದಸ್ಯರ ಮಾತನಾಡುವ ಹಕ್ಕನ್ನು ಮೊಟಕುಮಾಡಲು ನಾನು ಬಯಸುವುದಿಲ್ಲವಾದರೂ ಸದಸ್ಯರು ನನ್ನ ಮಾತನ್ನು ಗಮನದಲ್ಲಿ ಇಟ್ಟುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಈ ಚರ್ಚೆಯಲ್ಲಿ ಭಾಗವಹಿಸುವವರ ಹೆಸರುಗಳ ಒಂದು ಪಟ್ಟಿ ನನ್ನ ಬಳಿ ಇದೆ. ಆದರೆ ಇದು ಸಂಪೂರ್ಣವಾದ ಪಟ್ಟಿ ಎಂದು ನಾನು ಭಾವಿಸುವುದಿಲ್ಲ. ಮಾತನಾಡಲು ಇಷ್ಟಪಡುವ ಬೇರೆ ಸದಸ್ಯರೂ ಇರಬಹುದು. ಆದರೆ ನಾನು ಈ ಪಟ್ಟಿಯ ಪ್ರಕಾರ ಮುಂದುವರಿಯುತ್ತೇನೆ ಇತರ ಸದಸ್ಯರು ಮಾತನಾಡಲು ಇಷ್ಟಪಟ್ಟರೆ ನಡುವೆ ಸೇರಿಸುತ್ತೇನೆ. ಇಲ್ಲಿ ನನ್ನ ಬಳಿ ಇರುವ ಮೊದಲನೆಯ ಹೆಸರು ಎಂದರೆ ಶ್ರೀ ಶ್ರೀಕೃಷ್ಣ ಸಿನ್ಹ.

**ಗೌರವಾನ್ವಿತ ಶ್ರೀ ಶ್ರೀಕೃಷ್ಣ ಸಿನ್ಹ** (ಬಿಹಾರ್ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ಪಂಡಿತ್ ಜವಾಹರಲಾಲ್ ನೆಹರು ಅವರು ಮೂಲತಃ ಮಂಡಿಸಿದ ರೂಪದಲ್ಲಿರುವ ನಿರ್ಣಯವನ್ನು ಸಮರ್ಥಿಸಿ ಮಾತನಾಡಲು ನಾನು ಇಲ್ಲಿ ನಿಂತಿದ್ದೇನೆ. ನನ್ನ ಅಭಿಪ್ರಾಯದಲ್ಲಿ ಅಂತಹ ಪವಿತ್ರ ಸ್ವರೂಪದ ಒಂದು ನಿರ್ಣಯವು ತಿದ್ದುಪಡಿಗಳಿಗೆ ಈಡಾಗುವುದು ನಿಜವಾಗಿಯೂ ದುರದೃಷ್ಟಕರ. ನಾನು ಉದ್ದೇಶಪೂರ್ವಕವಾಗಿ ಅದನ್ನು ಪವಿತ್ರ ಎಂದು ಕರೆದಿದ್ದೇನೆ. ಏಕೆಂದರೆ ಕಳೆದ ಅನೇಕ ವರ್ಷಗಳಿಂದ ಸ್ವತಂತ್ರರಾಗಬೇಕೆಂದು ನಮ್ಮನ್ನು ಪ್ರೇರೇಪಿಸುತ್ತಿದ್ದ ಆ ಮಹಾತ್ವಾಕಾಂಕ್ಷೆಗೆ ಅಭಿವ್ಯಕ್ತಿಯನ್ನು ಕೊಡಲು ಈ ನಿರ್ಣಯದಲ್ಲಿ ಒಂದು ಪ್ರಯತ್ನವನ್ನು ಮಾಡಲಾಗಿದೆ.

ಮಾನ್ಯರೆ, ಈ ನಿರ್ಣಯವನ್ನು ಜಾಗರೂಕತೆಯಿಂದ ವಿಶ್ಲೇಷಿಸಿದರೆ ಇಷ್ಟು ಅರ್ಥವಾಗುತ್ತದೆ. ಅದು ಭಾವೀ ಭಾರತದ ದರ್ಶನದ ಒಂದು ಚಿತ್ರವನ್ನು ಕೊಡುತ್ತದೆ. ಅದೆಂದರೆ ಭವಿಷ್ಯದ ಭಾರತವು ಪ್ರಜಾಸತ್ತಾತ್ಮಕವಾಗಿರಬೇಕು. ಮತ್ತು ವಿಕೇಂದ್ರಿಕೃತ ಗಣರಾಜ್ಯವಾಗಿರಬೇಕು. ಅದರಲ್ಲಿ ಅಂತಿಮ ಸಾರ್ವಭೌಮತೆಯು ಜನತೆಯ ಬಳಿಯಲ್ಲಿರಬೇಕು ಮತ್ತು ಈ ನಾಡಿನಲ್ಲಿ ವಾಸಮಾಡುತ್ತಿರುವ ಅಲ್ಪಸಂಖ್ಯಾತರ

ಮೂಲಭೂತ ಹಕ್ಕುಗಳನ್ನು ಸಂರಕ್ಷಣೆ ಮಾಡಬೇಕು. ಈಗ, ಮಾನ್ಯರೆ, ಇವು ಈ ನಿರ್ಣಯದ ಮೂರು ಮೂಲಭೂತ ಲಕ್ಷಣಗಳು. ಈ ಮೂರು ಮೂಲಭೂತ ಲಕ್ಷಣಗಳ ಕಾರಣದಿಂದಾಗಿ ನಾನು ಈ ನಿರ್ಣಯವನ್ನು ಪವಿತ್ರವಾದದ್ದು ಎಂದು ಕರೆಯುತ್ತೇನೆ. ನಾನು ಸಂಕ್ಷಿಪ್ತವಾಗಿ ಮಾತನಾಡಲು ಪ್ರಯತ್ನಿಸುತ್ತೇನೆ. ಆದರೂ ನಾವೆಲ್ಲರೂ ಒಂದು ಹಕ್ಕನ್ನು– ಹೇಳಲಾಗದ ಯಾತನೆಗಳು ಮತ್ತು ಬಲಿದಾನಗಳನ್ನು ಅನುಭವಿಸಿದ ಅಂತರ ಮನುಕುಲವು ತನಗಾಗಿ ಗಳಿಸಿದ ಒಂದು ನೆಚ್ಚಿಕೊಂಡ ಮತ್ತು ಮೌಲಿಕವಾದ ಹಕ್ಕನ್ನು– ದೃಢವಾಗಿ ಪ್ರತಿಪಾದಿಸಲು ಇಲ್ಲಿ ಸೇರಿದ್ದೇವೆ ಎಂಬುದನ್ನು ನಾನು ಈ ಸದನಕ್ಕೆ ನೆನಪಿಸದೆ ಇರಲಾರೆ. ಪ್ರತಿಯೊಂದು ಸಮಾಜದಲ್ಲಿಯೂ ಜೀವಿಸುವುದು ಸಾಧ್ಯವಾಗಬೇಕೆಂದರೆ ಯಾವುದೋ ಒಂದು ಬಗೆಯ ರಾಜಕೀಯ ಸಂರಚನೆಯ ಅಗತ್ಯವಿದೆ. ಈ ಜಗತ್ತಿನಲ್ಲಿ ರಾಷ್ಟ್ರಗಳು ವಿಕಾಸಗೊಂಡ ಪ್ರಕ್ರಿಯೆಯನ್ನು ಜಾಗರೂಕತೆಯಾಗಿ ವಿಶ್ಲೇಷಣೆ ಮಾಡಿದರೆ, ಜೀವನದ ಪರಿಕಲ್ಪನೆಯ ಬದಲಾವಣೆಯೊಡನೆ ಈ ರಾಷ್ಟ್ರಗಳ ಸ್ವರೂಪದಲ್ಲೂ ಬದಲಾವಣೆಯಾಗಿದೆ ಎಂದು ಕಂಡುಬರುತ್ತದೆ. ಮಾನ್ಯರೆ, ಸಮಾಜದಲ್ಲಿ ರಾಜಕೀಯ ಸಾರ್ವಭೌಮತೆಯು ಎಲ್ಲಿ ನೆಲೆಸಿದೆ ಎಂಬುದಕ್ಕೆ ಸಂಬಂಧಿಸಿದಂತೆ ಪ್ರಾಮಾಣಿಕವಾದ ಭಿನ್ನಾಭಿಪ್ರಾಯವಿರಬಹುದೆಂದು, ಜನರ ಸಂವಿಧಾನಾತ್ಮಕವಾದ ಅಧಿಕಾರವನ್ನು ದೃಢವಾಗಿ ಪ್ರತಿಪಾದನೆ ಮಾಡಲು ಇಲ್ಲಿ ಸೇರಿರುವ ಈ ಸದನದ ಗೌರವಾನ್ವಿತ ಸದಸ್ಯರೊಬ್ಬರು ಈಗಷ್ಟೇ ಹೇಳಿದ ಮಾತನ್ನು ಕೇಳಿ ನನಗೆ ಸ್ವಲ್ಪವೂ ಆಶ್ಚರ್ಯವಾಗಲಿಲ್ಲ. ಮಾನ್ಯರೆ, ಇತ್ತೀಚಿನ ಕಾಲದವರೆಗೂ, ಸಮಾಜದ ಅಂಗಗಳಾದ ಬಿಡಿವ್ಯಕ್ತಿಗಳು ಸ್ವಾತಂತ್ರ್ಯ ಮತ್ತು ಸಂತೋಷದ ವಿಷಯದಲ್ಲಿ ಸಮಾನವಾದ ಹಕ್ಕುಗಳನ್ನು ಹೊಂದಿದ್ದಾರೆ ಎಂದು ಜಗತ್ತನ್ನು ಖಂಡಿತವಾಗಿಯೂ ನಂಬಿರಲಿಲ್ಲ. ಸಮಾಜವು ವರ್ಗಗಳಿಂದ ಕೂಡಿತ್ತು ಮತ್ತು ಬಿಡಿ ವ್ಯಕ್ತಿಗಳಿಗೆ ಸಮಾಜದಲ್ಲಿ ಯಾವ ಸ್ಥಾನವೂ ಇರಲಿಲ್ಲ. ವ್ಯಕ್ತಿಯು ಯಾವ ವರ್ಗಕ್ಕೆ ಸೇರಿದ್ದಾನೆ ಎಂಬುದನ್ನು ಅವಲಂಬಿಸಿ ಸಮಾಜದಲ್ಲಿ ಅವನ ಸ್ಥಾನವನ್ನು ನಿರ್ಧಾರ ಮಾಡಲಾಗುತ್ತಿತ್ತು. ಆದ್ದರಿಂದ ರಕ್ಷಿಸಬೇಕಾದಂತಹ ಬಿಡಿವ್ಯಕ್ತಿಯ ಸ್ವಾತಂತ್ರ್ಯ ಎನ್ನುವುದಿರಲಿಲ್ಲ. ಬಡತನವೆನ್ನುವುದು ಸಮಾಜವು ತೊಡೆದುಹಾಕಬೇಕಾದ ಒಂದು ರೋಗ ಎಂದು ಭಾವಿಸಲಾಗಿರಲಿಲ್ಲ. ೧೮ನೆಯ ಶತಮಾನದ ಫ್ರಾನ್ಸಿನ ಕೆಲವು ಮಹಾನ್ ಚಿಂತಕರು ಸಂಪತ್ತಿನ ಯುಕ್ತವಾದ ಉತ್ಪಾದನೆಗೆ ಬಡತನದ ಅಸ್ತಿತ್ವವು ಅಗತ್ಯ ಎಂಬ ಅಭಿಪ್ರಾಯವನ್ನು ಹೊಂದಿದ್ದರು. ಮಾನ್ಯರೆ, ಅಂತಹ ಒಂದು ಸಮಾಜದಲ್ಲಿ ಶ್ರೀ ಸಾಮಾನ್ಯನ ಸಾರ್ವಭೌಮತೆಯು ರಾಜನಿಗೆ ಸಂಬಂಧಿಸಿದ್ದಾಗಿದ್ದು ಅದು ಕಾನೂನುಬದ್ಧವಾಗಿ ಅವನ ಹಕ್ಕಾಗಿತ್ತು. ರಾಜನು ತಗಾದೆ ಮಾಡಿದ ತೆರಿಗೆಗಳನ್ನು ಸಲ್ಲಿಸಲು ಮತ್ತು ಅವನು ವಿಧಿಸಿದ ಕಾನೂನುಗಳನ್ನು ಪರಿಪಾಲಿಸಲು ಅಷ್ಟೇ ಪ್ರಜೆಗಳು ಅಸ್ತಿತ್ವದಲ್ಲಿದ್ದರು. ಆದರೆ ಕಾಲ ಉರುಳಿದಂತೆ ಸಮಾಜ ಮತ್ತು ಜೀವನದ ಪರಿಕಲ್ಪನೆ ಬದಲಾಯಿತು. ಪ್ರತಿಯೊಬ್ಬ ವ್ಯಕ್ತಿಗೂ ಸ್ವಾತಂತ್ರ್ಯ ಮತ್ತು ಸಂತೋಷಕ್ಕೆ ಸಮಾನವಾದ ಹಕ್ಕು ಇದೆ ಎಂದು ಜನರು ನಂಬಲಾರಂಭಿಸಿದರು. ಜೀವನದ ಪರಿಕಲ್ಪನೆಯಲ್ಲಿ ಆದ ಈ ಬದಲಾವಣೆಯಿಂದ ರಾಷ್ಟ್ರದ ಸಂರಚನೆಯಲ್ಲಿ ಬದಲಾವಣೆಯು ಅತ್ಯಾವಶ್ಯಕವಾಯಿತು. ಆದರೆ ರಾಜಕೀಯ ಅಧಿಕಾರವನ್ನು ಹಿಡಿದವರು ಅದನ್ನು ಬಿಟ್ಟುಕೊಡಲು ಮತ್ತು ರಾಜಕೀಯ ಸಂರಚನೆಯಲ್ಲಿ ಒಂದು ಬದಲಾವಣೆಯನ್ನು ಉಂಟುಮಾಡಲು ಮನಸ್ಸಿಲ್ಲವರಾಗಿದ್ದರು. ಹೀಗೆ ಜನಗಳ ಮೇಲೆ ಪ್ರಭಾವ ಬೀರಿದ ಸಿದ್ಧಾಂತಗಳಿಗೂ ಅಧಿಕಾರದಲ್ಲಿರುವವರ ಮೇಲೆ ಪ್ರಭಾವಬೀರಿದ ಸಿದ್ಧಾಂತಗಳಿಗೂ ನಡುವೆ ಒಂದು ಸಂಘರ್ಷವೇರ್ಪಟ್ಟಿತು. ೧೮ ನೆಯ ಶತಮಾನದ ಕೊನೆಯ ಭಾಗದಲ್ಲಿ ಅಟ್ಲಾಂಟಿಕ್ ಸಾಗರದ ಎರಡೂ ಪಾರ್ಶ್ವಗಳಲ್ಲಿ ಕ್ರಾಂತಿಗಳು ಸಂಭವಿಸಿದವು. ಅವುಗಳಲ್ಲಿ ಅಧಿಕಾರವು ಜನರಿಗೆ ಸೇರಿದ್ದು ಎಂಬ ತತ್ತ್ವವನ್ನು ಎತ್ತಿಹಿಡಿಯಲಾಯಿತು. ಇದಾದ ಅನಂತರವೂ ಈ ತತ್ತ್ವಕ್ಕೆ ಮನ್ನಣೆ ನೀಡಿದ ಕೆಲವು ರಾಜರಿದ್ದರು. ಆದ್ದರಿಂದ ರಾಜಕೀಯ ಅಧಿಕಾರವು ಜನರಿಗೆ ಸೇರಿದ್ದು ಎಂಬ ತತ್ತ್ವಕ್ಕೆ ಅಂತಿಮವಾಗಿ ಮಂಜೂರಾತಿಯನ್ನು ಗಳಿಸಿಕೊಳ್ಳಲು ಕ್ರಾಂತಿಯ ರೂಪದಲ್ಲಿ ಇನ್ನೊಂದು ಸಾಮೂಹಿಕ ಹತ್ಯಾಕಾಂಡ ನಡೆಯಬೇಕಾಯಿತು ಈ ಸಾಂವಿಧಾನಿಕ ಅಧಿಕಾರವನ್ನು ಗಳಿಸಲು ಈ ದೇಶದಲ್ಲಿರುವ

ನಾವು ಕಳೆದ ಹಲವಾರು ವರ್ಷಗಳಿಂದ ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡುತ್ತಿದ್ದೇವೆ. ೧೯೨೧ರಲ್ಲಿ ಈ ದೇಶದಲ್ಲಿ ಒಂದು ಮೂಲೆಯಿಂದ ಇನ್ನೊಂದು ಮೂಲೆಯವರೆಗೆ ಸಂಚಲನವನ್ನು ಉಂಟುಮಾಡಿದ್ದು ಇದು ಮತ್ತು ಆ ವರ್ಷದಲ್ಲಿ ಮಹಾತ್ಮ ಗಾಂಧಿ ಅವರು ಎತ್ತಿದ ಪ್ರತಿಭಟನೆಯ ಬಾವುಟದ ಅಡಿಯಲ್ಲಿ ಕೋಟ್ಯಂತರ ಜನರು ಜಮಾಯಿಸಿದರು. ಜನತೆಯ ಈ ಮೂಲಭೂತ ಹಕ್ಕನ್ನು ದೃಢವಾಗಿ ಪ್ರತಿಪಾದಿಸಲು ನೂರಾರು ಜನ ಗಲ್ಲುಗಂಬವನ್ನೇರಿದರು, ಸಾವಿರಾರು ಜನ ಗುಂಡೇಟಿಗೆ ಎದೆಯೊಡ್ಡಿದರು, ಲಕ್ಷಾಂತರ ಜನ ಹಿಂಡುಹಿಂಡಾಗಿ ಸೆರೆಮನೆಗಳನ್ನು ಸೇರಿದರು. ಭಾರತ ಸರ್ಕಾರವು ಆಧರಿಸಿದ್ದ ರಾಜಕೀಯ ಸಿದ್ಧಾಂತಗಳಿಗೂ ಮತ್ತು ಜನಗಳಲ್ಲಿ ಸಂಚಲವನ್ನು ಉಂಟುಮಾಡಿದ್ದ ರಾಜಕೀಯ ಸಿದ್ಧಾಂತಗಳಿಗೂ ನಡುವೆ ವಿಶಾಲವಾದ ಅಂತರವಿತ್ತು. ಇದರ ಫಲಿತಾಂಶವೇ ಸಂಘರ್ಷ. ಆದ್ದರಿಂದ ಮಾನ್ಯರೆ, ಬ್ರಿಟಿಷ್ ಸರ್ಕಾರವು ಒಂದು ಔದಾರ್ಯದ ಆವೇಗದಲ್ಲಿ ನಮಗೆ ಅಧಿಕಾರವನ್ನು ವಹಿಸಿಕೊಡಬೇಕಾದದ್ದು ಸೂಕ್ತ ಎಂದು ಭಾವಿಸಿದ ಕಾರಣದಿಂದಾಗಿ ನಾವು ಈ ಸಭೆಯಲ್ಲಿ ಸೇರಿಲ್ಲ. ಶಾಂತಿಯುತವಾಗಿ ಅಧಿಕಾರದ ಹಸ್ತಾಂತರ ಎಂಬ ಈ ಎಲ್ಲ ಮಾತಿನ ಹಿಂದೆ ಏನಾದರೂ ಪ್ರಾಮಾಣಿಕತೆಯಿದೆಯೇ ಎಂದು ನನ್ನದೇ ಆದ ಅಭಿಪ್ರಾಯವನ್ನು ರೂಪಿಸಿಕೊಳ್ಳಬಹುದಾದ ಸ್ಥಾನದಲ್ಲಿ ನಾನು ಇದ್ದೇನೆ. ಭಾರತ ಸರ್ಕಾರದ ಕಾನೂನಿನಲ್ಲಿ ಒಳಗೊಂಡಿರುವ ರಾಜಕೀಯ ಆದರ್ಶಗಳ ಪ್ರಕಾರ ಭಾರತವನ್ನು ಆಳಬೇಕೆಂಬ ಕನಸನ್ನು ಇನ್ನೂ ಕಾಣುತ್ತಿರುವವರನ್ನು, ಆ ಕನಸನ್ನು ಬಿಟ್ಟುಕೊಡುವಂತೆ ಒತ್ತಾಯಿಸುವಲ್ಲಿ ಯಶಸ್ವಿಯಾದ್ದರಿಂದ ನಾವು ಇಲ್ಲಿದ್ದೇವೆ. ೧೯೪೨ರಲ್ಲಿ ದೇಶದಾದ್ಯಂತ ಹರಡಿದ ಆ ಬಂಡಾಯದ ಚೇತನದ ಕಾರಣದಿಂದ ನಾವು ಯಶಸ್ವಿಯಾಗಿದ್ದೇವೆ. ೧೯೪೨ರ ಬಂಡಾಯದ ಫಲವಾಗಿ ನಾವು ಈ ಸಂವಿಧಾನ ರಚನಾಸಭೆಯಲ್ಲಿದ್ದೇವೆ. ಅಂತಹ ಒಂದು ಸಭೆಯಲ್ಲಿ ಸೇರಿರುವ ನಮ್ಮ ಮೊದಲ ಕರ್ತವ್ಯವೆಂದರೆ ಭಾವೀ ಭಾರತದ ಒಂದು ಚಿತ್ರವನ್ನು ರಚಿಸಿ ನಮ್ಮ ಜನಗಳಿಗೆ ಸಮರ್ಪಿಸುವುದು. ನಿರರ್ಗಳವಾದ ಮಾತುಗಾರಿಕೆಯಿಂದ ಭಾಷಣ ಮಾಡಿದ ರೈಟ್ ಆನರಬಲ್ ಡಾ. ಜಯಕರ್ ಅವರು ಮುಸ್ಲಿಮ್ ಲೀಗ್ ಸ್ನೇಹಿತರ ಗೈರುಹಾಜರಿಯು ಉಂಟುಮಾಡುವ ಕಷ್ಟಗಳ ಒಂದು ಚಿತ್ರವನ್ನು ಬಿಡಿಸಿಟ್ಟಿದ್ದಾರೆ. ಈ ಕಷ್ಟಗಳನ್ನು ಎತ್ತಿ ತೋರಿಸಲು ಡಾ. ಜಯಕರ್ ಅಂತಹ ಶ್ರೇಷ್ಠ ವ್ಯಕ್ತಿಯ ಭಾಷಣದ ಅಗತ್ಯ ನಮಗಿದೆ ಎಂದು ನಾನು ಭಾವಿಸುವುದಿಲ್ಲ. ಆ ಕಷ್ಟಗಳು ಇವೆ ಎಂದು ನಮಗೆ ಗೊತ್ತು. ಹೇಗಾದರೂ, ಅವರನ್ನು ನಾನು ಸರಿಯಾಗಿ ಅರ್ಥಮಾಡಿಕೊಂಡಿದ್ದೇನೆ ಎಂದು ಭಾವಿಸಬಹುದಾದರೆ, ಅವರು ನಮಗೆ ಹತಾಶೆಯ ಸಲಹೆಯನ್ನೇನು ಕೊಟ್ಟಿಲ್ಲ. ನಮ್ಮ ಮುಸ್ಲಿಮ್ ಲೀಗ್ ಸ್ನೇಹಿತರು ಕೆಲಕಾಲಾನಂತರ ಬರದಿದ್ದರೆ ನಮ್ಮ ಕೆಲಸವನ್ನು ನಾವು ಮುಂದುವರಿಸಿಕೊಂಡು ಹೋಗಬೇಕು ಎಂದು ವಾಸ್ತವವಾಗಿ ಅವರು ನಮಗೆ ಸಲಹೆ ಕೊಟ್ಟಿದ್ದಾರೆ.

ಮಾನ್ಯರೆ, ನಮ್ಮ ನಾಯಕರಾದ ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು ಅವರು ತೀರ ಸ್ಪಷ್ಟವಾಗಿ ಹೇಳಿರುವುದೇನೆಂದರೆ ನಮ್ಮ ಮುಸ್ಲಿಮ್ ಲೀಗ್ ಸ್ನೇಹಿತರು ಈ ಸಭೆಯಲ್ಲಿ ತಮ್ಮ ನ್ಯಾಯಸಮ್ಮತವಾದ ಸ್ಥಾನಗಳಲ್ಲಿ ಆಸೀನರಾಗುವುದನ್ನು ನೋಡಲು ನಾವು ಕಾತರರಾಗಿದ್ದೇವೆ. ಅವರು ಮರಳಿ ಬರುವುದನ್ನು ನೋಡಲು ನಮ್ಮಲ್ಲಿ ಪ್ರತಿಯೊಬ್ಬರೂ ಅಷ್ಟೇ ಕಾತರದಿಂದಿದ್ದೇವೆ. ಆದರೆ ಮುಂದೆ ಒಂದು ಕಾಲದಲ್ಲಿ ಅವರು ಹಾಗೆ ಮರಳಿ ಬರುವ ಹಾದಿಯಲ್ಲಿ ಈ ನಿರ್ದಿಷ್ಟವಾದ ನಿರ್ಣಯವು ಹೇಗೆ ಒಂದು ಅಡಚಣೆಯಾಗಿದೆ ಎನ್ನುವುದನ್ನು ಅರ್ಥಮಾಡಿಕೊಳ್ಳುವಲ್ಲಿ ನಾನು ವಿಫಲನಾಗಿದ್ದೇನೆ. ಮುಸ್ಲಿಮ್ ಲೀಗ್‌ನ ರಾಜಕೀಯ ಸಿದ್ಧಾಂತವನ್ನು ನಾವು ಸರಿಯಾಗಿ ಅರ್ಥಮಾಡಿಕೊಂಡಿದ್ದರೆ, ಮಂತ್ರಿಮಂಡಲದ ಘೋಷಣೆಯನ್ನು ನಾವು ಸರಿಯಾಗಿ ಅರ್ಥಮಾಡಿಕೊಂಡಿದ್ದರೆ, ಒಂದು ವಿಷಯದಲ್ಲಿ ನಾವೆಲ್ಲರೂ ಸಹಮತವನ್ನು ಹೊಂದಿರುತ್ತೇವೆ. ಅದೆಂದರೆ ಭಾವೀ ಭಾರತವು ಒಂದು ಸಂಯುಕ್ತ ಭಾರತವಾಗಿರುತ್ತದೆ ಮತ್ತು ಆ ಭಾರತವು ಬ್ರಿಟಿಷ್ ಕಾಮನ್‌ವೆಲ್ತ್ ದೇಶಗಳ ಆಚೆಗೂ ಇರಬಹುದು –ಭಾರತದ ಜನರು ಹಾಗೆ ನಿರ್ಧರಿಸಿದರೆ. ಮುಸ್ಲಿಮ್ ಲೀಗ್‌ನ ನಾಯಕರು

ಕಾಲಕಾಲಕ್ಕೆ ಮಾಡುತ್ತಿರುವ ಘೋಷಣೆಗಳಿಂದ ಅವರು ಕೂಡ ಮುಕ್ತ ಮತ್ತು ಸ್ವತಂತ್ರ ಭಾರತದ ಪರವಾಗಿದ್ದಾರೆ ಎಂಬ ತೀರ್ಮಾನವನ್ನು ನಾವು ಸರಿಯಾಗಿಯೇ ತಳೆಯಬಹುದು ಎಂದು ನಾನು ಭಾವಿಸುತ್ತೇನೆ. ಆದ್ದರಿಂದ ಮಾನ್ಯರೆ, ಲೀಗ್ ಸೇರಿದಂತೆ ನಮ್ಮೆಲ್ಲರ ಪ್ರಕಾರ ಭಾವೀ ಭಾರತವು ಒಂದು ಸ್ವತಂತ್ರ ಮುಕ್ತ ಭಾರತವಾಗಿರುತ್ತದೆ. ಆ ಸ್ವತಂತ್ರ ಮುಕ್ತ ಭಾರತದಲ್ಲಿ ಅಧಿಕಾರದ ಆಕರವು ಈ ದೇಶದಲ್ಲಿ ವಾಸವಾಗಿರುವ ಜನರಲ್ಲಿ ನೆಲೆಸಿರುತ್ತದೆ. ಈ ಹಿಂದೆ ಗತಿಸಿಹೋದವರು ಈ ಜಗತ್ತಿನಲ್ಲಿ ವಾಸಮಾಡುತ್ತಿರುವವರಿಗಾಗಿ ಗೆದ್ದುಕೊಟ್ಟ ನೆಚ್ಚಿಕೆಯ ಹಕ್ಕು ಅದು. ಆ ತತ್ತ್ವಕ್ಕಾಗಿಯೇ ನಾವು ಇಷ್ಟು ದೀರ್ಘಕಾಲದಿಂದ ಹೋರಾಡುತ್ತಿರುವುದು. ಈಗ ಈ ಸಂವಿಧಾನದ ರಚನಾಸಭೆಯು ಸಭೆಸೇರಿರುವಾಗ ಮತ್ತು ನಾವು ಒಂದು ಘೋಷಣೆಯನ್ನು ರೂಪಿಸುತ್ತಿರುವಾಗ, ಆ ಘೋಷಣೆಯಲ್ಲಿ ಸೇರಿಸಬೇಕಾದ ಮೊದಲನೆಯ ಸಂಗತಿ ಎಂದರೆ ಸ್ವತಂತ್ರವಾಗಿರಬೇಕೆಂದು ನಿರ್ಧರಿಸುವ ಜನರ ಪ್ರಾಥಮಿಕ ಹಕ್ಕು ಎಂದು ನಾನು ಭಾವಿಸುತ್ತೇನೆ. ಆದ್ದರಿಂದ ಈ ನಿರ್ಣಯದ ವೈಶಿಷ್ಟವನ್ನು ಕುರಿತು ಯಾರೂ ಯಾವ ಆಕ್ಷೇಪವನ್ನೂ ಹೊಂದಿರಲಾರರು.

ಈಗ, ಮಾನ್ಯರೆ, ಭಾರತದಲ್ಲಿ ನಾವು ಹೊಂದಲಾಗುತ್ತಿರುವ ಒಕ್ಕೂಟವು ಭಾರತದ ಎಲ್ಲ ಭಾಗಗಳ ಒಕ್ಕೂಟವಾಗಿರುತ್ತದೆ. ಇದರ ನಿಶ್ಚಿತವಾದ ಅರ್ಥವೇನೆಂದರೆ ಭಾವೀ ಭಾರತವು ಒಂದು ಒಕ್ಕೂಟದ ಭಾರತವಾಗಿರುತ್ತದೆ. ನಾನು ಮತ್ತೊಮ್ಮೆ ಹೇಳುವುದೇನೆಂದರೆ ಈ ನಿರ್ಣಯವು ಕಲ್ಪಿಸಿಕೊಳ್ಳುವ ಭಾವೀ ಭಾರತದ ಆಕಾರವು ಖಚಿತವಾಗಿ ತೋರಿಸುವುದೇನೆಂದರೆ ಕಾಲಾಂತರದಲ್ಲಿ ಮುಸ್ಲಿಮ್ ಲೀಗ್‌ನ ನಮ್ಮ ಸ್ನೇಹಿತರು ಈ ಸಭೆಗೆ ಬರುವ ಮಾರ್ಗದಲ್ಲಿ ತೊಂದರೆಗಳನ್ನು ಸೃಷ್ಟಿಸುವಂತಹ ಯಾವುದನ್ನೂ ಹೇಳದೆ ಇರುವ ಎಚ್ಚರವನ್ನು ಈ ನಿರ್ಣಯದ ರಚನೆ ಮಾಡಿರುವವರು ಬಹಳ ಚೆನ್ನಾಗಿ ತೆಗೆದುಕೊಂಡಿದ್ದಾರೆ. ಮಾನ್ಯರೆ, ಭಾರತದಲ್ಲಿ ಒಂದು ಭಾರತೀಯ ರಾಷ್ಟ್ರದ ಉದಯವಾಗಿದೆ. ಅದು ಭಾರತೀಯ ಸಂಸ್ಕೃತಿ ಮತ್ತು ಭಾರತೀಯ ನಾಗರಿಕತೆಯ ಒಂದು ಭಾರತದ ರಾಷ್ಟ್ರವಾಗಿದೆ ಎಂದು ನಂಬಿರುವವರು ಈ ಸಭೆಯಲ್ಲಿದ್ದಾರೆ ಎಂದು ನಾನು ತಿಳಿದಿದ್ದೇನೆ– ಅದನ್ನು ನಂಬಿರುವವರಲ್ಲಿ ನಾನೂ ಒಬ್ಬ ಎಂದು ನಾನು ಒಪ್ಪಿಕೊಳ್ಳಬೇಕು. ಅಂತಹ ಜನರು ಈ ದೇಶದಲ್ಲಿ ಒಕ್ಕೂಟದ ಮಾದರಿಯ ಒಂದು ಗಣರಾಜ್ಯವಿರಬೇಕು ಎಂದು ನಿಶ್ಚಯವಾಗಿಯೂ ತೀರ ಕಾತರರಾಗಿದ್ದಾರೆ. ಜಗತ್ತಿನಲ್ಲಿ ಉತ್ಪಾದನೆಯ ಆರ್ಥಿಕ ಬಲಗಳಲ್ಲಿ ಎಂತಹ ಪ್ರಚಂಡವಾದ ಹೆಚ್ಚಳವಾಗಿದೆಯೆಂದರೆ, ಜಗತ್ತಿನಲ್ಲಿ ಈ ಬಲಗಳ ಪೂರ್ತಿಯಾದ ಪ್ರಯೋಜನವನ್ನು ಪಡೆದುಕೊಳ್ಳಬೇಕೆಂದರೆ ರಾಷ್ಟ್ರೀಯ ಸರ್ಕಾರಗಳ ರಾಷ್ಟ್ರೀಯ ಸರಹದ್ದುಗಳನ್ನು ಮೀರುವಂತಹ ಇನ್ನೂ ದೊಡ್ಡ ರಾಜಕೀಯ ಘಟಕಗಳನ್ನು ನಾವು ಹೊಂದಿರಬೇಕು. ಈ ಸತ್ಯದ ಮನಗಾಣುವಿಕೆಯು ಭಾರತವು ಒಂದು ಕೇಂದ್ರಿಕೃತವಾದ ಗಣರಾಜ್ಯವನ್ನು ಹೊಂದಿರಬೇಕು ಎಂದು ಅನೇಕ ಭಾರತೀಯರು ಯೋಚಿಸುವಂತೆ ಮಾಡಿತು. ಆದಾಗ್ಯೂ ಕೂಡ ಪ್ರಜಾಸತ್ತಾತ್ಮಕವಾಗಿಯೂ ಅದೇ ಸಮಯದಲ್ಲಿ ವಿಕೇಂದ್ರಿಕೃತವೂ ಆದ ಗಣರಾಜ್ಯವನ್ನು ಭಾರತದಲ್ಲಿ ಹೊಂದಬೇಕು ಎಂದು ಈ ನಿರ್ಣಯದ ಮೂಲಕ ನಾವು ಬಯಸಿದರೆ, ಈ ನಿರ್ಣಯದ ರಚನೆ ಮಾಡಿರುವುದು ನಮ್ಮ ಮುಸ್ಲಿಮ್ ಲೀಗ್ ಸ್ನೇಹಿತರ ಭಾವನೆಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುವ ಎಚ್ಚರವಹಿಸಿದ್ದಾರೆ ಎಂದು ಅರ್ಥ. ಮಾನ್ಯರೆ, ಒಂದು ಕಾಲವಿತ್ತು, ಆ ದಿನಗಳಲ್ಲಿ ಐತಿಹಾಸಿಕ ಸನ್ನಿವೇಶಗಳು ಪ್ರಚಲಿತವಾಗಿದ್ದ ಕಾರಣದಿಂದಾಗಿ ಭಾಷೆ ಮತ್ತು ಧರ್ಮಗಳಲ್ಲಿ ಸಾಮರಸ್ಯದಿಂದ ಕೂಡಿದ್ದ ಜನಸಂಖ್ಯೆಯ ವಿಶಾಲವಾದ ದೇಶಗಳನ್ನು ಸ್ಥಾಪಿಸಬಹುದಾಗಿತ್ತು. ಸಾಮರಸ್ಯದಿಂದ ಕೂಡಿದ ಒಂದು ರಾಷ್ಟ್ರೀಯ ಸರ್ಕಾರವು ಒಂದು ಬಲ ಮತ್ತು ಒಂದು ಜೀವಂತ ಬಲ ಎನ್ನವುದರಲ್ಲಿ ಯಾವ ಅನುಮಾನವೂ ಇದ್ದಿರಲಾರದು. ಆದರೆ ದುರದೃಷ್ಟವಶಾತ್ ಈ ರಾಷ್ಟ್ರೀಯ ಸರ್ಕಾರಗಳು ಅಸ್ತಿತ್ವದಿಂದ ಕಣ್ಮರೆಯಾಗುವ ಕಾಲದಲ್ಲಿ ಉಳಿಸಿಹೋಗುವ ಕಹಿಯಾದ ಪಿತ್ರಾರ್ಜಿತ ಆಸ್ತಿಯೊಡನೆ ನಾವು ವ್ಯವಹರಿಸಬೇಕಾಗಿದೆ. ಅವು ಅನೇಕವೇಳೆ ಕೆಲವೇ ಸಾವಿರ ಅಥವಾ ಕೆಲವೇ ಲಕ್ಷ ಪ್ರಜೆಗಳಿಂದ ಕೂಡಿದವಾಗಿದ್ದು ತಮ್ಮದೇ ಪ್ರತ್ಯೇಕ ರಾಜ್ಯಗಳಿಗಾಗಿ ಹುಯಿಲೆಬ್ಬಿಸುತ್ತಿರುವ ಸಣ್ಣಪುಟ್ಟ

ರಾಷ್ಟ್ರೀಯತೆಗಳು ಬಿಟ್ಟುಹೋದ ಪಿತ್ರಾರ್ಜಿತ ಆಸ್ತಿ. ಇದು ಈ ಜಗತ್ತಿನಲ್ಲಿ ಅಲ್ಲೋಲ ಕಲ್ಲೋಲವನ್ನು ಉಂಟುಮಾಡುತ್ತಿದೆ. ಸಮಗ್ರ ಪೂರ್ವ ಯೂರೋಪ್ ಯುದ್ಧಗಳ ಜನ್ಮಸ್ಥಳವಾಗಿದೆ. ಏಕೆಂದರೆ ಯೂರೋಪಿನ ಆ ಭಾಗದಲ್ಲಿ ಸಣ್ಣಪುಟ್ಟ ರಾಷ್ಟ್ರೀಯತೆಗಳು ಎಷ್ಟರಮಟ್ಟಿಗೆ ಹಾಸುಹೊಕ್ಕಾಗಿವೆಯೆಂದರೆ ಅವುಗಳನ್ನು ಸಣ್ಣ ರಾಜ್ಯಗಳಾಗಿ ವಿಭಾಗಿಸಲಾಗುವುದಿಲ್ಲ, ಇಷ್ಟಾಗಿಯೂ ಅವು ಪ್ರತ್ಯೇಕ ರಾಜಕೀಯ ಅಸ್ತಿತ್ವಕ್ಕಾಗಿ ಹುಯಿಲೆಬ್ಬಿಸುತ್ತವೆ.

ಮಾನ್ಯರೆ, ಈ ನಿರ್ಣಯವು ಜಗತ್ತಿನ ರಾಷ್ಟ್ರಗಳ ನಡುವೆ ಭಾರತಕ್ಕೆ ತನ್ನ ಸ್ಥಾನವನ್ನು, ನ್ಯಾಯಸಮ್ಮತವಾದ ಸ್ಥಾನವನ್ನು ದೊರಕಿಸಿಕೊಡಬೇಕೆಂಬ ಮಹತ್ವಾಕಾಂಕ್ಷೆಗೂ ಅಭಿವ್ಯಕ್ತಿಯನ್ನು ಕೊಡುತ್ತದೆ. ಪ್ರತಿಯೊಬ್ಬ ಭಾರತೀಯನೂ ನ್ಯಾಯಸಮ್ಮತವಾಗಿ ಹಾರೈಸುವುದೇನೆಂದರೆ ಒಂದು ದಿನ ಭಾರತವು ಸಮಸ್ತ ಏಷ್ಯಾಖಂಡಕ್ಕೆ ಮುಂಚೂಣಿಯಲ್ಲಿ ನಿಂತು ಮುನ್ನಡೆಸುತ್ತದೆ. ಪ್ರಜಾಸತ್ತಾತ್ಮಕವಾದ ಗಣರಾಜ್ಯವನ್ನು ಯಶಸ್ವಿಯಾಗಿ ರಚಿಸುವ ಮೂಲಕ ಈಗ ನಾವು ಈ ಮುನ್ನಡೆಯನ್ನು ಅದಕ್ಕೆ ನೀಡಬಲ್ಲೆವು. ಅದೇ ಸಮಯದಲ್ಲಿ ಅದು ವಿಕೇಂದ್ರಿಕೃತವಾಗಿರಬೇಕು. ಹಾಗಾದಾಗ ಭಾಷೆಯ ಮೇಲೆ, ಧರ್ಮದ ಮೇಲೆ ಆಧರಿಸಿರುವ ವಿವಿಧ ಸಾಂಸ್ಕೃತಿಕ ಸಮೂಹಗಳು ಒಂದು ವಿಶಾಲವಾದ ಗಣರಾಜ್ಯದಲ್ಲಿ ಸಂಯೋಜಿತವಾಗಿರುತ್ತವೆ. ಅನತಿಕಾಲದಲ್ಲಿಯೇ ಪಾಶ್ಚಾತ್ಯ ಸಾಮ್ರಾಜ್ಯಶಾಹಿಯ ಪ್ರವಾಹವು ಏಷ್ಯಾಖಂಡದಿಂದ ಹಿಂದೆ ಸರಿಯುತ್ತದೆ ಎಂದು ನಿರೀಕ್ಷಿಸಲಾಗಿದೆ. ಅದು ಹಿಂದೆ ಸರಿಯುತ್ತಿದ್ದಂತೆಯೇ ಈ ದೇಶಗಳು ತಮ್ಮದೇ ಸ್ವತಂತ್ರ ರಾಷ್ಟ್ರಗಳನ್ನು ಸ್ಥಾಪಿಸುವ ಸಮಸ್ಯೆಯನ್ನು ಪರಿಹರಿಸಿಕೊಳ್ಳಬೇಕು. ರಾಷ್ಟ್ರೀಯತೆಯ ಈ ಪ್ರಶ್ನೆಯು ಆ ರಾಜ್ಯಗಳಲ್ಲಿ ಕೂಡ ತಲೆ ಎತ್ತುವುದು ನಿಶ್ಚಿತ. ಪ್ಯಾಲೆಸ್ಟೈನ್‌ನಲ್ಲಿ, ಅರಬ್ ಜಗತ್ತಿನಲ್ಲಿ ಮತ್ತು ಏಷ್ಯಾದ ಆಗ್ನೇಯ ಭಾಗದಲ್ಲಿ ಅಂತಹ ಸಮಸ್ಯೆಗಳು ಅವರಿಗಿವೆ. ಬಾಲ್ಕನ್‌ನಂತೆ ಏಷ್ಯಾದ ಈ ನಾಡುಗಳೂ ಪಾಶ್ಚಾತ್ಯ ಸಾಮ್ರಾಜ್ಯಶಾಹಿಯ ರಣರಂಗವಾಗದಂತೆ ನಾವು ಅವರಿಗೆ ಸರಿಯಾದ ಮಾರ್ಗದರ್ಶವನ್ನು ನೀಡಬೇಕೆಂದರೆ, ಸಮಸ್ತ ಭಾರತವೂ ಒಂದು ರಾಷ್ಟ್ರವಾಗಿದ್ದುಕೊಂಡೂ ಅದೇ ಸಮಯದಲ್ಲಿ ಸಾಂಸ್ಕೃತಿಕ ಅಲ್ಪಸಂಖ್ಯಾತರಿಗೆ ಸುರಕ್ಷತೆಯನ್ನು ಒದಗಿಸುವ ರೀತಿಯಲ್ಲಿ ಭಾರತದಲ್ಲಿ ಒಂದು ರಾಷ್ಟ್ರವನ್ನು ಸ್ಥಾಪಿಸುವ ಮೂಲಕ ನಾವು ಒಂದು ಉದಾಹರಣೆಯನ್ನು ಹಾಕಿಕೊಡಬೇಕು. ಈ ದೇಶದಲ್ಲಿ ವಾಸಿಸುತ್ತಿರುವ ಬಿಡಿ ವ್ಯಕ್ತಿಗಳು ಮತ್ತು ಗುಂಪುಗಳಿಗೆ ಮೂಲಭೂತ ಹಕ್ಕುಗಳನ್ನು ಒದಗಿಸುವ ಮೂಲಕ ಮತ್ತು ಅಲ್ಪಸಂಖ್ಯಾತರ ಮೂಲಭೂತ ಹಕ್ಕುಗಳನ್ನು ಸಂರಕ್ಷಿಸುವ ಮೂಲಕ ಈ ನಿರ್ಣಯವು ಮತ್ತಷ್ಟು ಪರಿಭಾವಿಸುತ್ತಿರುವುದು ಈ ಸಂಗತಿಯೇ.

ಮಾನ್ಯರೆ, ಈ ಲಕ್ಷಣಗಳಿಂದಾಗಿ ಈ ನಿರ್ಣಯವು ಪವಿತ್ರವಾದದ್ದು ಎಂದು ನಾನು ಹೇಳಿದೆ. ಹಿಂದೆ ಜನರು ತಮ್ಮ ಗುಲಾಮಗಿರಿಯ ಸಂಕೋಲೆಗಳನ್ನು ಕಳಚಿ ಹಾಕುತ್ತಿದ್ದಂತೆಯೇ ಇದೇ ರೀತಿಯ ಸನ್ನಿವೇಶಗಳಲ್ಲಿ ಮಾಡಿದ ಆ ಘೋಷಣೆಗಳ ಶ್ರೇಣಿಯಲ್ಲಿ ಹೆಗಲೆಣೆಯಾಗಿ ನಿಲ್ಲಲು ಅದು ಬದ್ಧವಾಗಿದೆ. ಇದು ಪವಿತ್ರವಾದದ್ದು ಅಷ್ಟೇ ಅಲ್ಲ ಶ್ರಮಸಾಧ್ಯವಾದದ್ದೂ ಆಗಿದೆ. ಡಾ ಜಯಕರ್ ಅವರು ಎತ್ತಿತೋರಿಸಿದ ಕಷ್ಟಗಳ ಕಾರಣದಿಂದಾಗಿ ಶ್ರಮಸಾಧ್ಯವಾದದ್ದಷ್ಟೇ ಅಲ್ಲ, ಅಲ್ಲಿ ದೂರದ ಇಂಗ್ಲೆಂಡಿನಲ್ಲಿರುವ ರಾಜನೀತಿಜ್ಞರ ಮನೋಭಾವದ ಕಾರಣದಿಂದಲೂ ಶ್ರಮಸಾಧ್ಯವಾಗಿದೆ. ನಾನು ಈಗಷ್ಟೇ ಹೇಳಿದಂತೆ, ಒಬ್ಬ ಆಡಳಿತಗಾರನಾಗಿ ನನ್ನ ವೈಯಕ್ತಿಕ ಅನುಭವದ ಪ್ರಕಾರ, ಭಾರತದ ಜನರಿಗೆ ಬ್ರಿಟಿಷರು ಶಾಂತಿಯುತವಾಗಿ ಅಧಿಕಾರದ ಹಸ್ತಾಂತರ ಮಾಡಲು ಮನಸ್ಸು ಮಾಡಿಲ್ಲ ಎಂದು ನಾನು ಭಾವಿಸುತ್ತೇನೆ. ಮೊನ್ನೆಯಷ್ಟೇ ಶ್ರೀ ಚರ್ಚಿಲ್ ಅವರ ಭಾಷಣವನ್ನು ನೀವು ಕೇಳಿದ್ದೀರಿ. ಆ ಮಹಾ ಸಾಮ್ರಾಜ್ಯವಾದಿಯಿಂದ ಪ್ರೋತ್ಸಾಹದ ಒಂದು ಮಾತೂ ಬರಲಿಲ್ಲ. ನಮ್ಮ ದೇಶದ ಇತಿಹಾಸದಲ್ಲಿ ಇಂತಹ ಒಂದು ಕಾಲಘಟ್ಟದಲ್ಲಿ, ಈ ನಾಡಿಗೆ ಒಂದು ಸಂವಿಧಾನವನ್ನು ಸೂಚಿಸಲು ನಾವೆಲ್ಲ ಇಷ್ಟು ಸಂಖ್ಯೆಯಲ್ಲಿ ಇಲ್ಲಿ ಸೇರಿರುವಾಗ ಪ್ರೋತ್ಸಾಹದ ಒಂದು ನುಡಿಯನ್ನು ಆಡುವ ಬದಲು ಅವರು ಮತ್ತೆ ತಮ್ಮ ಹಳೆಯ ಆಟವನ್ನೇ ಆರಂಭಿಸಿದ್ದಾರೆ. ಅವರು ಕಾಂಗ್ರೆಸ್ ಅನ್ನು ಕಟುವಾಗಿ ಟೀಕಿಸಿದ್ದಾರೆ, ಪಂಡಿತ್ ಜವಾಹರಲಾಲ್ ನೆಹರು ಅವರನ್ನು ಕಟುವಾಗಿ ಟೀಕಿಸಿದ್ದಾರೆ. ಮಧ್ಯಂತರ ಸರ್ಕಾರದತ್ತ ಪಂಡಿತ್

ಜವಾಹರಲಾಲ್ ನೆಹರು ಅವರ ಆಗಮನದಲ್ಲಿ ಅವರು ಬಿಹಾರದಲ್ಲಿನ ಮುಗ್ಧಜನರ ಹತ್ಯಾಕಾಂಡವನ್ನು ನೋಡುತ್ತಾರೆ. ಸಪ್ತಸಾಗರಗಳ ಆಚೆ ಇರುವ ಶ್ರೀ ಚರ್ಚಿಲ್ ಅವರಿಗೆ ನಾನು ಹೇಳುತ್ತೇನೆ: ಯಾರೋ ಆಸಕ್ತ ವ್ಯಕ್ತಿ ನಿಮಗೆ ಸುಳ್ಳು ಸಮಾಚಾರವನ್ನು ಒದಗಿಸಿದ್ದಾರೆ. ಅಂತಹ ಸುಳ್ಳಿನ ಉಗಮಕ್ಕೆ ನೀವು ಸ್ವಸಂತೋಷದ ಸಾಧನವಾಗಿದ್ದೀರಿ. ಬಿಹಾರ್ ಸರ್ಕಾರವು ತನ್ನ ಸೇನಾಬಲವನ್ನು ಪ್ರಯೋಗಿಸಲು ಒಂದು ಕ್ಷಣ ಕೂಡ ಹಿಂದೆ ಮುಂದೆ ನೋಡಲಿಲ್ಲ. ಆ ಪ್ರಾಂತ್ಯದಲ್ಲಿ ವಾಸಿಸುತ್ತಿದ್ದ ಲಕ್ಷಾಂತರ ಮುಸಲ್ಮಾನರಿಗೆ ರಕ್ಷಣೆ ನೀಡಲು ತನ್ನಲ್ಲಿ ಯಾವ ಸೇನಾಬಲವಿತ್ತೋ ಅದನ್ನು ಪ್ರಯೋಗಿಸಿತು. ಬಿಹಾರ್ ಸರ್ಕಾರವು ಒಂದು ಹೆಮ್ಮೆಯ ಸರ್ಕಾರ. ೧೯೩೫ರ ಭಾರತ ಸರ್ಕಾರದ ಕಾನೂನಿನ ಪ್ರಕಾರ ಅದು ನಿಯೋಜಿತವಾಗಿರುವವರೆಗೂ ಭಾರತ ಸರ್ಕಾರದ ನಿರಂಕುಶಾಜ್ಞೆಗಳನ್ನು ಸ್ವೀಕರಿಸುವುದಿಲ್ಲ. ಪಂಡಿತ್ ಜವಾಹರಲಾಲ್ ಅವರು ನಮ್ಮ ನಾಯಕರು ಆದ್ದರಿಂದ ಅವರು ಬಿಹಾರಕ್ಕೆ ಹೋದರು. ಅವರು ನಮಗೆ ಸ್ಫೂರ್ತಿಯ ಸೆಲೆ. ಬಿಹಾರ್ ಪ್ರಾಂತ್ಯದಲ್ಲಿ ಕೆಲದಿನಗಳ ಕಾಲ ಅವರು ನಡೆಸಿದ ಹುರುಪಿನಿಂದ ಕೂಡಿದ ಪ್ರವಾಸದ ಅವಧಿಯಲ್ಲಿ ತಮ್ಮ ಮನದ ಇಂಗಿತವನ್ನು ಜನರಿಗೆ ತಿಳಿಸಿದರು ಎಂದು ಶ್ರೀ ಚರ್ಚಿಲ್ ಅವರಿಗೆ ನಾನು ಹೇಳಬಹುದು. ಈ ದೇಶದ ಅತ್ಯುನ್ನತ ಅಧಿಕಾರಿ ಕೂಡ ಬಿಹಾರದಲ್ಲಿ ಸುವ್ಯವಸ್ಥೆಯನ್ನು ಸ್ಥಾಪಿಸಲಾಗಲಿಲ್ಲ. ಆದರೆ ಅಲ್ಪಾವಧಿಯಲ್ಲಿಯೇ ನಾವು ಅದನ್ನು ಸಾಧಿಸಿದೆವು ಎಂದು ನಾನು ಹೇಳುತ್ತೇನೆ. ಸುವ್ಯವಸ್ಥೆಯನ್ನು ಕ್ಷಿಪ್ರವಾಗಿ ಸ್ಥಾಪಿಸಲು ಸಾಧ್ಯವಾದದ್ದು ಬಿಹಾರ್ ಸರ್ಕಾರದ ಬಳಿ ಇದ್ದ ಸನೀನುಗಳಿಂದ ಅಲ್ಲ ಅಥವಾ ಭಾರತ ಸರ್ಕಾರವು ಅದಕ್ಕೆ ಒದಗಿದ ಸನೀನುಗಳಿಂದ ಅಲ್ಲ. ಪಂಡಿತ್ ನೆಹರು ಅವರ ಕ್ರಿಯಾಶೀಲ ವ್ಯಕ್ತಿತ್ವ, ಡಾ, ರಾಜೇಂದ್ರ ಅವರ ಪವಿತ್ರ ಉಪಸ್ಥಿತಿ ಮತ್ತು ಮಹಾತ್ಮರ ಆಮರಣಾಂತ ಉಪವಾಸದ ಘೋರ ಭೀತಿ ಬಿಹಾರದಲ್ಲಿ ಕ್ಷಿಪ್ರವಾಗಿ ಸುವ್ಯವಸ್ಥೆಯನ್ನು ಪುನಃ ಸ್ಥಾಪಿಸಿತು. ಶ್ರೀ ಚರ್ಚಿಲ್ ಅವರು ಅಂತಹ ಸುಳ್ಳುಗಳಿಗೆ ಚಲಾವಣೆ ಕೊಡುವ ಮೂಲಕ ದೊಡ್ಡ ಕುಚೋದ್ಯವನ್ನು ಮಾಡಿದ್ದಾರೆ. ನಾನು ನಿಮ್ಮ ಬಹಳ ಸಮಯ ತೆಗೆದುಕೊಂಡಿದ್ದೇನೆ. ಆದರೆ ನಾನು ನಿಮಗೆ ಹೇಳಬೇಕಾದ ಸಂಗತಿ ಎಂದರೆ ಈ ನಿರ್ಣಯವನ್ನು ಅಂಗೀಕರಿಸುವ ಮುನ್ನ ನಿಮ್ಮ ದಾರಿಯಲ್ಲಿ ಅಡ್ಡ ಬರಬಹುದಾದ ತೊಂದರೆಗಳನ್ನು ದೃಶ್ಯೀಕರಿಸಿಕೊಳ್ಳಲು ನೀವು ಪ್ರಯತ್ನ ಮಾಡಬೇಕು. ಒಬ್ಬ ವಕೀಲನ ದೃಷ್ಟಿಕೋನದಿಂದ ನಾನು ಈ ಮಂತ್ರಿಮಂಡಲದ ಘೋಷಣೆಯನ್ನು ಅಧ್ಯಯನ ಮಾಡಿಲ್ಲ. ವಕೀಲನ ದೃಷ್ಟಿಕೋನದಿಂದ ಅದರತ್ತ ನೋಡಲು ನಾನು ಧಿಕ್ಕರಿಸುತ್ತೇನೆ. ನನ್ನ ಜೀವನ ಪರ್ಯಂತ ನಾನು ಒಬ್ಬ ಯೋಧನಾಗಿದ್ದೇನೆ. ನಾನು ಅದರತ್ತ ಒಬ್ಬ ಹೋರಾಟಗಾರನ ದೃಷ್ಟಿಕೋನದಿಂದ ನೋಡಲು ಬಯಸುತ್ತೇನೆ. ಬ್ರಿಟಿಷ್ ರಾಜ್ಯನೀತಿಜ್ಞರ ಹೇಳಿಕೆಗಳು ಅಷ್ಟೇನು ಪ್ರಯೋಜನಕಾರಿಯಾಗಿಲ್ಲ. ಡಾ. ಜಯಕರ್ ಅವರು ನಮ್ಮ ಮುಂದೆ ನೇತಾಡಿಸಿದ ಕಷ್ಟಗಳ ಕಾರಣದಿಂದಲ್ಲ, ಬದಲಿಗೆ ಅಧಿಕಾರದಲ್ಲಿರುವವರು ನಮ್ಮ ಪಥದಲ್ಲಿ ಹುಟ್ಟಿಹಾಕಬಹುದಾದ ಕಷ್ಟಗಳ ಕಾರಣದಿಂದ ಅದು ಸಾಧ್ಯವಾಗಬಹುದು. ಈ ಸಂವಿಧಾನ ರಚನಾಸಭೆಯು ಒಂದು ದಿನ ೧೭೮೯ರಲ್ಲಿ ಫ್ರಾನ್ಸಿನ ಸಂವಿಧಾನ ರಚನಾಸಭೆಯು ಹೋದ ಹಾದಿಯಲ್ಲಿ ಸಾಗಬೇಕಾಗಿಬರಬಹುದು. ಆ ಕಾಲದ ದೊರೆ ಮತ್ತು ರಾಜನೀತಿಜ್ಞರ ನಿಲುವುಗಳ ಕಾರಣದಿಂದಾಗಿ ಅದು ಹಾಗೆ ಹೋಗಬೇಕಾಗಿ ಬಂದಿತ್ತು. ಆದ್ದರಿಂದ ನಾನು ಕುಳಿತುಕೊಳ್ಳುವ ಮೊದಲು ಈ ಸದನದ ಗೌರವಾನ್ವಿತ ಸದಸ್ಯರಿಗೆ ನೆನಪು ಮಾಡಲು ಬಯಸುವುದೇನೆಂದರೆ, ಈ ನಿರ್ಣಯದ ಪರವಾಗಿ ಮತ ಚಲಾಯಿಸಲು ಅವರು ನಿರ್ಧರಿಸುವ ಮೊದಲು, ಅವರ ನಿರ್ಧಾರವನ್ನು ಕಾರ್ಯರೂಪಕ್ಕೆ ತಂದಾಗ ಅವರು ಎದುರಿಸಬೇಕಾಗಿಬರಬಹುದಾದ ಕಷ್ಟಗಳನ್ನು ಮನಗಾಣಬೇಕು. ನಾವು ಈ ನಿರ್ಣಯವನ್ನು ಅಂಗೀಕರಿಸಿದರೆ ಅದೇ ಸಮಯದಲ್ಲಿ ತನ್ನ ಭಾರತೀಯ ಅಸ್ತಿತ್ವಕ್ಕೆ ೧೯೩೫ರ ಭಾರತ ಸರ್ಕಾರದ ಕಾಯಿದೆಗೆ ಋಣಿಯಾಗಿರುವ ರಾಜಕೀಯ ಭವ್ಯ ಸೌಧವನ್ನು ಕೆಳಗುರುಳಿಸಲು ದೃಢ ನಿರ್ಧಾರಮಾಡಬೇಕು– ಅದು ಸಾಂವಿಧಾನಿಕ ಗಾರುಡಿಯ ಒಂದು ಸ್ಮಾರಕ –ನಮ್ಮ ಹಾದಿಯಲ್ಲಿ ಯಾವುದೇ ಕಷ್ಟಗಳು ಬರಲಿ, ಈ ನಿರ್ಣಯವು

ಕಲ್ಪಿಸಿಕೊಳ್ಳುವಂತಹ ಮಾದರಿಯ ಗಣರಾಜ್ಯವನ್ನು ಅದರ ಮೇಲೆ ಕಟ್ಟಬೇಕು.

**ಮಾನ್ಯ ಅಧ್ಯಕ್ಷರು :** ಈಗಾಗಲೇ ಐದು ಗಂಟೆ ಮೀರಿತು.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :** ಐದು ಘಂಟೆಗೆ ಸರ್ವಾನುಮತವಿದೆ.

**ಮಾನ್ಯ ಅಧ್ಯಕ್ಷರು :** ಐದೂವರೆಯ ಪರವಾಗಿರುವವರು ದಯವಿಟ್ಟು ಕೈ ಎತ್ತಿ.....

ಈಗ ಐದೂವರೆಯ ವಿರೋಧವಾಗಿರುವವರು ಕೈ ಎತ್ತಿ.

**ಮಾನ್ಯ ಅಧ್ಯಕ್ಷರು :** ಐದು ಗಂಟೆಯವರು ಗೆದ್ದರು. ಸದನವನ್ನು ನಾಳೆ ಬೆಳಗ್ಗೆ ಹನ್ನೊಂದು ಗಂಟೆಗೆ ಮುಂದೂಡಲಾಗಿದೆ.

ಗೌರವಾನ್ವಿತ ಸದಸ್ಯರು ಐದೂವರೆಯವರೆಗೂ ಕುಳಿತುಕೊಳ್ಳಲು ಬಯಸುತ್ತಾರೆಯೇ ಎಂದು ನಾನು ತಿಳಿಯಬಯಸುತ್ತೇನೆ.

**ಅನೇಕ ಗೌರವಾನ್ವಿತ ಸದಸ್ಯರು :** ಐದೂವರೆ

**ಮಾನ್ಯ ಅಧ್ಯಕ್ಷರು :** ಅಭಿಪ್ರಾಯದಲ್ಲಿ ಒಮ್ಮತವಿಲ್ಲ.

ಅನಂತರ ಸಭೆಯನ್ನು ಮಂಗಳವಾರ, ೧೭ನೆಯ ಡಿಸೆಂಬರ್, ೧೯೪೬ರ ಬೆಳಗ್ಗೆ ಹನ್ನೊಂದು ಗಂಟೆಗೆ ಮುಂದೂಡಲಾಯಿತು.